
ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 10 | ಸಂಚಿಕೆ 14 | ಪುಟ 16 | ಏಪ್ರಿಲ್ 3, 2016 | ರೂ. 10/-

web: www.janashakthi.co.in e-mail : js_weekly@yahoo.com





ದುಡಿವ ಜನರ ನಿರೀಕ್ಷೆ ಮುಟ್ಟದ ಬಜೆಟ್

ಎಲ್ಲೆಡೆ ಮೊಳಗಿದ ಆಜಾದಿ ಘೋಷಣೆಗಳು





ಅಘೋಷಿತ ತುರ್ತು ಪರಿಸ್ಥಿತಿ – ಹೈದರಾಬಾದ್ ವಿ.ವಿ.

- ಖೋಟಾ ರಾಷ್ಟ್ರೀಯವಾದದ ಕೇಕೆ
- ಪ್ರೀತ್ಸೋದ್ ತಪ್ಪಾ?–ಲಕ್ಕುಂಡಿ ದಲಿತರ ಪ್ರಶ್ನೆ
- ಜಾರ್ಖಂಡಿನಲ್ಲಿ ಇನ್ನೊಂದು ದಾದ್ರಿ

ಹೈದರಾಬಾದ್ ವಿವಿಯಲ್ಲಿ ಪೋಲೀಸ್ ದಾಳಿ–ದಬ್ಬಾಳಿಕೆ
ತೆಲಂಗಾಣ ಮುಖ್ಯಮಂತ್ರಿಗಳಿಗೆ ಸೀತಾರಾಮ್ ಯೆಚೂರಿ ಪತ್ರ

ರೋಹಿತ್ ವೆಮುಲರ ಸಾಂಸ್ಥಿಕ ಕೊಲೆಯಿಂದಾಗಿ ಉದ್ವಿಗ್ನವಾಗಿದ್ದ ಹೈದರಾಬಾದ್ ವಿವಿ ಕ್ಯಾಂಪಸ್‌ನ ವಾತಾವರಣವನ್ನು ನಿಭಾಯಿಸಲಾರದೆ ಅನಿರ್ದಿಷ್ಟ ರಜೆಯಲ್ಲಿ ಹೋದ ಉಪಕುಲಪತಿ ಅಪ್ಪಾರಾವ್ ಪೋದಿಲೆ ಇದ್ದಕ್ಕಿದ್ದಂತೆ ಮಾರ್ಚ್ 22 ರಂದು ಹಾಜರಾಗಿ ಅಲ್ಲಿ ಮತ್ತೆ ವಾತಾವರಣ ಪ್ರಕ್ಷುಬ್ಧಗೊಂಡಿದೆ.

ರೋಹಿತ್ ಸಾವಿಗೆ ಕಾರಣರಾಗಿದ್ದಾರೆಂಬ ಜಾಮೀನು ಇಲ್ಲದ ಕೇಸ್ ಇರುವ ವ್ಯಕ್ತಿಯ ಮೇಲೆ ಇನ್ನೂ ಕಾನೂನು ಕ್ರಮ ತಗೊಂಡಿಲ್ಲ ಮಾತ್ರವಲ್ಲ, ಆತ ಇದ್ದಕ್ಕಿದ್ದಂತೆ ಪ್ರತ್ಯಕ್ಷನಾಗಿರುವ ಸುದ್ದಿ ಕೇಳಿದ ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು. ಕ್ಷಿಪ್ರ ಪೋಲೀಸ್ ಕಾರ್ಯಾಚರಣೆ ಪಡೆಯ ಪೋಲೀಸ್ ಕರೆಸಿ ವಿದ್ಯಾರ್ಥಿಗಳ ಮೇಲೆ ದಾಳಿ ಮಾಡಲಾಯಿತು. 30ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಪೋಲೀಸರು ಕರೆದೊಯ್ದಿದ್ದಾರೆ ಎನ್ನಲಾಗಿದೆ.

ಅವರ ಗೈರು ಹಾಜರಿಯಲ್ಲಿ ವಿವಿ ಯ ಆಡಳಿತ ನೋಡಿಕೊಳ್ಳುತ್ತಿದ್ದವರಿಗೂ ಅವರು ಬರುವ ಸೂಚನೆ ಕೊಟ್ಟಿರಲಿಲ್ಲ. ಆದರೆ ಉಪಕುಪತಿಗಳ ಹಾಜರಿ ಪೂರ್ವಯೋಜಿತವಾಗಿತ್ತು ಎಂಬುದಕ್ಕೆ ಪುರಾವೆಗಳು ದೊರೆತಿವೆ ಎಂದು ಸಾಮಾಜಿಕ ನ್ಯಾಯದ ಜಂಟಿ ಕ್ರಿಯಾ ಸಮಿತಿ ಹೇಳಿದೆ.

ಆಪಾದನೆಗೊಳಗಾಗಿರುವ ಉಪಕುಲಪತಿಗಳು ಹಾಜರಾದ ಕೂಡಲೇ ಮಾಡಿದ ಮೊದಲನೇ ಕೆಲಸವೆಂದರೆ ಮಾರ್ಚ್ 24ರಂದು ನಡೆಯಲಿದ್ದ ಅಕಡೆಮಿಕ್ ಕೌನ್ಸಿಲ್‌ನ ಸಭೆಯನ್ನು ಮುಂದೂಡಿದ್ದು . ಈ ಸಭೆಯಲ್ಲಿ ಕ್ಯಾಂಪಸ್‌ನಲ್ಲಿ ತಾರತಮ್ಯ–ವಿರೋಧಿ ಸಮಿತಿ ರಚಿಸುವುದು, ವಿವಿಯ ವಿವಿಧ ಸಮಿತಿಗಳಲ್ಲಿ ಎಸ್/ಎಸ್‌ಟಿ ವಿಭಾಗಗಳಿಗೆ ಸೂಕ್ತ ಪ್ರಾತಿನಿಧ್ಯ ಕೊಡುವುದು, ಎನ್‌ಇಟಿಯೇತರ ಫೆಲೋಶಿಪ್‌ಗಳನ್ನು 8000 ರೂ.ನಿಂದ ಜೂನಿಯರ್ ರಿಸರ್ಚ್ ಫೆಲೋಶಿಪ್‌ಗೆ ಸಮನಾಗಿ 25,000 ರೂ. ಗೇರಿಸುವುದು ಮುಂತಾದವುಗಳನ್ನು ಚರ್ಚಿಸುವ ಅಜೆಂಡಾ ಇತ್ತು. ಈ ಕ್ರಮಗಳು ಜಾರಿಗೆ ಬರಬಾರದು ಎಂಬುದಕ್ಕಾಗಿಯೇ ಆತ 'ಅನಿರ್ದಿಷ್ಟ ರಜಾದಿಂದ' ಮರಳಿ ಬಂದಂತೆ ಕಾಣುತ್ತದೆ.



ವಿದ್ಯಾರ್ಥಿಗಳ ಆಕ್ರೋಶಕ್ಕೆ ಪ್ರತೀಕಾರವೆಂಬಂತೆ ವಿವಿ ಕ್ಯಾಂಪಸ್‌ನಲ್ಲಿ ತುರ್ತು ಪರಿಸ್ಥಿತಿ ಯಂತಹ ವಾತಾವರಣ ಸೃಷ್ಟಿ ಮಾಡಲಾಗಿದೆ ಎಂದು ವಿದ್ಯಾರ್ಥಿಗಳು ಹೇಳುತ್ತಿದ್ದಾರೆ. ಹಾಸ್ಟೆಲ್ ಮೆಸ್‌ಗಳನ್ನು ಮುಚ್ಚಲಾಯಿತು, ನೀರು, ವಿದ್ಯುತ್, ವೈಫೈ, ಇಂಟರ್‌ನೆಟ್ ಕಡಿತ ಮಾಡಲಾಯಿತು. ಕುಡಿಯುವ ನೀರೂ ಸಿಗದಂತೆ ಮಾಡಲಾಯಿತು. ವಿದ್ಯಾರ್ಥಿಗಳ ನೆರವಿಗೆ ಹೊರಗಿನವರು ಬರಲು ಅವಕಾಶ ಕೊಡಲಿಲ್ಲ. ವಿವಿ ವಿದ್ಯಾರ್ಥಿಗಳ ಜಂಟಿ ಕ್ರಿಯಾ ಸಮಿತಿಯ ಆಹ್ವಾನದ ಮೇರೆಗೆ ಬಂದ ಕನ್ಹೈಯ ಕುಮಾರ್‌ಗೂ, ರೋಹಿತ್ ತಾಯಿಗೂ ಪ್ರವೇಶ ನಿರಾಕರಿಸಲಾಯಿತು.

ಸಾಲದ್ದಕ್ಕೆ ಪೋಲೀಸರ ದಬ್ಬಾಳಿಕೆ.

ಪರಿಶಿಷ್ಟ ಜಾತಿಗಳ ಮೇಲೆ ಅತ್ಯಾಚಾರ ಕಾಯ್ದೆಯ ಅಡಿಯಲ್ಲಿ ಪ್ರಮುಖ ಆಪಾದಿತರಾಗಿರುವ ಉಪಕುಲಪತಿಯ ಮೇಲೆ ಕ್ರಮ ಕೈಗೊಳ್ಳುವ ಬದಲು ಪೋಲೀಸರು ವಿದ್ಯಾರ್ಥಿಗಳನ್ನೇ ಬಂಧಿಸಿ ಒಯ್ದಿದ್ದಾರೆ. ಈ ಬಗ್ಗೆ ತೆಲಂಗಾಣ ಮುಖ್ಯಮಂತ್ರಿಗಳನ್ನು ಭೇಟಿ ಮಾಡಬೇಕೆಂಬ ಸೀತಾರಾಮ್ ಯೆಚೂರಿಯವರ ಕೋರಿಕೆಗೆ ಮನ್ನಣೆಯೂ ಸಿಗಲಿಲ್ಲ. ಇದರಿಂದ ಬೇಸರಗೊಂಡ ಯೆಚೂರಿಯವರು ಮಾರ್ಚ್ 23ರಂದು ಒಂದು ಕಟುವಾದ ಪತ್ರ ಬರೆದಿದ್ದಾರೆ.

"ನೀವೇ ಸಾರಿ ಹೇಳಿರುವ ಭರವಸೆಗಳ ಪ್ರಕಾರ ಬಂಧಿತ ವಿದ್ಯಾರ್ಥಿಗಳನ್ನೆಲ್ಲ ತಕ್ಷಣ ಬಿಡುಗಡೆ ಮಾಡಬೇಕು, ಅವರ ವಿರುದ್ಧ ಹಾಕಿರುವ ಕೇಸುಗಳನ್ನು ಕೈಬಿಡಬೇಕು ಮತ್ತು ತಕ್ಷಣವೇ ಉಪಕುಲಪತಿಗಳ ಮೇಲೆ ದಾಖಲಾಗಿರುವ ಕೇಸಿನಲ್ಲಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇದು ಕೇಂದ್ರೀಯ ವಿಶ್ವವಿದ್ಯಾಲಯ ವಾದ್ದರಿಂದ ಆತನ ನೇಮಕವನ್ನು ತಕ್ಷಣವೇ ರದ್ದು ಮಾಡಬೇಕು" ಎಂದು ಯೆಚೂರಿ ತಮ್ಮ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಮಹಿಳಾ ಸಂಘಟನೆಗಳ ಖಂಡನೆ

ಅಖಿಲ ಭಾರತ ಜನವಾದಿ ಮಹಿಳಾ ಸಂಘ ಸೇರಿದಂತೆ ಏಳು ಮಹಿಳಾ ಸಂಘಟನೆಗಳು ಹೈದರಾಬಾದ್ ವಿ ವಿ ಕ್ಯಾಂಪಸ್‌ನಲ್ಲಿ ಪೋಲೀಸ್ ದಬ್ಬಾಳಿಕೆಯನ್ನು ಖಂಡಿಸಿವೆ. ಮುಖ್ಯವಾಗಿ ವಿದ್ಯಾರ್ಥಿನಿಯರ ಮೇಲೆ ಗುರಿಯಿಟ್ಟಿದ್ದನ್ನು, ಅವರ ಮೇಲೆ ದೈಹಿಕವಾಗಿ ಮತ್ತು ಅವಾಚ್ಯ ಮಾತುಗಳಿಂದ ದಾಳಿ ಮಾಡಿರುವುದನ್ನು ಅವು ಬಲವಾಗಿ ಖಂಡಿಸಿವೆ. ಪೋಲೀಸರು 'ಹುಡುಗಿಯರಂತೆ ವರ್ತಿಸಿ' ಎಂದು ಹೀಯಾಳಿಸಿದ್ದಾರೆ, ಮಾನಭಂಗ ಮಾಡುವ, ತುಂಡು ತುಂಡು ಮಾಡುವ ಬೆದರಿಕೆ ಒಡ್ಡಿದ್ದಾರೆ ಎಂಬ ಆಪಾದನೆಗಳಿವೆ.

ಮಾನವ ಹಕ್ಕುಗಳ ಈ ಅಮಾನುಷ ಉಲ್ಲಂಘನೆಯ ಮೂಕಪ್ರೇಕ್ಷಕನಾಗಿರುವ ಒಬ್ಬ ಕುಲಪತಿಗೆ ಆ ಹುದ್ದೆಯಲ್ಲಿ ಮುಂದುವರೆಯುವ ಹಕ್ಕು ಇಲ್ಲ ಎಂದು ಈ ಮಹಿಳಾ ಸಂಘಟನೆಗಳು ಕಟುವಾಗಿ ಹೇಳಿವೆ.

ಗೋರಕ್ಷಣೆಯ ಹೆಸರಲ್ಲಿ ಮತ್ತೆರಡು ಜಘನ್ಯ ಹತ್ಯೆಗಳು

ಝಾರ್ಖಂಡ್ ರಾಜ್ಯದ ಲತೇಹರ್ ಜಿಲ್ಲೆಯ ಬಾಲುಮಠ ಎಂಬಲ್ಲಿ ಮಾರ್ಚ್ 18ರಂದು ಇಬ್ಬರು ಯುವ ಪಶು ವ್ಯಾಪಾರಿಗಳನ್ನು ಚಚ್ಚಿ ಕೊಂದು ನೇಣು ಹಾಕಿರುವ ಅಮಾನುಷ ಘಟನೆ ವರದಿಯಾಗಿದೆ.

ನವಾಡ ಎಂಬ ಗ್ರಾಮದ 32 ವರ್ಷದ ಮಜ್ಲುಮ್ ಅನ್ಸಾರಿ ಮತ್ತು ಅರಹರ ಗ್ರಾಮದ ಕೇವಲ 12ವರ್ಷದ ಬಾಲಕ ಇಮ್ತಿಯಾಜ್ ಖಾನ್ ಇವರಿಬ್ಬರು ಎಮ್ಮೆಗಳನ್ನು ಹತ್ತಿರದ ಪಶು ಸಂತೆಗೆ ಒಯ್ಯುತ್ತಿದ್ದಾಗ ಗೋರಕ್ಷಕರೆಂದು ಹೇಳಿಕೊಳ್ಳುವ ಗುಂಪೊಂದು ಹಲ್ಲೆ ನೀಡಿ ಹೊಡೆದು ಕೊಂದು ಮರಕ್ಕೆ ನೇತು ಹಾಕಿತು.

ರಾಜ್ಯದ ರಾಜಧಾನಿಯಿಂದ ಕೇವಲ 100 ಕಿ.ಮೀ. ಇಳಗೇ ನಡೆದಿರುವ ಈ ಭೀಕರ ಘಟನೆಯನ್ನು ಬಲವಾಗಿ ಖಂಡಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ದಾದ್ರಿಯಲ್ಲಿ ಮಹಮ್ಮದ್ ಅಖ್ಲಾಕ್‌ರನ್ನು ಗೋಮಾಂಸದ ಸುಳ್ಳು ನೆಪದಲ್ಲಿ ಕೊಮದು ಹಾಕಿದ ಘಟನೆಯನ್ನು ಇದು ನೆನಪಿಸುತ್ತದೆ ಎಂದಿದೆ.

ಇಲ್ಲಿ ಮುಸ್ಲಿಮ್ ಪಶು ವ್ಯಾಪಾರಿಗಳ ಮೇಲೆ ಗುರಿಯಿಟ್ಟಿರುವುದು ಇದು ಮೊದಲ ಬಾರಿಯೇನಲ್ಲ ಎನ್ನಲಾಗುತ್ತಿದೆ. ಈ ಬಗ್ಗೆ ಸ್ಥಳೀಯರು ಹಲವು ಬಾರಿ ಪ್ರತಿಭಟಿಸಿದರೂ ಪೋಲೀಸರು ಮತ್ತು ಇಲ್ಲಿಯ ಬಿಜೆಪಿ ಸರಕಾರ ಅವರ ರಕ್ಷಣೆಗೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಬದಲಿಗೆ ಹಿಂದುತ್ವ ಸಂಗಟನೆಗಳು ಸತತ ಕೋಮುವಾದಿ ಪ್ರಚಾರ ನಡೆಸಲು ಅವಕಾಶ ನೀಡಲಾಯಿತು. ಇದರ ಪರಿಣಾಮವೇ ಈ ಅಮಾನುಷ ಘಟನೆ.

ಝಾರ್ಖಂಡ್ ಪೋಲೀಸ್ ಕೂಡಲೇ ತಪ್ಪಿತಸ್ಥರನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಬೇಕು, ಝಾರ್ಖಂಡ್‌ನ ಬಿಜೆಪಿ ಸರಕಾರ ಇಂತಹ ಕ್ರಿಮಿನಲ್ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಹಿಡಿದು ಹಾಕಿ ಅಲ್ಪಸಂಖ್ಯಾತರಿಗೆ ರಕ್ಷಣೆ ಒದಗಿಸಲು ಕರ್ತವ್ಯಬದ್ಧವಾಗಿದೆ ಎಎಮದು ಸಿಪಿಐ(ಎಂ) ಪೊಲಿಟ್‌ಬ್ಯುರೊ ನೆನಪಿಸಿದೆ.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ರಾಜ್ಯ ಸಿಪಿಐ(ಎಂ) ಮುಖಂಡರೊಂದಿಗೆ ಬಾಲು ಮಠಕ್ಕೆ ಹೋಗಿ ಕೊಲೆಗೀಡಾದವರ ಕುಟುಂಬಗಳ ಸದಸ್ಯರನ್ನು ಭೇಟಿ ಮಾಡಿ ಮಾಹಿತಿಗಳನ್ನು ಸಂಗ್ರಹಿಸಿ ರಾಜ್ಯದ ಮುಖ್ಯಮಂತ್ರಿಗಳು ತಕ್ಷಣವೇ ಇದರಲ್ಲಿ ಮಧ್ಯಪ್ರವೇಶಿಸಿ ಮಜ್ಲುಮ್ ಮತ್ತು ಇಮ್ತಿಯಾಝ್‌ಗೆ ನ್ಯಯ ದೊರಕಿಸಿ ಕೊಡಬೇಕು ಎಂದು ಆಗ್ರಹಿಸುವ ಒಂದು ಮನವಿಯನ್ನು ಸಲ್ಲಿಸಿದ್ದಾರೆ.

ಇಲ್ಲಿಯ ಪೋಲೀಸರು ದುರುದ್ದೇಶ ಪೂರ್ವಕವಾಗಿಯೇ, ಇದೊಂದು ದರೋಡೆ, ಇದರಲ್ಲಿ ವೈಯಕ್ತಿಕ ದ್ವೇಷದ ಅಂಶವೂ ಇದೆ ಎಂದು ನಂಬಿಸಲು ಪ್ರಯತ್ನಿಸುತ್ತಿದ್ದಾರೆ. ಚಂದ್ವಾ ಪೋಲೀಸ್ ಠಾಣೆಯ ಮುಖ್ಯಸ್ಥ ಕೊಎಯಾದವರ ಕುಟುಂಬಗಳ ವರ ಬಗ್ಗೆ ಕೋಮುವಿಷ ಪೂರಿತ ಮಾತುಗಳನ್ನಾಡಿರುವುದು ಇದಕ್ಕೆ ಸಾಕ್ಷಿ ಎಂದು ಸಿಪಿಐ(ಎಂ) ನಿಯೋಗ ಹೇಳಿದೆ.

ಘಟನೆ ನಡೆದು ಮೂರು ದಿನಗಳಾದರೂ ಪ್ರಮುಖ ಆರೋಪಿಯನ್ನು ಬಂಧಿಸಲಿಲ್ಲ, ಏಕೆಂದರೆ ಆತ ಇಲ್ಲಿಯ ಗೋರಕ್ಷಣೆಯ ಹೆಸರಿನ ದುರ್ವ್ಯವಹಾರಗಳಲ್ಲಿ ತೊಡಗಿದ್ದು ಅಧಿಕಾರ ವಲಯಗಳಲ್ಲಿ ಬಹಳ ಸಂಪರ್ಕಗಳನ್ನು ಹೊಂದಿದ್ದಾನೆ ಎನ್ನಲಾಗಿದೆ.

ಬುಡಕಟ್ಟು ಸರಪಂಚರನ್ನು ಹೊಂದಿರುವ ಈ ಎರಡೂ ಹಳ್ಳಿಗಳಲ್ಲಿ ಕೋಮು ಸೆಳೆತದ ಉದಾಹರಣೆಗಳೇನೂ ಇಲ್ಲ. ಆದರೆ ಕಳೆದೆರಡು ವರ್ಷಗಳಿಂದ ಈ ಪ್ರದೇಶದಲ್ಲಿ ಹಿಂದುತ್ವ ಸಂಘಟನೆಗಳು ಕೋಮುಪ್ರಚಾರದಲ್ಲಿ ತೊಡಗಿದ್ದು ಅಲ್ಪಸಂಖ್ಯಾತ ಕೋಮಿನವರ ಮೇಲೆ ಗುರಿಯಿಟ್ಟಿವೆ. ಇಬ್ಬರನ್ನು ಕೊಂದು ನೇಣು ಹಾಕಿರುವುದು ಆ ಕೋಮಿನ ಇತರರಿಗೆ 'ಪಾಠ'ವಾಗಲಿ ಎಂದು ಬೆದರಿಸಲಿಕ್ಕಾಗಿ ಎಂಬುದ ಸ್ಪಷ್ಟ ಎಂದಿರುವ ಸಿಪಿಐ(ಎಂ) ನಿಯೋಗ ರಾಜ್ಯದ ಮುಖ್ಯಮಂತ್ರಿಗಳು ಇಂತಹ ಕ್ರಿಮಿನಲ್‌ಗಳ ವಿರುದ್ಧ ಬಲವಾದ ಸಂದೇಶ ನೀಡುವ ಬದಲು ಈ ಭೀಕರ ಘಟನೆಯನ್ನು 'ಹಸುಗಳ ಕಳ್ಳ ಸಾಗಣೆ'ಯೊಂದಿಗೆ ತಳುಕು ಹಾಕಿರುವುದು ಅತ್ಯಂತ ದುರದೃಷ್ಟಕರ ಎಂದು ಖೇದ ವ್ಯಕ್ತ ಪಡಿಸಿದೆ.

ಕ್ರಿಮಿನಲ್‌ಗಳನ್ನು ರಕ್ಷಿಸುವ ಇಂತಹ ಬೇಜವಾಬ್ದಾರಿ ಹೇಳಿಕೆಗಳನ್ನು ನಿಲ್ಲಿಸಬೇಕು, ಇದರ ತನಿಖೆಯನ್ನು ಒಂದು ಕೇಂದ್ರ ತನಿಖೆಗೆ ಒಪ್ಪಿಸಬೇಕು ಎಂದು ಸಿಪಿಐ(ಎಂ) ಮನವಿ ಪತ್ರದಲ್ಲಿ ಆಗ್ರಹಿಸಲಾಗಿದೆ.

ಮಜ್ಲುಮ್ ಅನ್ಸಾರಿಯ ಹೆಂಡತಿ ಸಾಯಿರಾ ಬೀಬಿ ಐದು ಮಕ್ಕಳನ್ನು ಏಕಾಂಗಿಯಾಗಿ ಸಾಕಬೇಕಾಗಿದೆ. ಇಮ್ತಿಯಾಜ್‌ನ ತಂದೆ ಆಝಾದ್ ಖಾನ್ ಮೂರು ವರ್ಷಗಳ ಹಿಂದೆ ಅಪಘಾತಕ್ಕೊಳಗಾಗಿ ಹೆಚ್ಚು ನಡೆದಾಡುವ ಸ್ಥಿತಿಯಲ್ಲಿಲ್ಲ. ಆದ್ದರಿಂದ ಸಾಯಿರಾ ಬೀಬಿ ಮತ್ತು ಇಮ್ತಿಯಾಜ್‌ನ ತಾಯಿ ನಜ್ಮಾ ಬೀಬಿ ಅಥವ ತಂದೆಗೆ ಸರಕಾರಿ ಉದ್ಯೋಗ ಕೊಡಿಸಬೇಕು ಮತ್ತು ಎರಡೂ ಕುಟುಂಬಗಳಿಗೆ ಪರಿಹಾರ ಒದಗಿಸಬೇಕು ಎಂದು ಸಿಪಿಐ(ಎಂ) ನಿಯೋಗ ಮುಖ್ಯಮಂತ್ರಿಗಳನ್ನು ಆಗ್ರಹಿಸುತ್ತ ಗೋರಕ್ಷಣೆಯ ಹೆಸರಿನಲ್ಲಿ ಕೋಮುವಾದಿ ಚಟುವಟಿಕೆಗಳನ್ನು ತಡೆಯಲು ಕಟ್ಟು ನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೋರಿದೆ.


ಮಜ್ಲುಮ್ ಅನ್ಸಾರಿಯ ಹೆಂಡತಿ ಸಾಯಿರಾ ಬೀಬಿ ಮತ್ತು ಅವರ ಕುಟುಂಬದೊಂದಿಗೆ ಬೃಂದಾ ಕಾರಟ್

ದೇಶಪ್ರೇಮ ಎಂದರೆ ಭಾರತೀಯ ಜನತೆಯ ಹಿತಗಳನ್ನು ಎತ್ತಿ ಹಿಡಿಯುವುದು: ರಾಷ್ಟ್ರೀಯ ಯುವಜನ ಸಮಾವೇಶದ ಘೋಷಣೆ

ನವದೆಹಲಿಯಲ್ಲಿ ಮಾರ್ಚ್ 21ರಂದು ನಡೆದ ರಾಷ್ಟ್ರಮಟ್ಟದ ಯುವಜನ ಸಮಾವೇಶ ಆರೆಸ್ಸೆಸ್‌ನದ್ದು ಖೋಟಾ ರಾಷ್ಟ್ರೀಯವಾದ, ಅದನ್ನು ದೇಶದ ಯುವಜನರು ತಿರಸ್ಕರಿಸುತ್ತಾರೆ ಎಂದು ಸಾರಿದೆ.

ಆರೆಸ್ಸೆಸ್ ಪ್ರಾಯೋಜಿತ ಮೋದಿ ಸರಕಾರ ವಿದೇಶಿ ಮತ್ತು ದೇಶಿ ಬಂಡವಾಳ ದೇಶವನ್ನು ಲೂಟಿ ಹೊಡೆಯಲು ಬಿಡುತ್ತಿದೆ. ನಮ್ಮ ದೇಶದ ಸಾವಿರಾರು ಕೋಟಿ ರೂ.ಗಳನ್ನು ಲೂಟಿ ಮಾಡಿರುವ ವಿಜಯ ಮಲ್ಯನಂತಹ ಕ್ರಿಮಿನಲ್‌ಗಳು ಸುರಕ್ಷಿತವಾಗಿ ದೇಶ ಬಿಟ್ಟು ಹೋಗಲು ಅವಕಾಶ ಒದಗಿಸಿದೆ. ನಿಜವಾದ ದೇಶದ್ರೋಹಿಗಳು ಯಾರು, ರಾಷ್ಟ್ರವಿರೋಧಿಗಳು ಯಾರು ಎಂಬುದು ನಮ್ಮ ದೇಶದ ಯುವಜನತೆಗೆ ಅರಿವಾಗಿದೆ. ದೇಶದ ಯುವಜನತೆ ಭಗತ್‌ಸಿಂಗ್ ಮತ್ತು ಆತನ ಹುತಾತ್ಮ ಸಂಗಾತಿಗಳ ಪರಂಪರೆಯನ್ನು ಮುಂದೊಯ್ಯುತ್ತಾರೆ.

ದೇಶದ ಯುವಜನತೆಗೆ ದೇಶಪ್ರೇಮ ಎಂದರೆ ಭಾರತೀಯ ಜನತೆಯ ಹಿತಗಳನ್ನು ಎತ್ತಿ ಹಿಡಿಯುವುದು ಮತ್ತು ಒಂದು ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಗಣರಾಜ್ಯದ ವಿಚಾರವನ್ನು ಕಾಪಾಡಿಕೊಳ್ಳುವುದು ಎಂದಿರುವ ಈ ಯುವಜನ ಸಮಾವೇಶ ನಮ್ಮ ತಾಯ್ನಾಡಿನ ಮೇಲೆ ನಡೆಯುತ್ತಿರುವ ಆರೆಸ್ಸೆಸ್ ಪ್ರಾಯೋಜಿತ ದಾಳಿಯನ್ನು ಐಕ್ಯತೆಯಿಂದ ಹಿಮ್ಮೆಟ್ಟಿಸಬೇಕು ಎಂದು ದೇಶದ ಎಲ್ಲ ಪ್ರಗತಿಶೀಲ, ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದಿ ಯುವಜನರಿಗೆ ಕರೆ ನೀಡಿದೆ.

ಡಿವೈಎಫ್ಐ, ಎಐವೈಎಫ್, ಆರ್‌ವೈಎಫ್, ಎಐವೈಎಲ್, ಆರ್‌ವೈಎ, ಆರ್‌ಜೆಡಿ ಯುವ ವಿಭಾಗ, ಜೆಡಿಯು ಯುವವಿಭಾಗ, ಎನ್‌ವೈಸಿ, ಎಂಡಿಎಂಕೆ ಯುವ ವಿಭಾಗ, ವಿಸಿಕೆ ಯುವ ವಿಭಾಗ ಮತ್ತು ಹೆಚ್‌ಎನ್‌ಇಎಸ್ ಈ 13 ಯುವಜನ ಸಂಘಟನೆಗಳು ಈ ಸಮಾವೇಶವನ್ನು ಏರ್ಪಡಿಸಿದ್ದವು.

ದಲಿತ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೆಮುಲರ ಸಾಂಸ್ಥಿಕ ಕೊಲೆಗೆ ಕಾರಣರಾದ ಎಲ್ಲರನ್ನೂ–ಸುಳ್ಳು ದೂರು ನೀಡಿದ ಎಬಿವಿಪಿ ಮುಖಂಡರು, ವಿವಿ ಆಡಳಿತ ಮತ್ತು ಕೇಂದ್ರ ಮಂತ್ರಿಗಳನ್ನು ಶಿಕ್ಷಿಸಬೇಕು ಎಂದು ಯುವಜನರ ಈ ಜಂಟಿ ವೇದಿಕೆ ಆಗ್ರಹಿಸಿದೆ. ಅದೇ ರೀತಿಯಲ್ಲಿ ಜೆಎನ್‌ಯು ವಿದ್ಯಾರ್ಥಿಗಳ ಮೇಲೆ ಹಾಕಿರುವ ರಾಜದ್ರೋಹದ ಕೇಸುಗಳನ್ನು ಕೈಬಿಡಬೇಕು, ಜೆಎನ್‌ಯು ಆಡಳಿತ ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಕಿರುಕುಳಗಳನ್ನು ನಿಲ್ಲಿಸಬೇಕು ಮತ್ತು ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಮಾಧ್ಯಮಗಳವರ ಮೇಲೆ ದಾಳಿ ಮಾಡಿದ ರೌಡಿ ವಕೀಲರ ಮೇಲ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ದುಡಿಯುವ ಜನರಿಗೆ ಬಜೆಟಿನಲ್ಲಿ ಏನೂ ಇಲ್ಲ

ಸಂಪಾದಕೀಯ

ಸಿದ್ದರಾಮಯ್ಯ ಮಂಡಿಸಿದ 11ನೇ ಬಜೆಟನ್ನು ಮಾಧ್ಯಮಗಳು ಹಲವು ರೀತಿಯಲ್ಲಿ ವಿಶ್ಲೇಷಿಸಿವೆ. ಹೆಚ್ಚಾಗಿ ಸರಕಾರ ಬಿಡುಗಡೆ ಮಾಡಿದ 'ಹೈ ಲೈಟ್ಸ್'ನ್ನು ಪ್ರಸ್ತುತ ಪಡಿಸಿ ಅದಕ್ಕೆ ಇಷ್ಟು ಸಾವಿರ ಕೋಟಿ ಕೊಡಲಾಗಿದೆ, ಇದಕ್ಕೆ ಅಷ್ಟು ಸಾವಿರ ಕೋಟಿ ಕೊಡಲಾಗಿದೆ ಎನ್ನುವುದನ್ನು ಬಿಟ್ಟರೆ ಬೇರೆ ಗಮನಾರ್ಹ ವಿಶ್ಲೇಷಣೆ/ಚರ್ಚೆಯೇನೂ ನಡೆಯಲಿಲ್ಲ. ದುಡಿಯುವ ಜನರು ಬಜೆಟಿನಲ್ಲಿ ಏನು ನಿರೀಕ್ಷಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸದ ಸರಕಾರ ಅವರ ನಿರೀಕ್ಷೆಗಳನ್ನು ಈಡೇರಿಸುತ್ತದೆ ಎಂದು ಯಾರೂ ಅಂದುಕೊಂಡಿಲ್ಲ. ಎಲ್ಲಾ ಸರಕಾರಗಳಂತೆ ಸಿದ್ದರಾಮಯ್ಯ ಸರಕಾರ ಉದ್ಯಮಿಗಳು, ಆರ್ಥಿಕ ತಜ್ಞರು ಮುಂತಾದವರ ಜತೆ ಅವರ ಬಜೆಟ್ ನಿರೀಕ್ಷೆಗಳ ಬಗ್ಗೆ ಬಜೆಟ್ ಪೂರ್ವ ಚರ್ಚೆ ಮಾಡುತ್ತದೆ. ಎಂದೂ ದುಡಿಯುವ ಜನರ ಪ್ರತಿನಿಧಿಗಳ ಜತೆ ಚರ್ಚಿಸುವುದಿಲ್ಲ.

ಆದರೆ ಈ ವರ್ಷ ಬಹುಶಃ ಮೊದಲ ಬಾರಿಗೆ ದುಡಿಯುವ ಜನರ ಹಲವು ಸಾಮೂಹಿಕ ಸಂಘಟನೆಗಳು ಬಜೆಟಿನಿಂದ ತಮ್ಮ ನಿರೀಕ್ಷೆ ಏನು ಎಂದು ನಿರ್ದಿಷ್ಟವಾಗಿ ಮಂಡಿಸಿದ ಪತ್ರವನ್ನು ಸರಕಾರಕ್ಕೆ ತಿಳಿಸಿದರು. ಕಾರ್ಮಿಕರ ನಿರೀಕ್ಷೆಗಳನ್ನು ಸಿಐಟಿಯು ಬೃಹತ್ ವಿಧಾನ ಸೌಧ ಚಲೋ ಮೂಲಕ ಮಾರ್ಚ್ 11 ರಂದು ಮಂಡಿಸಿತು. ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯದಾದ್ಯಂತ ಜಿಲ್ಲಾ ಮತ್ತು ತಾಲೂಕು ಕಚೇರಿಗಳ ಮುಂದೆ ರೈತರು ಪ್ರದರ್ಶನ ಮಾಡಿ ತಮ್ಮ ನಿರೀಕ್ಷೆಗಳನ್ನು ಅಧಿಕಾರಿಗಳ ಮೂಲಕ ಸರಕಾರಕ್ಕೆ ಕಳಿಸಿದರು. ಕೃಷಿ ಕೂಲಿಕಾರರ ಸಂಘ ಮಾರ್ಚ್ 15ರಂದು ವಿಧಾನ ಸೌಧ ಚಲೋ ನಡೆಸಿ ತಿಳಿಸಿತು. ವಿದ್ಯಾರ್ಥಿಗಳ ನಿರೀಕ್ಷೆಯನ್ನು ಮಾರ್ಚ್ 11 ರಂದು ಹಲವು ಜಿಲ್ಲೆಗಳಲ್ಲಿ ಪ್ರದರ್ಶನ ನಡೆಸಿ ಎಸ್.ಎಫ್.ಐ. ಘಟಕಗಳು ತಿಳಿಸಿದವು. ಅದೇ ರೀತಿ ದಲಿತ ಹಕ್ಕುಗಳ ಸಮಿತಿ ತಮ್ಮ ನಿರೀಕ್ಷೆಗಳನ್ನು ತಿಳಿಸಿತು. ತಮ್ಮ ನಿರೀಕ್ಷೆಗಳನ್ನು ಎಷ್ಟರ ಮಟ್ಟಿಗೆ ಸಿದ್ದರಾಮಯ್ಯ ಮಂಡಿಸಿದ ಬಜೆಟ್ ಈಡೇರಿಸಿದೆ ಎಂದು ಈ ಸಂಘಟನೆಗಳು ಅಥವಾ ಅದರ ನಾಯಕರು ವಿಶ್ಲೇಷಿಸಿರುವುದು ಈ ಸಂಚಿಕೆಯ ಪ್ರಧಾನ ಅಂಶ. ಈ ವಿಶ್ಲೇಷಣೆಗಳ ಮುಖ್ಯ ಸಾರ ಎಂದರೆ 2016–17ರ ಬಜೆಟಿನಲ್ಲಿ ದುಡಿಯುವ ಜನರ ನಿರೀಕ್ಷೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಬದಲಾಗಿ ಕೃಷಿ–ಕೈಗಾರಿಕೆ ಎರಡರಲ್ಲೂ ಕಾರ್ಪೊರೆಟ್ ಗಳಿಗೆ ವಹಿಸಿ ಕೊಡುವ ತರಾತುರಿ ಕಾಣುತ್ತದೆ. ಈ ಅಂಶಗಳನ್ನು ಈ ಸಂಚಿಕೆಯಲ್ಲಿ ಕೊಟ್ಟಿರುವ ವಿಶ್ಲೇಷಣೆಗಳು ವಿವರಿಸುತ್ತವೆ.

ಬಜೆಟ್ ಮತ್ತು ಆರ್ಥಿಕ ಸಮೀಕ್ಷೆಯಲ್ಲಿ ಎದ್ದು ಕಾಣುವುದು ಕೈಗಾರಿಕಾ ಬೆಳವಣಿಗೆ ಕುಂಠಿತವಾಗುತ್ತಿರುವುದು, ಕೃಷಿಗೆ ತೀವ್ರ ಹಿನ್ನಡೆ ಮತ್ತು ಒಟ್ಟಾರೆ ಅಭಿವೃದ್ಧಿ ದರ ಕಡಿಮೆಯಾಗಿರುವುದು. ಕೃಷಿ ಹಿನ್ನಡೆಗೆ ಬರದ ಕಾರಣವನ್ನು ಸರಕಾರ ಕೊಡುತ್ತದೆ. ಆದರೆ ಅದು ನಿಜವಲ್ಲ. ರೈತ ಆತ್ಮಹತ್ಯೆಗಳು ಪದೇ ಪದೇ ಮುನ್ನೆಲೆಗ ತಂದ ಕೃಷಿ ಬಿಕ್ಕಟ್ಟು ಪರಿಹರಿಸಲು ಸಮಗ್ರ ಕ್ರಮಗಳ ಅಭಾವವೇ ಈ ಹಿನ್ನಡೆಗೆ ಕಾರಣ. ಈ ಬಗ್ಗೆ ಕೆಲವು ಕಣ್ಣೊರೆಸುವ ಕ್ರಮ ಬಿಟ್ಟರೆ ದೃಢ ಕ್ರಮಗಳು ಕಾಣುತ್ತಿಲ್ಲ. ಇನ್ನೊಂದು ಅಂಶ ಸಾಲದ ಹೊರೆ. ಆದಾಯದಲ್ಲಿ ಶೇ. 19 ಸಾಲದಿಂದ ಬರುತ್ತದೆ. ಖರ್ಚಿನಲ್ಲಿ ಶೇ. 12 ಸಾಲ ತೀರಿಕೆಗೆ ಹೋಗುತ್ತದೆ. ಅದರಲ್ಲಿ ದೊಡ್ಡ ಪಾಲು ಸಾಲದ ಬಡ್ಡಿ ತೀರಿಸಲು ಹೋಗುತ್ತದೆ. ಸಾಲದ ಹೊರೆ ಹೆಚ್ಚುತ್ತಾ ಹೋಗುತ್ತಿದೆ. ರಾಜ್ಯಗಳ ಜಿಡಿಪಿ ಲೆಕ್ಕೆ ಹಾಕುವ ವಿಧಾನದಲ್ಲಿ (ಐಟಿ ಉತ್ಪಾದನೆಯಲ್ಲಿ ರಾಜ್ಯಗಳ ಪಾಲನ್ನು ಗಣನೆಗೆ ತೆಗೆದು–ಕೊಂಡಿದ್ದು) ಬದಲಾವಣೆ ಬಂದಿದೆ. ಅದರಿಂದಾಗಿ ಕರ್ನಾಟಕದ ರಾಜ್ಯ ಜಿಡಿಪಿ 2015–16ರಲ್ಲಿ ರೂ. 7.36 ಲಕ್ಷ ಕೋಟಿ ಇದ್ದಿದ್ದು 2016–17 ಜಿಡಿಪಿ ಅಂದಾಜು ರೂ. 12.13 ಲಕ್ಷ ಕೋಟಿಗೆ ಏರಿಸಲಾಗಿದೆ. ಇದು ಎಷ್ಟು ವಾಸ್ತವಿಕವಾದದ್ದು ಎಂಬುದು ವಿಶ್ಲೇಷಿಸಬೇಕಾಗಿದೆ. ಆದರೆ ಇದರಿಂದಾಗಿ ಸಾಲದ ಗರಿಷ್ಟ ಮಿತಿ ಹೆಚ್ಚಲಿದೆ. ಇನ್ನೂ ಸಾಲದ ಹೊರೆಯೂ ಅದರ ಜತೆ ಹೆಚ್ಚಲಿದೆ.

ಈ ಸಂಚಿಕೆಯಲ್ಲಿ ಈ ವರ್ಷದ ಬಜೆಟನ್ನು ಇನ್ನೊಂದು ರೀತಿಯಲ್ಲಿ ವಿಶ್ಲೇಷಿಸಲಾಗಿದೆ. ಹಿಂದಿನ ಸಾಲಿನ ಬಜೆಟ್ ಅನುದಾನ ಹೇಗೆ ವೆಚ್ಚವಾಗಿದೆ, ಎಷ್ಟರ ಮಟ್ಟಿಗೆ ಉದ್ದೇಶ ಪೂರೈಕೆ ಆಗಿದೆ ಎಂಬುದರ ಬಗ್ಗೆ ಸಿಎಜಿ ವರದಿಯನ್ನು ವಿಶ್ಲೇಷಿಸುವುದು. 2014–15ರ ಸಾಲಿನ ಬಜೆಟ್ ಅನುದಾನದ ಬಳಕೆ ಬಗ್ಗೆ ಸಿಎಜಿ ವರದಿ ಪ್ರಕಾರ (ವಿವರಗಳು ಲೇಖನದಲ್ಲಿವೆ) ಒಟು ಬಳಕೆಯಾಗದೆ ಉಳಿದ ಹಣ 19.7 ಸಾವಿರ ಕೋಟಿ, ಸುಮಾರು ಶೇ. 15 ರಷ್ಟು. ದಲಿತ–ಆದಿವಾಸಿ ಉಪಯೋಜನೆಯಲ್ಲಿ ವರ್ಷದ ಕೊನೆಗೆ 2188 ಕೋಟಿ ರೂ. ಬಳಕೆಯಾಗದೆ ಉಳಿದಿತ್ತು. ಆಯ್ದ ಇಲಾಖೆಗಳಲ್ಲಿ ಬಳಕೆಯಾಗದೆ ಉಳಿದ ಹಣ ಶೇ. 61 ರ ವರೆಗೂ ಇದೆ. ಸಾಮಾಜಿಕ ಕಲ್ಯಾಣಕ್ಕೆ ಸಂಬಂಧಿಸಿದ ಇಲಾಖೆಗಳಲ್ಲೇ ಅತ್ಯಂತ ಹೆಚ್ಚು ಬಳಕೆಯಾಗದೆ ಉಳಿದ ಹಣ ಇರುವುದು – ಶಿಕ್ಷಣ – ಬಂ. (ಶೇ. 61), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ – ಬಂ. (ಶೇ. 41), ಜಲಸಂವರ್ಧನೆ (ಶೇ. 51), ಆಹಾರ ಮತ್ತು ನಾಗರಿಕ ಸರಬರಾಜು (ಶೇ. 42), ವಸತಿ (ಶೇ. 25), ಕೃಷಿ ಮತ್ತು ತೋಟಗಾರಿಕೆ (ಶೆ. 25), ಸಮಾಜ ಕಲ್ಯಾಣ – ಬಂ. (ಶೇ. 19), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಶೇ. 17) – ಎಂಬುದು ಸರಕಾರದ ಧೋರಣೆಗೆ ಹಿಡಿದ ಕನ್ನಡಿ. ಆರೋಗ್ಯ, ಶಿಕ್ಷಣ ಮುಂತಾದ ಹಲವು ಕ್ಷೇತ್ರಗಳಲ್ಲಿ ಬಜೆಟ್ ಅನುದಾನ ಉದ್ದೇಶ ಪೂರೈಕೆ ಆಗಿಲ್ಲ ಎಂದೂ ಸಿಎಜಿ ವರದಿ ಎತ್ತಿ ತೋರಿಸುತ್ತಿದೆ.

ಅನುದಾನ ಬಳಕೆಯಲ್ಲೂ ಅಥವಾ ಆಗದೆ ಹೋಗುವುದರಲ್ಲೂ ಮಂತ್ರಿಗಳು, ಅಧಿಕಾರಿಗಳು, ಸಿಬ್ಬಂದಿಗಳ ನಿರ್ಲಕ್ಷ, ಭ್ರಷ್ಟಾಚಾರ, ಅದಕ್ಷತೆಯ ಪಾಲು ಖಂಡಿತ ಇದೆ. ಆದ್ದರಿಂದಲೇ ಇಲಾಖಾವಾರು ಬಹಳ ವ್ಯತ್ಯಾಸಗಳು ಇರುವುದು. ಆದರೆ ಅಷ್ಟು ಮಾತ್ರವಲ್ಲ. ಇಡೀ ವ್ಯವಸ್ಥೆಯೇ ಅನುದಾನವನ್ನು ಜನರ 'ಮೂಗಿಗೆ ತುಪ್ಪ ಹಾಕಲು' ಬಳಸಿ, ನಿಜವಾದ ಬಳಕೆ ಆಗದಂತೆ ನೋಡುವುದೇ ಆಗಿದೆ ಎಂಬುದನ್ನು ಗಮನಿಸಬಹುದು.

ಜನ–ವಿರೋಧಿ ಹಾಗೂ ಕಾರ್ಪೋರೇಟ್–ಪರ ಬಜೆಟ್ : ಸಿಪಿಐ(ಎಂ)

ಸಿಪಿಐ(ಎಂ) ಕನಾಟಕ ರಾಜ್ಯ ಸಮಿತಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಮಾರ್ಚ್ 17ರಂದು ಮಂಡಿಸಿದ 2016–17ರ ಸಾಲಿನ ಕರ್ನಾಟಕ ರಾಜ್ಯದ ಬಜೆಟ್ ಬಗ್ಗೆ ಈ ಕೆಳಗಿನ ಹೇಳಿಕೆಯನ್ನು ಮಾರ್ಚ್ 20ರಂದು ನೀಡಿದೆ:

ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಮೊನ್ನೆ ಮಂಡಿಸಿದ 2016–17ರ ಸಾಲಿನ ಕರ್ನಾಟಕ ರಾಜ್ಯದ ಬಜೆಟ್ ಜನವಿರೋಧಿ ಹಾಗೂ ಕಾರ್ಪೋರೇಟ್ ಪರವಾದ ಬಜೆಟ್ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಷವಾದಿ)ದ ರಾಜ್ಯ ಸಮಿತಿ ವಿಶ್ಲೇಷಿಸಿದೆ. ಕರ್ನಾಟಕದ ಕೃಷಿ ಬಿಕ್ಕಟ್ಟನ್ನು ಪರಿಹರಿಸುವಲ್ಲಿ ಮತ್ತು ಕೈಗಾರಿಕೆ ಮುನ್ನಡೆಗೆ ಆಧಾರ ಒದಗಿಸುವಲ್ಲಿ ಸಂಪೂರ್ಣ ವಿಫಲವಾಗಿದೆಯೆಂದು ಟೀಕಿಸಿದೆ.

ರಾಜ್ಯದ ರೈತರು ಸಾಲಬಾಧಿತರಾಗಿ ಪ್ರತಿನಿತ್ಯ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕಳೆದ ಆರು ತಿಂಗಳ ಅವಧಿಯಲ್ಲಿ 1,100ಕ್ಕಿಂತ ಹೆಚ್ಚು ರೈತರು ಆತ್ಮಹತ್ಯೆ ಮಡಿಕೊಂಡಿದ್ದಾರೆ. ಕೃಷಿ ಉತ್ಪಾದನೆಯ ದರ ಶೇ. 4.5ರಷ್ಟು ಕಡಿತಗೊಂಡಿದೆ. ಆಹಾರಧಾನ್ಯಗಳ ಉತ್ಪಾದನೆ 20ಲಕ್ಷ ಟನ್‌ಗಳಷ್ಟು ಕಡಿತಗೊಂಡಿದೆ.

ಕೃಷಿಕೂಲಿಕಾರರು, ಕಸುಬುದಾರರು, ಬರಗಾಲಗಳು ಮತ್ತು ಗ್ರಾಮಗಳಲ್ಲಿ ಕೆಲಸ ಲಭ್ಯವಿಲ್ಲದೇ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಗುತ್ತಿಗೆ ಹಾಗೂ ಅಸಂಘಟಿತ ವಲಯದ ಕಾರ್ಮಿಕರ ಅತ್ಯಂತ ಕಡಿಮೆ ವೇತನಕ್ಕೆ ದುಡಿಯುತ್ತಿದ್ದಾರೆ. ಈ ಎಲ್ಲರ ತಲಾ ಆದಾಯ ಸರಾಸರಿ 25ರೂ.ಗಳಿಗಿಂತಲೂ ಕಡಿಮೆ ಇದೆ. ಅಗತ್ಯ ವಸ್ತುಗಳ ವ್ಯಾಪಕವಾದ ಬೆಲೆ ಏರಿಕೆಯ ಈ ಕಾಲದಲ್ಲಿ ಈ ಎಲ್ಲಾ ದುಡಿಯುವ ಜನರ ಆದಾಯ ಹೆಚ್ಚು ಮಾಡುವ ಮತ್ತು ಕನಿಷ್ಟ ವೇತನವನ್ನು ಹೆಚ್ಚಿಸುವ ಯಾವುದೇ ಪ್ರಸ್ತಾಪವನ್ನು ಬಜೆಟ್ ಮಾಡಿಲ್ಲ. ಬದಲಿಗೆ ಗಾಯದ ಮೇಲೆ ಬರೆ ಎಳೆಯುವಂತೆ ಈಗಾಗಲೇ ಬೆಲೆ ಏರಿಕೆಯಿಂದ ಮತ್ತು ಆಧಾಯದ ಕುಸಿತದಿಂದ ತತ್ತರಿಸಿರುವ ಈ ಜನತೆಯ ಮೇಲೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮತ್ತು ಖೋತಾ ಬಜೆಟ್ ಮೂಲಕ ಮತ್ತಷ್ಟು ಹೊರೆ ಹೇರಲು ಮುಂದಾಗಿರುವುದು ಖಂಡನೀಯವಾಗಿದ್ದು, ತಕ್ಷಣವೇ ಅದನ್ನು ವಾಪಸು ಪಡೆಯಬೇಕೆಂದು ಒತ್ತಾಯಿಸಿದೆ.

ರಾಜ್ಯದ ಅಭಿವೃದ್ಧಿಯನ್ನು ಸಾದಿಸಲು ಬಹುಸಂಖ್ಯಾತರಾದ ದುಡಿಯುವ ಜನರ ಆಧಾಯವನ್ನು ಹೆಚ್ಚಿಸಲು, ಕನಿಷ್ಠ ಕೂಲಿಯನ್ನು ಮಾಸಿಕ ರೂ. 18 ಸಾವಿರಕ್ಕೆ ಹೆಚ್ಚಿಸಬೇಕು ಹಾಗೂ ರೈತರನ್ನು ಆತ್ಮಹತ್ಯೆಗಳಿಂದ ಸಂರಕ್ಷಿಸಲು ಅವರ ಋಣ ಭಾರವನ್ನು ಕಡಿಮೆ ಮಾಡಲು ಮತ್ತು ಅವರ ಕೃಷಿ ಉತ್ಪನ್ನಗಳಿಗೆ ಲಾಭದಾಯಕವಾದ ಬೆಲೆಗಳು ಖಾತರಿಯಾಗಿ ದೊರೆಯುವಂತೆ ಕ್ರಮವಹಿಸಿ ರೈತ–ಕೂಲಿಕಾರರನ್ನು ಆಧರಿಸಿದ ವ್ಯವಸಾಯವನ್ನು ಉಳಿಸಬೇಕು. ಮಾತ್ರವಲ್ಲಾ ಇದರ ನಾಶಕ್ಕೆ ಕಾರಣವಾಗುವ ಕಾರ್ಪೋರೇಟ್ ಕೃಷಿಗೆ ಅವಕಾಶ ನೀಡುವ ವಿಶೇಷ ಕೃಷಿವಲಯದ ಪ್ರಸ್ತಾಪವನ್ನು ಕೈಬಿಡುವಂತೆ ಒತ್ತಾಯಿಸಿದೆ.

ಕೂಲಿಕಾರರ ವಲಸೆಯನ್ನು ತಡೆಯಲು ಮತ್ತು ಗ್ರಾಮಗಳಲ್ಲಿಯೇ ಉದ್ಯೋಗ ದೊರೆಯುವಂತೆ ಮಾಡಲು, ಬರಗಾಲಗಳ ಈ ಸಂದರ್ಭದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಭಷ್ರಮುಕ್ತವನ್ನಾಗಿಸಿ ಮತ್ತು ವರ್ಷದಲ್ಲಿ ಕನಿಷ್ಟ 200 ದಿನಗಳ ಕಾಲವಾದರೂ ಪ್ರತಿದಿನ ಕನಿಷ್ಟ 600 ರೂ.ಗಳ ಕೂಲಿಯೊಂದಿಗೆ ದೊರೆಯುವಂತೆ ಕ್ರಮವಹಿಸಬೇಕು. ಈ ಎಲ್ಲದಕ್ಕೂ ಅಗತ್ಯ ಕ್ರಮ ಹಾಗೂ ಬಜೆಟಿನಲ್ಲಿ ಅಗತ್ಯ ಹಣವನ್ನು ಒದಗಿಸಲು ಸಿಪಿಐ(ಎಂ)ಒತ್ತಾಯಿಸಿದೆ.


ಉನ್ನತ ಶಿಕ್ಷಣದ ಸೌಲಭ್ಯವನ್ನು ಸಾರ್ವಜನಿಕ ರಂಗದಲ್ಲಿ ವಿಸ್ತರಿಸಲು ಮತ್ತು ರಾಜ್ಯದ ವಿದ್ಯಾವಂತ ನಿರುದ್ಯೋಗಿ ಯುವಜನರಿಗೆ ಉದ್ಯೋಗ ಒದಗಿಸುವ ಯೋಜನೆಗಳಾಗಲೀ ಅಥವಾ ನಿರುದ್ಯೋಗ ಭತ್ಯೆ ನೀಡುವ ಪ್ರಸ್ತಾಪವನ್ನಾಗಲೀ ಈ ಬಜೆಟ್ ಮಾಡಿಲ್ಲವೆಂದು ಟೀಕಿಸಿದೆ.

ತಕ್ಷಣವೇ ಕಾರ್ಪೋರೇಟ್ ಕಂಪೆನಿಗಳ ಪರವಾದ ನಿಲುಮೆಯನ್ನು ಮತ್ತು ದಿಶೆಯನ್ನು ಕೈಬಿಟ್ಟು ಜನತೆಯ ಹಾಗೂ ರಾಜ್ಯದ ಅಭಿವೃದ್ಧಿ ಪರವಾದ ಬಜೆಟ್ ಆಗಿ ಪರಿವರ್ತಿಸಲು ರಾಜ್ಯ ಸರಕಾರವನ್ನು ಒತ್ತಾಯಿಸಿದೆ. ಅದೇ ರೀತಿ, ಈ ಜನವಿರೋಧಿ ಬಜೆಟ್‌ನ್ನು ತಿರಸ್ಕರಿಸಲು ಮತ್ತು ಜನಪರವಾದ ಬಜೆಟಿಗಾಗಿ ಪ್ರತಿಭಟನೆ ನಡೆಸಲು ಕರೆ ನೀಡಿದೆ.

ಈ ವಾರ ಚರಿತ್ರೆಯಲ್ಲಿ

22 ಮಾರ್ಚ್ 1977

ಎ.ಕೆ. ಗೋಪಾಲನ್ ನಿಧನ



ಕಾ. ಎ.ಕೆ. ಗೋಪಾಲನ್ ಭಾರತದ ಅತ್ಯಂತ ಜನಪ್ರಿಯ ಕಮ್ಯುನಿಸ್ಟ್ ನಾಯಕರಲ್ಲಿ ಒಬ್ಬರು. ಸ್ವತಂತ್ರ ಭಾರತದ ಮೊದಲ ವಿರೋಧ ಪಕ್ಷದ ನಾಯಕ. ಕೇರಳದ ಕಮ್ಯುನಿಸ್ಟ್ ಪಕ್ಷದ ಸ್ಥಾಪಕ ಮತ್ತು ದೇಶದಲ್ಲಿ ಸಿಪಿಐ(ಎಂ)ನ ಸ್ಥಾಪಕ ನವರತ್ನಗಳಲ್ಲಿ ಒಬ್ಬರು. ಎ.ಕೆ.ಜಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವ ಮೂಲಕ ಸಾರ್ವಜನಿಕ ಜೀವನ ಆರಂಭಿಸಿದರು. ಜನ ಚಳುವಳಿಗಳಲ್ಲಿ ಸ್ವತಃ ಭಾಗವಹಿಸಿ ಯಾವಾಗಲೂ ಮುಂಚೂಣಿಯಲ್ಲಿ ಇರುತ್ತಿದ್ದ ಎ.ಕೆ.ಜಿ. ಉಪ್ಪಿನ ಸತ್ಯಾಗ್ರಹ, ಗುರುವಾಯೂರು ದೇವಸ್ಥಾನ ಚಳುವಳಿ ಮತ್ತು ಲೆಕ್ಕವಿಲ್ಲದಷ್ಟು ರೈತ–ಕಾರ್ಮಿಕ ಚಳುವಳಿಗಳ ನಾಯಕತ್ವ ವಹಿಸಿದ್ದರು. ಮುಂದೆ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷ ಸೇರಿ, ಆ ಮೇಲೆ ಕೇರಳದಲ್ಲಿ ಕೃಷ್ಣ ಪಿಳ್ಳೆ ಮತ್ತು ಇ.ಎಂ.ಎಸ್ ಜತೆ ಕಮ್ಯುನಿಸ್ಟ್ ಪಕ್ಷ ಕಟ್ಟಿದವರಲ್ಲಿ ಪ್ರಮುಖರಾದರು. ಕಿಸಾನ್ ಸಭಾದ ಅಧ್ಯಕ್ಷರಾಗಿ ಪ್ರಮುಖವಾಗಿ ರೈತ ಚಳುವಳಿಯಲ್ಲಿ ದುಡಿದ ಅವರು ಹಲವು ಬಾರಿ ಪಾರ್ಲಿಮೆಂಟ್ ಸದಸ್ಯರಾಗಿ ಆಯ್ಕೆಯಾಗಿದ್ದರು. ಅವರು ಸ್ವಾತಂತ್ರ್ಯ ಚಳುವಳಿಯಲ್ಲೂ ಸ್ವತಂತ್ರ ಭಾರತದಲ್ಲೂ ಹಲವು ವರ್ಷಗಳ ದೀರ್ಘ ಕಾಲ ಜೈಲು, ಭೂಗತ ಜೀವನ ಅನುಭವಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಒತ್ತಾಯ

ವಿಶೇಷ ನ್ಯಾಯಾಲಯದ ವ್ಯಾಪ್ತಿಯನ್ನು ಬೆಂಗಳೂರು ನಗರದ ಭೂಕಬಳಿಕೆಗೆ ಸೀಮಿತಗೊಳಿಸಿ:

ಕರ್ನಾಟಕ ಸರಕಾರ ನಿನ್ನೆ ದಿನ ಭೂಕಬಳಿಕೆ ವಿಚಾರಣೆಯನ್ನು ವಿಶೇಷ ನ್ಯಾಯಾಲಯದ ವ್ಯಾಪ್ತಿಗೆ ಒಳಪಡಿಸಲು ಆದೇಶ ಹೊರಡಿಸಿದ್ದು, ಅದನ್ನು ಇಡೀ ರಾಜ್ಯದ ವ್ಯಾಪ್ತಿಗೆ ಒಳಪಡಿಸದೇ, ಶ್ರೀ ಎ.ಟಿ. ರಾಮಸ್ವಾಮಿ ಅಧ್ಯಕ್ಷತೆಯ ಜಂಟಿ ಸದನಸಮಿತಿ ಗುರುತಿಸಿದ ಬೆಂಗಳೂರು ನಗರದ ಭೂಕಬಳಿಕೆಗೆ ಸೀಮಿತಗೊಳಿಸುವಂತೆ ಮತ್ತು ಅದರಲ್ಲಿ 20ಕ್ಕೂ ಹೆಚ್ಚು ಬೆಂಗಳೂರಿನ ಕೆರೆಗಳು ಮತ್ತು ಬಡವರನ್ನು ಒಕ್ಕಲೆಬ್ಬಿಸಿ ಸಾವಿರಾರು ಎಕರೆ ಸರಕಾರಿ ಜಮೀನನ್ನು ಒತ್ತುವರಿ ಮಾಡಿರುವ ನೈಸ್ ಕಂಪೆನಿ ಮತ್ತು ರಾಜ್ಯದಾದ್ಯಂತ ಸಾವಿರಾರು ಎಕರೆ ಭೂಕಬಳಿಕೆ ಮಾಡಿಕೊಂಡಿರುವ ಜಿಂದಾಲ್, ಮಿಥ್ಥಲ್ ಮುಂತಾದ ಕಂಪೆನಿಗಳನ್ನು ಒಳಗೊಳ್ಳುವಂತೆ ಸೂಕ್ತ ಕ್ರಮವಹಿಸಲು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಸಮಿತಿ ರಾಜ್ಯ ಸರಕಾರವನ್ನು ಒತ್ತಾಯಿಸಿದೆ. ನಿಜವಾಗಲೂ ಸರಕಾರಕ್ಕೆ ಭೂಕಬಳಿಕೆದಾರರನ್ನು ಶಿಕ್ಷಿಸುವ ಮತ್ತು ಸರಕಾರಿ ಜಮೀನು ಸಂರಕ್ಷಿಸುವ ಉದ್ದೇಶವಿದ್ದರೇ ಕೂಡಲೇ ಈ ಕುರಿತು ಮರು ಆದೇಶ ಹೊರಡಿಸುವಂತೆ ಅದು ಸೂಚಿಸಿದೆ.

ಅಂತಹ ಭಾರೀ ಭೂಗಳ್ಳರನ್ನು ಹಿಡಿದು ಶಿಕ್ಷಿಸಲು ನಿರ್ಧಿಷ್ಠವಾಗಿ ಮತ್ತು ಸ್ಪಷ್ಠವಾಗಿ ಸದನ ಸಮಿತಿ ಅವರನ್ನು ಗುರುತಿಸಿದ್ದರೂ, ಈ ವಿಶೇಷ ನ್ಯಾಯಾಲಯದ ವ್ಯಾಪ್ತಿಯನ್ನು ಇಡೀ ರಾಜ್ಯ-ಕ್ಕೆ ಅನ್ವಯಿಸುವುದರ ಔಚಿತ್ಯ ಪ್ರಶ್ನಾರ್ಹವಾಗಿದೆ. ಇದರ ಹಿಂದೆ ರಾಜ್ಯ ಸರಕಾರದ ಕಾರ್ಪೋರೇಟ್ ಕಂಪೆನಿಗಳ ಪರವಾದ ಹಿತಾಸಕ್ತಿ ಇರುವುದು ಸ್ಪಷ್ಠವಾಗಿ ಗೋಚರಿಸುತ್ತದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸರಕಾರದ ನಡೆಯನ್ನು ಕಟುವಾಗಿ ಟೀಕಿಸಿದೆ.


ಬಡವರು, ದಲಿತರು, ಆದಿವಾಸಿಗಳ 16 ಲಕ್ಷಕ್ಕೂ ಅಧಿಕ ಕುಟುಂಬಗಳು (80 ಲಕ್ಷ ಜನಸಂಖ್ಯೆ) ಹಲವು ತಲೆಮಾರುಗಳಿಂದ ಅಭಿವೃದ್ಧಿ ಪಡಿಸಿದ ಗೋಮಾಳ, ಅಮೃತಮಹಲು, ಕುದುರೆಕಾವಲು, ಗೈರಾಣು, ಬಗರ್ ಹುಕುಂ, ಈಚಲುವನ, ಅರಣ್ಯ ಮುಂತಾದ ವಿವಿಧ ಹೆಸರಿನಲ್ಲಿರುವ ಸುಮಾರು 40ಲಕ್ಷ ಎಕರೆ ಪ್ರದೇಶದ ಸರಕಾರಿ ಜಮೀನಿನಲ್ಲಿ ಸಾಗುವಳಿಯಲ್ಲಿ ಈಗಲೂ ರಾಜ್ಯದಾದ್ಯಂತ ತೊಡಗಿರುವ ಇವರನ್ನು ಭೂಕಬಳಿಕೆ ನಿಷೇಧ ಕಾನೂನು ಮತ್ತು ಅದರಲ್ಲಿನ ಜೈಲು ಶಿಕ್ಷೆ ತೋರಿಸಿ ಬೆದರಿಸುವ ಹುನ್ನಾರ, ವಿಶೇಷ ನ್ಯಾಯಾಲಯದ ವ್ಯಾಪ್ತಿಯನ್ನು ರಾಜ್ಯದಾದ್ಯಂತ ವಿಸ್ತರಿಸಿರುವ ಹಿಂದಿನ ಮರ್ಮವಾಗಿದೆಯೆಂದು ಕರ್ನಾಟಕ ಪ್ರಾಂತ ರೈತ ಸಂಘ ವಿವರಿಸಿದೆ.



ಈಗಾಗಲೇ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ, ಮತ್ತಿತರೇ ಸಂಘ ಸಂಸ್ಥೆಗಳು, ಹೊಟ್ಟೆಪಾಡಿಗಾಗಿ ತಲೆ ತಲಾಂತರದಿಂದ ಬಂಜರು ಜಮೀನನ್ನು ಅಭಿವೃದ್ಧಿಪಡಿಸಿ ರಾಜ್ಯದ ಆಹಾರದ ಉತ್ಪಾದನೆಯಲ್ಲಿ ತೊಡಗಿರುವ ಈ ಬಡರೈತರನ್ನು ಮತ್ತು ಸಾಕಷ್ಟು ಆಸ್ತಿ ಹಾಗೂ ಆದಾಯ ಹೊಂದಿ ಮತ್ತಷ್ಟು ಅಕ್ರಮ ಆಸ್ತಿಗಳಿಸಲು ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸರಕಾರಿ ಜಮೀನನ್ನು ಅಧಿಕಾರಿಗಳ ಮತ್ತು ರಾಜಕಾರಣಿಗಳ ಶಾಮೀಲಾತಿಯಿಂದ ಕಬಳಿಕೆ ಮಾಡಿರುವ ಭೂಗಳ್ಳರನ್ನು ಒಂದೇ ರೀತಿ ನೋಡಬಾರದೆಂದು, ಅದಕ್ಕಾಗಿ ಭೂಕಬಳಿಕೆದಾರನೆಂದರೇ ಯಾರು ಎಂಬುದನ್ನು ಸ್ಪಷ್ಟ ಪಡಿಸಲು ಮತ್ತು ಬಡವರನ್ನು ಸಂರಕ್ಷಿಸಲು ಭೂಕಬಳಿಕೆ ನಿಷೇಧ ಕಾಯ್ದೆಗೆ ಸ್ಪಷ್ಠವಾದ ತಿದ್ದುಪಡಿ ತರಬೇಕೆಂದು ಬಲವಾಗಿ ಒತ್ತಾಯಿಸುತ್ತಿದ್ದರೂ, ಸರಕಾರ ಜಾಣಮರೆವು ತೋರುತ್ತಿರುವುದು ಕಾರ್ಪೋರೇಟ್ ಕಂಪೆನಿಗಳ ಬಾಲಬಡುಕ ನೀತಿಯಿಂದಾಗಿಯೇ ಎಂದು ಅದು ಹೇಳಿದೆ.

ಆದ್ದರಿಂದ, ಕರ್ನಾಟಕ ಸರಕಾರ ಬಡ ಸಾಗುವಳಿದಾರರ ಹಿತಗಳನ್ನು ಸಂರಕ್ಷಿಸಲು ಮತ್ತು ಅವರಿಗೆ ಹಕ್ಕುಪತ್ರ ಸಿಗುವಂತಾಗಲೂ ವಿವಿಧ ಕಾನೂನುಗಳಿಗೆ ತಿದ್ದುಪಡಿ ತಂದು ಅವರ ಜಮೀನುಗಳಿಗೆ ಹಕ್ಕುಪತ್ರವನ್ನು ನೀಡಲು ಕ್ರಮವಹಿಸ ಬೇಕು. ನೂರಾರು ಮತ್ತು ಸಾವಿರಾರು ಎಕರೆ ಸಂಖ್ಯೆಯಲ್ಲಿ ಸರಕಾರಿ ಜಮೀನನ್ನು ಕಬಳಿಸಿರುವ ದೊಡ್ಡ ಕಂಪೆನಿಗಳು ಮತ್ತು ರಾಜಕಾರಣಿಗಳ ಹಾಗೂ ಅದಿಕಾರಿಗಳ ಬೆಂಬಲದಿಂದ ಭೂಕಬಳಿಕೆ ಮಾಡಿ ಅಕ್ರಮ ಆಸ್ತಿಗಳಿಸಿರುವ ಭೂಕಬಳಿಕೆದಾರರನ್ನು ಶಿಕ್ಷಿಸಲು ಸೂಕ್ತ ಕ್ರಮ ವಹಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸರಕಾರವನ್ನು ಒತ್ತಾಯಿಸುತ್ತದೆ.

ಅದೇ ರೀತಿ, ರಾಜ್ಯದ ಸರಕಾರಿ ಜಮೀನಿನಲ್ಲಿ ಸಾಗುವಳಿನಿರತ ಬಡವರನ್ನು ಒಕ್ಕಲೆಬ್ಬಿಸಿ ಕಾರ್ಪೋರೇಟ್ ಕಂಪೆನಿಗಳಿಗೆ ಲಕ್ಷಾಂತರ ಎಕರೆ ಜಮೀನು ನೀಡುವ ರಾಜ್ಯ ಸರಕಾರದ ನೀತಿಯನ್ನು ಪ್ರತಿರೋಧಿಸಲು ಹಾಗೂ ಬಡ ಸಾಗುವಳಿದಾರರಿಗೆ ಹಕ್ಕುಪತ್ರ ದೊರೆಯುವಂತೆ ಮತ್ತು ನಿಜ ಭೂಕಬಳಿಕೆದಾರರನ್ನು ಶಿಕ್ಷಿಸಿ ಅವರಿಂದ ಜಮೀನನ್ನು ವಾಪಾಸು ಪಡೆಯುವಂತೆ ಒತ್ತಾಯಿಸಿ ರೈತರು, ಕೂಲಿಕಾರರು ಮತ್ತು ಕಸಬುದಾರರು ರಾಜ್ಯದಾದ್ಯಂತ ಪ್ರತಿಭಟನೆಯನ್ನು ನಡೆಸಲು ಕರೆ ನೀಡುತ್ತದೆ.



ಪ್ರೀತ್ಸೋದು ತಪ್ಪಾ? : ಲಕ್ಕುಂಡಿ ದಲಿತರ ಪ್ರಶ್ನೆ

ದಲಿತರು ಮೇಲ್ಜಾತಿಯವರು ಒಬ್ಬರನ್ನೊಬ್ಬರು ಪ್ರೀತಿಸುವುದೇ ತಪ್ಪಾಗಿದೆ. ವಿಜಯಪರು ಜಿಲ್ಲೆಯಿಂದ 90ಕಿ.ಲೋ. ಮಿಟರ್ ದೂರದಲ್ಲಿರುವ ಮುದ್ದೆಬಿಹಾಳ ತಾಲೂಕಿನಲ್ಲಿರುವ ಕುಗ್ರಾಮ ಲಕ್ಕುಂಡಿ. ಈ ಗ್ರಾಮದಲ್ಲಿ ಲಿಂಗಾಯಿತರ ಸುಮಾರು 300 ಮನೆಗಳು, ರೆಡ್ಡಿಗಳು 200 ಮನೆಗಳು, ದಲಿತರು (ಮಾದಿಗರು) 15 ಮನೆಗಳು ಇವೆ. ಬಣಜಿಗರು ಬ್ಯಾಡರೂ ಇದ್ದಾರೆ.



ದಲಿತರಾದ ಕನಕಪ್ಪ ಮಡದಿ ತಿಪ್ಪವ್ವ. 5ಜನ ಮಕ್ಕಳು ಅದರಲ್ಲಿ 4ಗಂಡು ಮಕ್ಕಳು, 1 ಮಗಳು ಗಂಗಮ್ಮ ಸಲಾದಹಳ್ಳಿಗೆ ಲಗ್ನ ಮಾಡಿ ಕೊಡಲಾಗಿದೆ. ಎಲ್ಲಾರು ಕೆಲಸದ ನಿಮಿತ್ತ ಬೆಂಗಳೂರು ಅತ್ತಿತ್ತ ಇದ್ದಾರೆ. ನಾಲ್ಕನೆ ಮಗ ಸೋಮಶೇಖರ ಬಿ.ಎ ಓದಿರುತ್ತಾನೆ ಸದ್ಯ ಬೆಂಗಳೂರಿನಲ್ಲಿದ್ದಾನೆ. ಈ ಸೋಮಶೇಖರ ಎಂಬವನು ಮತ್ತು ರೆಡ್ಡಿ ಜನಾಂಗದ ಶಿಲ್ಪಾ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದು ತಾಲೂಕ ಪಂಚಾಯಿತಿ ಚುನಾವಣೆಗೆ ಮತದಾನಕ್ಕೆಂದು ಊರಿಗೆ ಬಂದಾಗ ಇಬ್ಬರು ಕೂಡಿ ಹೋಗಿದ್ದಾರೆ. ಫೆ. 27ರಂದು ರಾಯಚೂರಿನಲ್ಲಿ ಸಿಕ್ಕಿದ್ದಾರೆ. ವಿಷಯ ತಿಳಿದ ತಕ್ಷಣ ಎರಡು ಕುಟಂಬದವರು ರಾಯಚೂರು ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ನಂತರ ಪೊಲೀಸರ ಸಮ್ಮುಖದಲ್ಲಿ ಮಾತುಕತೆ ನಡೆಸಿದ್ದಾರೆ. ಮಾತುಕತೆ ಮುಂದುವರೆದಿದ್ದು, ಹುಡುಗಿಯನ್ನು ರಿಮ್ಯಂಡ್ ರೂಂ ನಲ್ಲಿ ಇರಿಸಲಾಗಿದ್ದು ಪೆಬ್ರವರಿ 29 ರಂದು ಮಹಿಳಾ ಸಹಾಯವಾಣಿಯವರು ಹೇಳಿಕೆ ದಾಖಲಿಸಿದ್ದಾರೆ. ಮಾರ್ಚ್ 1ರಂದು ಪೊಲೀಸಿನವರ ಸಮ್ಮುಖದಲ್ಲಿ ಹುಡುಗಿ ಶಿಲ್ಪಾಳನ್ನು ಅವಳ ತಂದೆ ತಾಯಿಗಳು ಕರೆದು-ಕೊಂಡು ಹೋಗಿದ್ದಾರೆ.

ಮಾರ್ಚ್ 2ರಂದು ರೆಡ್ಡಿ ಜನಾಂಗದ ಗುಂಪು ರಾತ್ರಿ 9ರ ಸುಮಾರಿಗೆ ಮಾದರ ಕೇರಿಗೆ ಬಂದು ದಲಿತ ಕನಕಪ್ಪ ಕುಟುಂಬಕ್ಕೆ ಜೀವ ಬೆದರಿಕೆ ಹಾಕಿ ರಾತ್ರೋರಾತ್ರಿ ಓಡಿಸಿದ್ದಾರೆ. ಅವರು ಅಲ್ಲಿಂದ ಹೋಗಿ ಸಲಾದಹಳ್ಳಿಯ ಮಗಳ ಮನೆಯಲ್ಲಿದ್ದರು. ಮಾರ್ಚ್ 5ರಂದು ಅವರ 2 ಮನೆಗಳು ಅದರಲ್ಲಿ ಒಂದು ಹೊಸದಾಗಿ ಕಟ್ಟಿದ ಮನೆ ಇನ್ನು ಗ್ರಹ ಪ್ರವೇಶ ಆಗಿಲ್ಲ ಎಲ್ಲವನ್ನು ಧ್ವಂಸ ಮಾಡಿದ್ದಾರೆ.

ಈ ಬಗ್ಗೆ ತಾಳಿಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಅವರ ಮೇಲೆ ಕ್ರಮ ಜರುಗಿಸಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯವರು ಇತ್ತಾ ಮುಖ ಮಾಡಿಲ್ಲ. ನೊಂದ ಕುಟುಂಬ ನೆಲೆಯಿಲ್ಲದೆ ಬೀದಿಪಾಲಾಗಿದ್ದರೆ.

ಲಕ್ಕುಂಡಿಗೆ ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕ ಗೋಪಾಲಕೃಷ್ಣ ಅರಳಹಳ್ಳಿ ನೇತೃತ್ವದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಭೀಮಶಿ ಕಲಾದಗಿ, ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಸಂಚಾಲಕರಾದ ಸಂಗಪ್ಪ ಎಸ್. ನಾಲ್ಕಮನ, ಸಿಂದಗಿ ತಾಲೂಕಾ ಸಂಚಾಲಕ ಸುರೇಶ ಬರಗಲ್, ಸಂ.ಸಂಚಾಲಕ ಸಾಯಬಣ್ಣ ದೊಡಮನಿ, ನಿಯೋಗ ಮಾರ್ಚ್ 22 ರಂದು ಭೇಟಿ ನೀಡಿ ಮಾಹಿತಿ ಸಂಗ್ರಹಿಸಿತು. ಇಂತಹ ಅಮಾನವೀಯ ಘಟನೆಯನ್ನು ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿಯವರು ಮಾರ್ಚ್ 24ರಂದು ನೀಡಿದ ಹೇಳಿಕೆಯಲ್ಲಿ ಖಂಡಿಸಿದ್ದಾರೆ. ದೌರ್ಜನ್ಯ ಎಸಗಿದವರ ಮೇಲೆ ಉಗ್ರ ಕ್ರಮ ಜರುಗಿಸಬೇಕು. ಸೂಕ್ತ ಪರಿಹಾರ ನೀಡಬೇಕು. ಇಲ್ಲವಾದರೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.



ªÀiÁvÀÄ EzÀÄ

ನಮಗೆ ಸಮಾಜವಾದಿ ಕ್ರಾಂತಿ ಬೇಕು.
ಇದಕ್ಕೆ ಪೂರ್ವಭಾವಿಯಾಗಿ ರಾಜಕೀಯ ಕ್ರಾಂತಿ
ಅನಿವಾರ್ಯ. ರಾಜಕೀಯ ಕ್ರಾಂತಿ ಎಂದರೆ
ಬ್ರಿಟಿಶರಿಂದ ಭಾರತೀಯರಿಗೆ ಪ್ರಭುತ್ವ
(ಅಥವಾ ಒರಟಾಗಿ ಹಳುವುದಾದರೆ ಅಧಿಕಾರದ)
ಹಸ್ತಾಂತರ ಅಲ್ಲ. ಬದಲಾಗಿ,
ನಮ್ಮ ಉದ್ಧೇಶಗಳಿಗೆ ಬದ್ಧರಾಗಿರುವ
ಭಾರತೀಯರಿಗೆ ಹಸ್ತಾಂತರ. ಇನ್ನೂ ನಿಖರವಾಗಿ
ಹೇಳುವುದಾದರೆ, ಜನ ಬೆಂಬಲ ಇರುವ
ಕ್ರಾಂತಿಕಾರಿ ಪಕ್ಷಕ್ಕೆ ಅಧಿಕಾರದ ಹಸ್ತಾಂತರ.
ಅದರ ನಂತರ ಇಡೀ ಸಮಾಜವನ್ನು ಸಮಾಜವಾದಿ
ನೆಲೆಯ ಮೇಲೆ ಮುನರ್ಸಂಘಟಿಸುವ
ಕಾಯಕದತ್ತ ಮುತುವರ್ಜಿಯಿಂದ ಮುನ್ನಡೆಯಬಹುದು.



– ಭಗತ್ ಸಿಂಗ್

ದಲಿತ–ಬುಡಕಟ್ಟು ಸಮುದಾಯಗಳ ನಿಜ ಅಭಿವೃದ್ಧಿಯತ್ತ ಕಾಣದ ಬದ್ಧತೆ

ಎಸ್.ವೈ.ಗುರುಶಾಂತ್

ಸಿದ್ದರಾಮಯ್ಯನವರ 'ಅಹಿಂದ' ರಾಜ–ಕಾರಣದ ಹೂರಣ ಬಯಲಾಗುವುದು ಪ್ರತಿ ವರುಷದ ಬಜೆಟ್‌ನಲ್ಲಿ.ಬಜೆಟ್ ಮಂಡನೆಗೆ ನಾಲ್ಕು ದಿನಗಳಿರುವಾಗಅಹಿಂದ ವಿಬಾಗಗಳ ಕೆಲವು ಸಂಘಟನೆಗಳೊಂದಿಗೆ ಸಮಾಲೋಚಿಸುವ ಸಂಪ್ರದಾಯವನ್ನೇನೋ ಸರಕಾರ ಪಾಲಿಸುತ್ತದೆ. ಆದರೆ ನಂತರಎಲ್ಲರನ್ನೂ, ಎಲ್ಲವನ್ನೂ ಮರೆಯುತ್ತದೆ. ಬಜೆಟ್‌ನಗಾತ್ರವನ್ನು ಹಿಗ್ಗಿಸುತ್ತಾ ಹೋದರೆ ಸಾಕು, ಎಲ್ಲರಅಭಿವೃದ್ಧಿತಾನೇತಾನಾಗಿ ಆಗಿ ಬಿಡುತ್ತದೆ–ಎಂದು ನಂಬಿಸಲಾಗುತ್ತಿದೆ.ಸಮಾಜಕಲ್ಯಾಣ ಸಚಿವ ಹೆಚ್.ಆಂಜನೇಯರವರ ವರ್ಷಪೂರ್ತಿ ಭಾಷಣವೇದಲಿತರ, ಬುಡಕಟ್ಟುಜನರಿಗೆ ಭರವಸೆ! ತಮ್ಮ ಹುಟ್ಟು ಹಬ್ಬಕ್ಕೋಇಲ್ಲವೇ ಹೊಸ ವರುಷದ ದಿನಾಚರಣೆಗೆ ಆದಿವಾಸಿಗಳ ಹಾಡಿಯಲ್ಲಿ ಮಲಗಿ ಏಳುವುದು ಅವರ ಪಾಲಿಗೆ ಸರಕಾರ ಬೀರಬಹುದಾದ ಬೆಳಕು!

ಗಾತ್ರ ದೊಡ್ಡದು, ಪಾತ್ರ ಸಣ್ಣದು!

ಈ ಬಾರಿಯ ಬಜೆಟ್‌ನ ಗಾತ್ರ ದಾಖಲೆಯದು ನಿಜ. ಒಟ್ಟು ಗಾತ್ರ 1,63,000 ಕೋಟಿಗಳು! ಹಾಗೆ ನೋಡಿದರೆ ಲಕ್ಷ ಕೋಟಿ ತಲುಪಿ ದಾಖಲೆ ಬರೆದೆವೆಂದು ಬೆನ್ನು ತಟ್ಟಿ ಕೊಂಡ ಯಡ್ಯೂರಪ್ಪ, ಜಗದೀಶ್ ಶೆಟ್ಟರ್‌ರವರನ್ನು ಸಿದ್ಧು ಮೀರಿಸಿದ್ದಾರೆ! ಹಣಕಾಸು ಖಾತೆ ತಾವೇ ಇರಿಸಿಕೊಂಡ ಈ ಎಲ್ಲರಿಂದ ವರುಷದಿಂದ ವರುಷಕ್ಕೆ ಅಂಕೆ ಸಂಖ್ಯೆಗಳು ಏರುತ್ತಲೇ ಇವೆ. ಹಾಗೆ ಸಾಲದ ಹೊರೆ ಏರಿಸುವಲ್ಲಿಯೂ ಸಹ. ಆದರೆ ನಿಜವಾಗಿಯೂ ಖರ್ಚಾಗುವುದೆಷ್ಟು? ಜನರಿಗೆ ತಲುಪುವುದೆಷ್ಟು? ಪ್ರಸಕ್ತ ಕಾನೂನುಗಳಂತೆ ಪರಿಶಿಷ್ಟ ಜಾತಿ ಮತ್ತು ಪ.ಪಂಗಡಗಳ ಜನಸಮುದಾಯದ ಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಬಜೆಟ್‌ನ ಹಣವನ್ನು ಮಾಡಲಾದ ಖರ್ಚು28,386 ಕೋಟಿಗಳು. ಅಂದರೆ 12,416 ಕೋಟಿ ಹಣ ಸರಕಾರದ ಬಳಿ ಖರ್ಚಾಗದೇ ಉಳಿದಿದೆ! ಕಳೆದ ಸಾಲಿನ ಬಜೆಟ್ ಜಾರಿಯ ಬಗ್ಗೆ ನಡೆದ ಸಭೆಯಲ್ಲಿ ಜನವರಿ 2016 ರಲ್ಲಿ ಮಾಡಲಾದ ಖರ್ಚು ಕೇವಲ ಶೇ.40 ರಷ್ಟು 8590 ಕೋ. ರೂ.ಗಳು ಮಾತ್ರ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ತೆಗೆದಿಡಬೇಕು. ಅಂದರೆ ಯೋಜನೆಯ ಶೇ 24.5 ರಷ್ಟು ಆದರೀಗ ಕೇಂದ್ರ ಸರಕಾರದ್ದು ಶೇ4 ರಷ್ಟು. ರಾಜ್ಯದ್ದು ಅಂತಹುದೇ ಸ್ಥಿತಿ. ಮೀಸಲಿಟ್ಟ ಹಣವನ್ನೂ ಕೂಡ ಈ ವಿಭಾಗಗಳ ಅಭಿವೃದ್ಧಿಗೆ ಬಳಸದೇ ಇರುವುದು ಮತ್ತೊಂದು ವಂಚನೆ.

ಉದಾಹರಣೆಗೆ 2016–17ರ ಆಯ–ವ್ಯಯ ಮಂಡಿಸುತ್ತಾ ಕರ್ನಾಟಕ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಕಳೆದ ಮೂರು ವರುಷಗಳಲ್ಲಿ ಎಸ್.ಸಿ, ಎಸ್.ಪಿ ಮತ್ತು ಟಿ.ಎಸ್.ಪಿ ಉಪಯೋಜನೆ ಅಡಿ ಎಲ್ಲಾ ಇಲಾಖೆಗಳಿಗೆ 40,800 ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು. ಆದ–ರೆ ಖರ್ಚಾಗಿರುವುದು 28386 ಕೋಟಿ ರೂ.ಗಳು ಎಂದಿದ್ದಾರೆ. ಉಳಿದದ್ದು ರೂ. 12416 ಕೋ. ಹೀಗೇಕಾಯಿತು ಎಂದು ಸರಕಾರಕ್ಕೆ ತಿಳಿಯದ ವಿಷಯವೇನಲ್ಲ. ಬಹುತೇಕ ಹಿಂದಿನ ಸರಕಾರಗಳ ಜಾಡು ಸಹ ಇಂತಹುದೇ ಆಗಿದ್ದು ನಿಜವಾಗಿ ಈ ಎಲ್ಲಾ ಹಣ ಅಗತ್ಯವಿರುವ ಸಮುದಾಯಗಳಿಗೆ ಪೂರ್ತಿ ನೀಡದೇ ಉಳಿಸಿಕೊಳ್ಳುವ ತಂತ್ರಗಾರಿ–ಕೆ. ಅದನ್ನೇ ಈ ಅಹಿಂದ ಸರಕಾರ ಮಾಡಿದೆ. 2013ರ ಬೆಳಗಾವಿ ಅಧಿವೇಶನದಲ್ಲಿ ಅಂಗೀಕರಿಸಿದ ಎಸ್.ಸಿ.ಪಿ–ಎಸ್.ಟಿ.ಪಿ ಉಪಯೋಜನೆಯ ಕಾಯ್ದೆಯಂತೆ ಮೀಸಲಿಟ್ಟ ಹಣವನ್ನು ಪೂರ್ಣ ಖರ್ಚು ಮಾಡಲಾಗದಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು, ಉಳಿದ ಆ ಹಣವನ್ನು ಮುಂದಿನ ವರುಷದ ಬಜೆಟ್ ಮೊತ್ತದಲ್ಲಿ ಸೇರಿಸಿ ಖರ್ಚು ಮಾಡಲಾಗುವುದೆಂದು ಇದೆ.

ಈ ಹಿನ್ನೆಲೆಯಲ್ಲಿ ಸರಕಾರ ನಿಜಕ್ಕೂ ಕಾಯ್ದೆಯನ್ನು ಜಾರಿ ಮಾಡುವುದೇ? ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವುದೇ? ಹಾಗಾದಲ್ಲಿ ಈ ವರ್ಷದ ಬಜೆಟ್ ಸುಮಾರು 17,000 ಕೋಟಿಗಳ ಮೊತ್ತಕ್ಕೆ ಮೂರು ವರುಷಗಳಲ್ಲಿ ಉಳಿದ 12,416 ಕೋಟಿ ರೂ.ಗಳು ಸೇರಿದ–ರೆ ಸುಮಾರು 30,000 ಕೋಟಿಯವರೆಗೂ ಎಸ್.ಸಿ. ಎಸ್,ಟಿ. ಉಪಯೋಜನೆಗಳಿಗೆ ಸಿಗುತ್ತದೆ. ಇದು ಅತ್ಯಂತ ದೊಡ್ಡದಾದ ಮೊತ್ತ ಎನ್ನುವುದರಲ್ಲಿ ಅನುಮಾನವಿಲ್ಲ. ಸರಕಾರಕ್ಕೆ ನಿಜಕ್ಕೂ ಕಾಳಜಿ ಮತ್ತು ಬದ್ಧತೆ ಇದ್ದಲ್ಲಿ ಈ ಸಮುದಾಯಗಳ ಕಲ್ಯಾಣವನ್ನು ಸಾಧಿಸುವಲ್ಲಿ ಮಹತ್ವದ ಹೆಜ್ಜೆ ಇಡಬಹುದು. ಈಗಿನ ಪ್ರಶ್ನೆಯೆಂದರೆ ಈ ಕಾಂಗ್ರೆಸ್ ಸರಕಾರಕ್ಕೆ ಆ ಬದ್ದತೆ ಇದೆಯೇ? ಮೀಸಲಿಟ್ಟ ಹಣವನ್ನು ಖರ್ಚು ಮಾಡದೇ ಇರುವಲ್ಲಿ ಮುಖ್ಯಮಂತ್ರಿ, ಸಮಾಜ ಕಲ್ಯಾಣ ಇಲಾಖೆ ಮಂತ್ರಿ ಮತ್ತು ಅಧಿಕಾರಶಾಹಿಯ ವೈಫಲ್ಯ ಮತ್ತು ಹಣ ಹಾಳೆಯಲ್ಲಿ ತೋರಿಸಬೇಕು ಹೊರತು ಖರ್ಚು ಮಾಡಬಾರದು ಎಂಬ ಸರಕಾರಗಳ ಯಥಾ ವಂಚನೆಯ ಕುತಂತ್ರಗಳೇ ಎದ್ದು ಕಾಣುತ್ತವೆ.

ಸೋರಿಕೆ ತಡೆಗೇಕೆ ಸಿದ್ಧವಿಲ್ಲ?

ಈ ಜಾಡನ್ನು ಸರಕಾರ ಬಿಡಬೇಕಿದೆ. ಆದ್ದರಿಂದ ಒಟ್ಟು ಹಣವನ್ನು ಖರ್ಚು ಮಾಡಲು ಸರಕಾರ ಸಮಗ್ರ ಯೋಜನೆಯನ್ನು ರೂಪಿಸಬೇಕಿದೆ. ಹಾಗೆಯೇ ಈ ಸಮುದಾಯಗಳಿಗೆ ಮೀಸಲಿಟ್ಟ ಹಣವನ್ನು ಇತ–ರೆ ಉದ್ದೇಶಗಳಿಗೆ ವಗಾಯಿಸಲು ಅವಕಾಶ ಕಲ್ಪಿಸಿ ಕಾಯ್ದೆಯ ಉದ್ದೇಶವನ್ನೇ ಬುಡಮೇಲು ಮಾಡುವ ಕಾಯ್ದೆಯ 7 ಡಿ ಕಲಮನ್ನು ರದ್ದು ಪಡಿಸಲೂ ಸಹ ಸರಕಾರ ಸಿದ್ಧವಿಲ್ಲ. ಈ ಹಣ ಅನ್ಯ ಉದ್ದೇಶಗಳಿಗೆ ನಿರಂತರವಾಗಿ ಸೋರಿಕೆಯಾಗುತ್ತಿದೆ. ಉದಾಹರಣೆಗೆ ಜಲಸಂಪನ್ಮೂಲ ಇಲಾಖೆಯಲ್ಲಿ ಎಸ್.ಸಿ.ಪಿ–ಎಸ್.ಟಿ.ಪಿ ಉಪಯೋಜನೆಗೆ ಮೀಸಲಿಟ್ಟ 1400 ಕೋಟಿ ರೂ.ಗಳು ಅನ್ಯ ಉದ್ದೇಶಗಳಿಗೆ ಬಳಸಲಾಗಿದೆ! ಎಲ್ಲವೂ ದಲಿತರು–ಬುಡಕಟ್ಟು ಜನರ ಹೆಸರಿನಲ್ಲೇ!

ಸಮಗ್ರ ಯೋಜನೆಯ ಆದ್ಯತೆ, ಅಗತ್ಯತೆ

ಒಂದೆಡೆ ಖರ್ಚು ಮಾಡದೇ ಉಳಿದ ಹಣ ಮತ್ತು ಈ ಸಲದ ಬಜೆಟ್ ಹಣ ಖರ್ಚು ಮಾಡುವ ಮೊದಲು ಯಾವ ಕ್ಷೇತ್ರಗಳು ಮತ್ತು ಸಮುದಾಯಗಳ ಆದ್ಯತೆಗಳತ್ತ ನಿರ್ದಿಷ್ಟ ಯೋಜನೆ ರೂಪಿಸಿ ಜಾರಿಗೊಳಿಸಲು ವಿವಿಧ ಸಂಘಟನೆಗಳು–ಸಂಸ್ಥೆಗಳು, ಅನುಭವಿ ವ್ಯಕ್ತಿಗಳ ಸಭೆ ಕರೆದು ಸಲಹೆಗಳನ್ನು ಪಡೆಯಬೇಕು. ಉದಾಹರಣೆಗೆ ದಲಿತರು, ಆದಿವಾಸಿಗಳು ಭೂಮಿಯಿಲ್ಲದೇ, ಮನೆ ನಿವೇಶನಕ್ಕೆ ಜಾಗವೂ ಇಲ್ಲದೇ ನಿರ್ಗತಿಕರಾಗಿಯೇ ಬಾಳುತ್ತಿದ್ದಾರೆ. ಅವರನ್ನು ಗುಲಾಮರನ್ನಾಗಿಸಿದ ದುರ್ಬರ ಜೀವನಕ್ಕೆ ಇದು ಪ್ರಮುಖ ಕಾರಣಗಳಲ್ಲೊಂದು. ಸರಕಾರದ ಭೂಮಿ ಜೊತೆಗೆ ಖಾಸಗಿಯಾಗಿಯೂ ಭೂಮಿಯನ್ನು ಖರೀದಿಸಿ ಕೊಡಲು ಈ ಹಣವನ್ನು ಬಳಸಬೇಕು. ಕೃಷಿಗೆ ಅಗತ್ಯ ಪರಿಕರಗಳು, ಮನೆ ನಿರ್ಮಾಣಕ್ಕೆ ಹಣ ನೀಡಬಹುದು. ಮಕ್ಕಳ ಶಿಕ್ಷಣಕ್ಕೆ ವಸತಿ, ಶುಲ್ಕ ಇತ್ಯಾದಿಗಳನ್ನು ಕೊಡಬಹುದು. ಈ ವಿಭಾಗಗಳ ಯುವಜನರಿಗೆ ಜಾತಿ ಆಧಾರಿತ ವೃತ್ತಿಗಳ ಬದಲು ಇಲ್ಲಾ ರೀತಿಯ ಉದ್ಯೋಗ ಮಾಡಬಲ್ಲ ಕೌಶಲ್ಯ ಅಭಿವೃದ್ಧಿ ತರಬೇತಿ, ವೃತ್ತಿ ಶಿಕ್ಷಣ, ಉನ್ನತ ಶಿಕ್ಷಣಕ್ಕೆ ಬಳಸಬಹುದು. ಸಾಲದ ಸುಳಿಯಲ್ಲಿ ಸಿಕ್ಕು ಜೀತದಾಳಾಗಿರುವುದನ್ನುತಪ್ಪಿಸಬಹುದು. ಈ ಮೂಲಕ ಆರ್ಥಿಕ ಸಬಲತೆ ಜೊತೆಗೆ ಸಾಮಾಜಿಕ ಶಕ್ತಿಯನ್ನು ಬೆಳೆಸಬೇಕು. ರೇಷನ್ ನೀಡಿಕೆ, ಕನಿಷ್ಠ 200 ದಿನಗಳ ಉದ್ಯೋಗ ಖಾತ್ರಿ, ಶೌಚಾಲಯ, ಕುಡಿಯುವ ನೀರು ಮುಂತಾದ ನಾಗರೀಕ ಸೌಲಭ್ಯಗಳನ್ನು ಕಲ್ಪಿಸುವ ಆದ್ಯತೆ ಇವೆಲ್ಲವನ್ನೂ ಒಳಗೊಳ್ಳುವ ಈ ಸಮುದಾಯಗಳ ಇಡೀ ಕುಟುಂಬವನ್ನೇ ಎದ್ದು ನಿಲ್ಲಿಸುವ ದಿಕ್ಕಿನಲ್ಲಿ ಒಂದು 'ಪ್ಯಾಕೇಜ್' ರೂಪದಲ್ಲಿ ಸಮಗ್ರ ಕಾರ್ಯಕ್ರಮ ರೂಪಿಸಲೂ ಬಹುದು. ವಿದ್ಯಾಥಿಗಳ ವೇತನ, ಪ್ರೋತ್ಸಾಹ ಧನ, ವಸತಿ ಸಹಿತ ಶಾಲೆಗಳ ಆರಂಭ ಸ್ವಾಗತಾರ್ಹ ಆ ಧರೆ ಈ ಮೊತ್ತವನ್ನು ಹೆಚ್ಚಿಸಿ ಎಲ್ಲಾ ವಿದ್ಯಾರ್ಥಿಗಳಿಗೆ ಸಿಗುವಂತೆ ಕ್ರಮ ವಹಿಸಬೇಕು. ಈಗಲೂ ಲಕ್ಷಾಂತರ ವಿದ್ಯಾರ್ಥಿಗಳು ಈ ಸೌಲಭ್ಯದಿಂದ ವಂಚಿತರು.

ಕಾಣದ ಇಚ್ಛಾಶಕ್ತಿ

ಸರಕಾರ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ಅಡಿಯಲ್ಲಿ 1536 ಕೋ. ರೂ ಖರ್ಚು ಮಾಡಲಾಗಿದೆಯೆಂದೂ ಅದು 1.52 ಲಕ್ಷ ಫಲಾನುಭವಿಗಳನ್ನು ತಲುಪಿದೆ ಎಂದು ಹೇಳಿರುವುದು ಪರಿಶೀಲನಾರ್ಹ. ಭೂಒಡೆತನ ಯೋಜನೆಯೂ ಹಾಗೆಯೇ. 2261 ಭೂ ರಹಿತರಿಗೆ 2673 ಎಕರೆ ಭೂಮಿ ನೀಡಿರುವ ಲೆಕ್ಕವನ್ನು ಕ್ರಾಂತಿಕಾರಿ ಎನ್ನಬಹುದೇ? ಬ್ಯಾಕ್ ಲಾಗ್ ಹುದ್ದೆ ತುಂಬುವ ಮಾತು ಸಹ ಎಂದಿನಂತೆ ಶುಷ್ಕ ಮಂತ್ರವಷ್ಟೇ. ಆದಿವಾಸಿಗಳ ಅಭಿವೃದ್ಧಿಗೆ 100 ಕೋಟಿ ಮೀಸಲಿಟ್ಟಿರುವುದಾಗಿ ಹೇಳುವ ಸರಕಾರ ಮಲೆಕುಡಿಯ, ಎರವ, ಜೇನುಕುರುವ, ಸೋಲಿಗ ಮುಂತಾದ ಸಮುದಾಯಗಳ ಅಭಿವೃದ್ಧಿಗೆ ಪ್ರತ್ಯೇಕ ಮಂಡಳಿ ರಚಿಸುವುದು ಸ್ವಾಗತಾರ್ಹವಾದರೂ ಅದರ ನೇತೃತ್ವವನ್ನು ಶಾಸಕರಿಗೆ ವಹಿಸುವುದು ಉದ್ದೇಶವನ್ನೇ ಹಾಳು ಮಾಡುವುದು. ಹಣವನ್ನು ಹೆಚ್ಚಿಸುವುದರ ಜೊತೆಗೆ ಅವುಗಳನ್ನು ಪ್ರಜಾಸತ್ತಾತ್ಮಕಗೊಳಿಸಬೇಕು, ಸ್ಥಾಪಿತ ಹಿತಾಸಕ್ತಿಗಳ ಹಿಡಿತದಿಂದ ಹಾಗೂ ಭ್ರಷ್ಟತೆಗಳಿಂದ ಮುಕ್ತಗೊಳಿಸುವುದರ ಅಗತ್ಯವಿದೆ. ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ರವರ 125ನೇ ಜನ್ಮ ವರ್ಷವನ್ನು ಅರ್ಥ ಪೂರ್ಣವಾಗಿ ಆಚರಿಸಬೇಕು. ಹಿಂದೆ ಅವರ ಕೃತಿಗಳ ಮರು ಮುದ್ರಣಕ್ಕೆ 4 ಕೋಟಿ ಮೀಸಲಿಟ್ಟರೂ ಕೆಲಸ ಮಾಡದಂತೆ ವಿಳಂಬ ನೀತಿಯನ್ನು ಅನುಸರಿಸುವುದೇಕೆ ಎಂಬ ಪ್ರಶ್ನೆ ಇದೆ.

ಒಟ್ಟಾರೆ ಸರಕಾರದ ಎಲ್ಲಾ ನುಡಿ ಮತ್ತು ನಡೆಗಳನ್ನು ನೋಡಿದರೆ ಪರಿಶಿಷ್ಟ ಜಾತಿ, ಪ.ಪಂಗಡಗಳ ಸಮುದಾಯಗಳ ಮೂಲ ಅಭಿವೃದ್ಧಿಗೆ ಸರಕಾರ ತನ್ನ ಬದ್ಧತೆಯನ್ನು ತೋರಿಸಬೇಕಿದೆ. ಉದಾರೀಕರಣ, ಜಾಗತೀಕರಣದ ನೀತಿಗಳ ನಿಷ್ಠ ಜಾರಿಯಲ್ಲಿರುವ ಕಾಂಗ್ರೆಸ್ ನ ಅಹಿಂದ ಸರಕಾರಕ್ಕೆ ರಾಜಕೀಯ ಇಚ್ಛಾಶಕ್ತಿಯ ಕೊರತೆ ಇರುವುದು ಸ್ಪಷ್ಟ. ಈ ವರುಷದಲ್ಲಿಯಾದರೂ ತೋರಬೇಕು ಎಂದು ಆಂದೋಲನ ನಡೆಸುವುದು ಅನಿವಾರ್ಯ.

PEÃ½zÀÁÄÝ

ಸಾಂವಿದಾನಿಕ ಅರಾಜಕತೆ

ಪಂಜಾಬ್ ಹೊಸ ಕಾನೂನೊಂದನ್ನು ಅಂಗೀಕರಿಸಿ, ತನಗಿಂತ ತಡವಾಗಿ ರಚಿತವಾದ ಪಕ್ಕದ ಹರಿಯಾಣದ ಜೊತೆಗಿನ ನೀರು ಹಂಚಿಕೆಯ ವಿಧಿಬದ್ಧ ಒಡಂಬಡಿಕೆಯನ್ನೇ ರದ್ದುಗೊಳಿಸಿದೆ. ಒಂದೇ ಒಂದು ಪತ್ರಿಕೆ 'ದಿ ಟ್ರಿಬ್ಯೂನ್' ಈ ವಿಶೇಷ ಸಾಂವಿಧಾನಿಕ ಅರಾಜಕತೆಯ ಬಗ್ಗೆ ಬರೆದು ನಮ್ಮನ್ನು ಎಚ್ಚರಿಸಿದೆ. ಯಥಾಸ್ಥಿತಿ ಕಾಯ್ದುಕೊಳ್ಳಬೇಕೆಂದು ಆದೇಶಿಸಿದ ಸುಪ್ರೀಂಕೋರ್ಟ್‌ಗೂ 'ಯಾರಿಗೂ ಕೊಡಲು ನಮ್ಮ ಬಳಿ ನೀರಿಲ್ಲ' ಎಂದು ಪಂಜಾಬ್ ಹೇಳಿದೆ. ಈ ಅಸಂಬದ್ಧ ಇಲ್ಲಿಗೇ ಮುಗಿಯುವುದಿಲ್ಲ. ಗೌರವಾನ್ವಿತ ಸೋಲಂಕಿಯವರು ಪಂಜಾಬ್ ಮತ್ತು ಹರಿಯಾಣಗಳೆರಡಕ್ಕೂ ರಾಜ್ಯಪಾಲರು. ಎರಡು ವಿಧಾನಸಭೆಗಳೂ ಬಜೆಟ್ ಅಧಿವೇಶನ ನಡೆಸುತ್ತಿವೆ. ತಮ್ಮ ವ್ಯಾಪ್ತಿಯ ರಾಜ್ಯ ಸರ್ಕಾರಗಳು ತಮಗೆ ಕೊಟ್ಟ ಭಾಷಣಗಳನ್ನು ಓದುವ ಕರ್ತವ್ಯವನ್ನು ರಾಜ್ಯಪಾಲರು ಮಾಡಿ ಮುಗಿಸಿದ್ದಾರೆ. ಪಂಜಾಬ್‌ನಲ್ಲಿ 'ನಾವು ಯಾವ ನೀರನ್ನೂ ಕೊಡುವುದಿಲ್ಲ' ಎಂದೂ, ಹರಿಯಾಣದಲ್ಲಿ 'ಇಂತಹ ಅನ್ಯಾಯವನ್ನು ಎಂದೂ ಒಪ್ಪುವುದಿಲ್ಲ' ಎಂದೂ ಅವರು ಹೇಳಿದ್ದಾರೆ. ಇದರ ಜೊತೆಗೆ, ಈ ಎರಡೂ ರಾಜ್ಯಗಳಲ್ಲಿ ಎನ್‌ಡಿಎ ಅಧಿಕಾರ ನಡೆಸುತ್ತಿದೆ. ಪಂಜಾಬ್‌ನಲ್ಲಿ ಶಿರೋಮಣಿ ಅಕಾಲಿ ದಳ ನೇತೃತ್ವದ ಮೈತ್ರಿಕೂಟ ಅಧಿಕಾರದಲ್ಲಿದೆ.


– ಶೇಖರ ಗುಪ್ತ, ಪ್ರಸಿದ್ಧ ಪತ್ರಕರ್ತ
(ಪ್ರಜಾವಾಣಿ 'ರಾಷ್ಟ್ರಕಾರಣ' ಅಂಕಣದಲ್ಲಿ)

ಬಜರಂಗಿಗಳಿಂದ ಬಚಾವ್ ಆದ ಗೋಮಾತೆ!

ಈ ದನಗಳು ಗುಜರಾತ್ನಿಂದ ಕುಂದಾಪುರ ತನಕ ಯಾವುದೇ ಅಡ್ಡಿ ಆತಂಕ ಇಲ್ಲದೆ ಬಂದಿದ್ದವು. ಎಲ್ಲ ದಾಖಲೆಗಳ ಸಮೇತ ಸಾಕಣೆಗೆಂದು ತೆಗೆದುಕೊಂಡು ಹೋಗುತ್ತಿದ್ದ ದನಗಳು ಇನ್ನೊಂದು ನೂರು ಕಿಲೊಮೀಟರ್ ದೂರ ಸಾಗಿದರೆ ತಲುಪಬೇಕಾದ ಜಾಗ ತಲುಪುತ್ತಿದ್ದವು. ಆದರೆ ಹೆದ್ದಾರಿಯಲ್ಲಿ ಈ ದನಗಳನ್ನು ಅಡ್ಡ ಹಾಕಿ, ಹಿಂದಿ ಮಾತನಾಡುತ್ತಿದ್ದ ಲಾರಿಯ ಚಾಲಕರು, ಸಿಬ್ಬಂದಿಗಳನ್ನು ಮುಸ್ಲಿಮರು ಎಂದು ಭಾವಿಸಿ ಥಳಿಸಿ ದೊಡ್ಡ ರಾದ್ಧಾಂತ ಮಾಡಿದ ಬಜರಂಗಿಗಳು ಈಗ ತಾವೇ ಸ್ವತಃ ಅಡ್ಡಡ್ಡ ಬಿದ್ದಿದ್ದಾರೆ. ಕುಂದಾಪುರ ಪೊಲೀಸರು ಲಾಠಿ ಬೀಸಿದ್ದಾರೆ. ಕೇಸು ಜಡಿದಿದ್ದಾರೆ. ಬಜರಂಗಿಗಳ ಕೈಗೆ ಸಿಕ್ಕಿ, ಪೊಲೀಸ್ ಠಾಣೆಯಲ್ಲಿ ಎರಡು ದಿನ ಅನ್ನ ನೀರಿಲ್ಲದೆ ಇದ್ದು ಬಳಿಕ ಗೋಶಾಲೆಗೆ ಸಾಗಿಸಲ್ಪಟ್ಟು ಅಲ್ಲಿಂದ ಬಜರಂಗಿಗಳ ಮೂಲಕ ಕೇರಳದ ಕಾಸಾಯಿ ಖಾನೆಗೆ ಹೋಗುವ ಸಂಭಾವ್ಯ ದುರಂತದಿಂದ ಗುಜರಾತ್ ಮತ್ತು ಪುಣೆಯಿಂದ ಬಂದ ಗೋಮಾತೆಯರು ತಪ್ಪಿಸಿಕೊಂಡಿದ್ದಾರೆ. ಕುಂದಾಪುರ ಪೊಲೀಸರಿಗೆ ಅಭಿನಂದನೆಗಳು.

–ಶಶಿಧರ ಹೆಮ್ಮಾಡಿ





ಸಂಯುಕ್ತ ಔಷಧಿಗಳ ನಿಷೇಧವೇಕೆ?

ಡಾ॥ ಪ್ರಕಾಶ್ ಸಿ.ರಾವ್

ಮಾರುಕಟ್ಟೆಯಲ್ಲಿ ದೊರಕುವ ಹೆಚ್ಚಿನ ಸಂಯುಕ್ತ ಔಷಧಿಗಳ ಹಿಂದೆ ಯಾವ ವೈಜ್ಞಾನಿಕ ಆಧಾರವಿಲ್ಲ. ಆದರೆ ಇದು ರೋ-ಗಿಗೆ ಅನುಕೂಲಕರ ಎಂದು ಔಷಧಿ ಕಂಪನಿಗಳು ಹೇಳುತ್ತವೆ. ಆದರೆ ಅದು ಸತ್ಯಕ್ಕೆ ದೂರವಾದದು. ಸಂಯುಕ್ತ ಔಷಧಿಗಳು ಔಷಧಿ ಕಂಪನಿಗಳಿಗೆ ತಮ್ಮ ಬ್ರಾಂಡ್ ಸ್ಥಾಪಿಸಲು ಸಹಾಯವಾಗುತ್ತವೆ, ಆದರೆ ರೋಗಿಗಳಿಗೆ ಅವು ದುಬಾರಿಯಾಗುತ್ತವೆ ಹಾಗೂ ಅನಗತ್ಯ ಅಡ್ಡಪರಿಣಾಮಗಳನ್ನು ಒಡ್ಡುತ್ತದೆ. ವೈದ್ಯರಿಗೆ ಔಷಧಿ ಉಪಯೋಗಿಸುವ ಸ್ವಾತಂತ್ರ್ಯವಿರುವುದಿಲ್ಲ. ಉದಾಹರಣೆಗೆ, ಕೆಮ್ಮಿನ ಸಿರಪ್‌ನಲ್ಲಿ ಕೋಡೀನ್ ಇದೆ ಹಾಗೂ ಇದು ಔಷಧಿ ಚಟ ಉಂಟುಮಾಡುತ್ತದಲ್ಲದೇ ಮಿದುಳಿನ ಮೇಲೆ ಅಡ್ಡಪರಿಣಾಮ ಬೀರುತ್ತದೆ.

ಕೋಕಟೆ ಸಮಿತಿ ಅನಗತ್ಯ ಔಷಧಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಔಷಧಿ ಸಂರಕ್ಷಣೆ ಬಗ್ಗೆ ಗಮನಹರಿಸುತ್ತಾ ಸುರಕ್ಷವಲ್ಲದ ಔಷಧಿಗಳ ಪಟ್ಟಿ ಜಾರಿಮಾಡಿದೆ. ಈ ಪಟ್ಟಿ ಅಂತಿಮವಲ್ಲ.

ನಂತರದಲ್ಲಿ, ಆರೋಗ್ಯ ಮಂತ್ರಾಲಯ 12ನೇ ಮಾರ್ಚ್ 2016ರಂದು 344 ಸಂಯುಕ್ತ ಔಷಧಿಗಳನ್ನು ನಿಷೇಧಿಸಿ ಗೆಝೆಟ್ ನೋಟಿಫಿಕೇಷನ್ ಹೊರಡಿಸಿದೆ. ಈ ಪಟ್ಟಿಯಲ್ಲಿ ಜನಪ್ರಿಯ ಔಷಧಿಗಳಾದ ಕೋರೆಕ್ಸ್ ಕೆಮ್ಮಿನ ಸಿರಪ್ ಹಾಗೂ ವಿಕ್ಸ್ ಆ್ಯಕ್ಷನ್ ಔಷಧಿಯು ಸೇರಿದೆ. ಹಾಗೂ ಇದು ಕೆಲವರ ಗಮನ ಸೆಳೆಯಲು ಸಾಧ್ಯವಾಯಿತು. ಇಂಥ ಒಳ್ಳೆಯ ಔಷಧಿಗಳನ್ನೇಕೆ ಸರಕಾರ ನಿಷೇಧಿಸಿದೆಯೆಂದು ಕೆಲವರು ಕೇಳಿದ್ದೂ ಆಯಿತು. ಏನಿದು ಸಂಯುಕ್ತ ಔಷಧಿ, ಯಾಕೆ ಈ ಔಷಧಿ ನಿಷೇಧ ಇತ್ಯಾದಿಗಳನ್ನು ತಿಳಿಯುವುದು ಅಗತ್ಯ.

ಭಾರತದಲ್ಲಿ 1970ಕ್ಕಿಂತಲೂ ಮೊದಲು ಔಷಧಿ ಕ್ಷೇತ್ರ ಅರಾಜಕತೆಯಲ್ಲಿ ಮುಳುಗಿತ್ತು. ಔಷಧಿ ನೀತಿ ಇರಲಿಲ್ಲ. ಔಷಧಿ ಬೆಲೆಗಳು ವಿಪರೀತವಾಗಿದ್ದವು. ಅಗತ್ಯ ಔಷಧಿಗಳು ಲಭ್ಯವಿರಲಿಲ್ಲ, ಅನಗತ್ಯ ಔಷಧಿಗಳೇ ಎಲ್ಲೆಡೆ ದೊರಕುತ್ತಿದ್ದವು, ಸರಕಾರ ಔಷಧಿ ಕ್ಷೇತ್ರದ ಬಗ್ಗೆ ನಿರ್ಲಕ್ಷ ತೋರಿತ್ತು, ಬಹುರಾಷ್ಟ್ರೀಯ ಔಷಧಿ ಕಂಪನಿಗಳು ಔಷಧಿ ಕ್ಷೇತ್ರವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಸ್ಥಳೀಯ ಕಂಪನಿಗಳಿಗೆ ಪೈಪೋಟಿ ಉಂಟುಮಾಡಿದ್ದವು, ಆ ಹಂತದಲ್ಲಿ ಎರಡು ಬೆಳವಣಿಗೆಗಳು ಭಾರತದ ಔಷಧಿ ಕ್ಷೇತ್ರದಲ್ಲಿ ಬದಲಾವಣೆ ತಂದವು, ಸಾರ್ವಜನಿಕ ಔಷಧಿ ಕಂಪನಿಗಳ ಪ್ರಾರಂಭ ಹಾಗೂ ಭಾರತೀಯ ಪೇಟೆಂಟ್ ಕಾನೂನು 1970. ಇದರಿಂದಾಗಿ ಭಾರತದಲ್ಲಿ ಕೆಲವು ಅಗತ್ಯ ಔಷಧಿಗಳು ಲಭ್ಯವಾದವು. ಔಷಧಿ ಬೆಲೆಗಳು ಕಡಿಮೆಯಾದವು. ಭಾರತೀಯ ಔಷಧಿ ಕಂಪನಿಗಳಿಗೆ ಪ್ರಾಮುಖ್ಯತೆ ಬಂದಿತು.

ಆದರೆ ಈ ಒಳ್ಳೆಯ ಬದಲಾವಣೆ ಬಹಳ ವರ್ಷಗಳು ಉಳಿಯಲಿಲ್ಲ. ಬಹುರಾಷ್ಟ್ರೀಯ ಕಂಪನಿಗಳೂ ತಮ್ಮ ಮೂಲದೇಶದ ಮೇಲೆ ಒತ್ತಡ ತಂದು ಭಾರತೀಯ ಪೇಟೆಂಟ್ ಕಾನೂನಿಗೆ ತಿದ್ದುಪಡಿ (2005) ತಂದವು. ಇದರ ಪರಿಣಾಮವಾಗಿ ಔಷಧಿ ಬೆಲೆಗಳು ಹೆಚ್ಚಿದವು, ಹೊಸ ಔಷಧಿಗಳು ವಿಪರೀತ ದುಬಾರಿಯಾದವು. ಔಷಧಿ ಕ್ಷೇತ್ರದಲ್ಲಿ ಪುನಃ ಇನ್ನೊಂದು ತರಹದ ಅರಾಜಕತೆ ಕಂಡುಬಂದಿತು.

ಈ ಹಂತದಲ್ಲಿ ಔಷಧಿ ಕ್ಷೇತ್ರದಲ್ಲಿ ಜನರ ಸಮಸ್ಯೆಗಳಾವುವು ಎಂದು ನೋಡೋಣ.

1. ಸರಕಾರ 'ಎಲ್ಲರಿಗೂ ಅಗತ್ಯ ಔಷಧಿ ಉಚಿತವಾಗಿ ಲಭ್ಯವಾಗುವಂತೆ ಮಾಡುತ್ತದೆಂದು' ಕೊಟ್ಟ ಹೇಳಿಕೆ ಜಾರಿಗೆ ಬರಲಿಲ್ಲ. ಆದರೂ ಕೆಲವು ಕಡೆ, ಕೆಲವೇ ಔಷಧಿಗಳು ಉಚಿತವಾಗಿ ದೊರಕುತ್ತಿದ್ದವು.
2. ಹೊಸ ಹೊಸ ಔಷಧಿಗಳು ದುಬಾರಿಯಾಗಿವೆ. ಸರಕಾರ ಹೊಸ ಔಷಧಿ ತಯಾರಿಕೆಗೆ ಕಡ್ಡಾಯ ಪರವಾನಗಿ ನೀಡುವುದರಲ್ಲಿ ಹಿಂದೆ ಬಿದ್ದಿದೆ.
3. ಅನಗತ್ಯ ಔಷಧಿಗಳು ಮಾರುಕಟ್ಟೆಯಲ್ಲಿ ದೊರಕುತ್ತಿವೆ. ಔಷಧಿ ನಿಯಂತ್ರಣ ಇದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗದರ್ಶನವನ್ನು ಸಂಪೂರ್ಣ ಕಡೆಗಣಿಸಿದೆ.

ಮಾರುಕಟ್ಟೆಯಲ್ಲಿ ದೊರಕುತ್ತಿರುವ ಅನಗತ್ಯ ಔಷಧಿಗಳಲ್ಲಿ ಸಂಯುಕ್ತ ಔಷಧಿಗಳು ಮುಖ್ಯವಾದವು. ಮಾರುಕಟ್ಟೆಯಲ್ಲಿ ದೊರಕುವ ಅರ್ಧದಷ್ಟು ಔಷಧಿಗಳು ಸಂಯುಕ್ತ ಔಷಧಿಗಳಾಗಿವೆ! ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ (ಯುಕೆ/ ಯು.ಎಸ್.ಎ/ ಜರ್ಮನಿ/ ಫ್ರಾನ್ಸ್/ ಜಪಾನ್/ ಆಸ್ಟ್ರೇಲಿಯಾ) ಈ ತರಹದ ಸಂಯುಕ್ತ ಔಷಧಿಗಳು ಲಭ್ಯವಿಲ್ಲ.

ಸಂಯುಕ್ತ ಔಷಧಿಗಳೆಂದರೇನು?

ಎರಡು ಅಥವಾ ಹೆಚ್ಚು ಔಷಧಿಗಳನ್ನು ಸೇರಿಸಿ ಒಂದೇ ಔಷಧಿ ಹೆಸರು ಕೊಟ್ಟು ಮಾರುವ ಔಷಧಿಗಳಿಗೆ ಸಂಯುಕ್ತ ಔಷಧಿಗಳೆನ್ನುವರು. ಉದಾ: ಐಬುಪ್ರೋಫೆನ್ + ಪೆರಸಿಟಮಾಲ್. ಯಾವ ಪಠ್ಯಪುಸ್ತಕಗಳಲ್ಲಿಯೂ ಸಂಯುಕ್ತ ಔಷಧಿಗಳ ಪ್ರಸ್ತಾಪ ಇಲ್ಲ. ವಿಶ್ವ ಆರೋಗ್ಯ ಸಂಸ್ಥೆಯ ಅಗತ್ಯ ಔಷಧಿ ಪಟ್ಟಿಯಲ್ಲಿ ಮಾರುಕಟ್ಟೆಯಲ್ಲಿ ದೊರಕುವ ಸಂಯುಕ್ತ ಔಷಧಿಗಳ ಪ್ರಸ್ತಾಪ ಇಲ್ಲ. ವಿಶ್ವ ಆರೋಗ್ಯ ಸಂಸ್ಥೆಯ ಅಗತ್ಯ ಔಷಧಿ ಪಟ್ಟಿಯಲ್ಲಿ ಕೆಲವು ಸಂಯುಕ್ತ ಔಷಧಿಗಳನ್ನು ಪಟ್ಟಿ ಮಾಡಿದೆ, ಹಾಗೂ ಇವುಗಳು ಸಂಯುಕ್ತ ಔಷಧಿಗಳಾಗಲು ವೈಜ್ಞಾನಿಕ ಆಧಾರವಿದೆ.

ಕ್ಷಯರೋಗದ ಔಷಧಿಗಳು
ಹೆಚ್.ಐ.ವಿಗೆ ಕೊಡುವ ಔಷಧಿಗಳೂ
ಐರನ್ + Folic acid
ಈಸ್ಟ್ರೋಜೆನ್ + ಪ್ರಜೆಸ್ಟಿರೋನ್

ಆದರೆ ಮಾರುಕಟ್ಟೆಯಲ್ಲಿ ದೊರಕುವ ಹೆಚ್ಚಿನ ಸಂಯುಕ್ತ ಔಷಧಿಗಳ ಹಿಂದೆ ಯಾವ ವೈಜ್ಞಾನಿಕ ಆಧಾರವಿಲ್ಲ. ಆದರೆ ಇದು ರೋಗಿಗೆ ಅನುಕೂಲಕರ ಎಂದು ಔಷಧಿ ಕಂಪನಿಗಳು ಹೇಳುತ್ತವೆ. ಆದರೆ ಅದು ಸತ್ಯಕ್ಕೆ ದೂರವಾದದು.

ಸಂಯುಕ್ತ ಔಷಧಿಗಳು ಔಷಧಿ ಕಂಪನಿಗಳಿಗೆ ತಮ್ಮ ಬ್ರಾಂಡ್ ಸ್ಥಾಪಿಸಲು ಸಹಾಯವಾಗುತ್ತವೆ, ಆದರೆ ರೋಗಿಗಳಿಗೆ ಅವು ದುಬಾರಿಯಾಗುತ್ತವೆ ಹಾಗೂ ಅನಗತ್ಯ ಅಡ್ಡಪರಿಣಾಮಗಳನ್ನು ಒಡ್ಡುತ್ತದೆ. ವೈದ್ಯರಿಗೆ ಔಷಧಿ ಉಪಯೋಗಿಸುವ ಸ್ವಾತಂತ್ರ್ಯವಿರುವುದಿಲ್ಲ.

ಈ ಸಂಯುಕ್ತ ಔಷಧಿಗಳಲ್ಲಿ ಎರಡು ಅಥವಾ ಮೂರು ಔಷಧಿಗಳಿರಬಹುದು. ಈ ಮೂರು ಔಷಧಿಗಳು ಅಗತ್ಯ ಔಷಧಿಗಳೇ, ಆದರೂ ಈ ಔಷಧಿಗಳ ಸಂಮಿಶ್ರಣವನ್ನು ಒಪ್ಪಲಾಗದು, ಅಗತ್ಯ ಔಷಧಿಗಳ ಮಿಶ್ರಣದಿಂದ ಅನಗತ್ಯ ಔಷಧಿಯೇ ತಯಾರಾಗುತ್ತದೆ. ಸಾಮಾನ್ಯವಾಗಿ ಔಷಧಿ ವಿಜ್ಞಾನದಲ್ಲಿ ಹೇಳಿದ, ಔಷಧಿಗಳು ಒಂದೇ ಘಟಕದ ಔಷಧಿಗಳು.

ಎಷ್ಟೋ ಬಾರಿ ಸಂಮಿಶ್ರ ಔಷಧಿಗಳಾವುವು, ಎಂದು ವೈದ್ಯರಿಗೂ ಗೊತ್ತಿರುವುದಿಲ್ಲ, ಆದರೆ ಅದರ ಹೆಸರಿನ ಆಧಾರದ ಮೇಲೆ ಅದನ್ನು ಬರೆದು ಕೊಡಲಾಗುತ್ತದೆ. ಅಂದರೆ ಅನೇಕ ಬಾರಿ ವೈದ್ಯರೂ ವಿವೇಚನೆ ಇಲ್ಲದೇ ಔಷಧಿ ಬರೆದುಕೊಟ್ಟಂತಾಗುತ್ತದೆ.

ಉದಾಹರಣೆಗೆ, ಕೆಮ್ಮಿನ ಸಿರಪ್‌ನಲ್ಲಿ ಕೋಡೀನ್ ಇದೆ ಹಾಗೂ ಇದು ಔಷಧಿ ಚಟ ಉಂಟುಮಾಡುತ್ತದಲ್ಲದೇ ಮಿದುಳಿನ ಮೇಲೆ ಅಡ್ಡಪರಿಣಾಮ ಬೀರುತ್ತದೆ. ಈ ಔಷಧಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದೇ ದೊಡ್ಡ ತಪ್ಪು.

ವೈದ್ಯರಿಗೆ ಔಷಧಿ ಉದ್ಯಮದ ವಿಷಯಗಳು ತಿಳಿದಿರುವುದೇ ಇಲ್ಲ. ಅನೇಕ ಬಾರಿ ಔಷಧಿ ಪ್ರತಿನಿಧಿ ಪರಿಚಯಿಸಿದ ಔಷಧಿಯನ್ನು ನೇರವಾಗಿ ಬರೆದು ಕೊಡುತ್ತಾರೆ. ಅದರ, ಘಟಕ, ಅಡ್ಡಪರಿಣಾಮ ಅದರ ಲಭ್ಯತೆ ಬಗ್ಗೆ ತಲೆಕೆಡಿಸಿಕೊಳ್ಳುವುದೇ ಇಲ್ಲ. ಇದೇ ಔಷಧಿ ಕಂಪನಿಗಳ ಉದ್ದೇಶ. ಹೀಗಾಗಿ ಅನಗತ್ಯ ಅಪಾಯಕರ ಔಷಧಿಗಳು ಮಾರುಕಟ್ಟೆಯಲ್ಲಿವೆ. ಇವುಗಳನ್ನು ನಿಷೇಧಿಸಲು ವೈದ್ಯರು ಎಂದಾದರೂ ಜವಾಬ್ದಾರಿ ತೆಗೆದುಕೊಂಡಿದ್ದಾರೆಯೇ? ಔಷಧಿ ಕಂಪನಿಗಳು ಕೇವಲ ಲಾಭದೃಷ್ಟಿಯಿಂದ ಔಷಧಿಗಳನ್ನು ತಯಾರಿಸುತ್ತವೆ, ಎಂಬುದನ್ನು ಮರೆಯುವಂತಿಲ್ಲ.

ಹಿಂದೊಮ್ಮೆ ಮಹಾರಾಷ್ಟ್ರ ಔಷಧಿ ಹಗರಣವನ್ನು ವರದಿ ಮಾಡುವ ಜಸ್ಟಿಸ್ ಲೆಂಟಿನ್ ಅವರು "ಮಾರುಕಟ್ಟೆಯಲ್ಲಿ ದೊರಕುವ ಔಷಧಿಗಳನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾಗುತ್ತದೆ, ಏಕೆಂದರೆ ಹಲವಾರು ಔಷಧಿಗಳಲ್ಲಿ ಒಂದೇ ಘಟಕದ ಔಷಧಿಯ ಬದಲು ಹಲವಾರು ಘಟಕಗಳುಳ್ಳ ಅನಗತ್ಯ ಅಪಾಯಕಾರಿ ಸಂಮಿಶ್ರ ಔಷಧಿಗಳೇ ಹೆಚ್ಚು!! ಇದು ಇಂದಿಗೂ ಸತ್ಯ'.

ಈ ಸಂಮಿಶ್ರ ಔಷಧಿಗಳನ್ನು ಔಷಧಿ ಕಂಪನಿಗಳು ವೈದ್ಯರಿಗೆ ಪರಿಚಯಿಸುತ್ತ ಔಷಧಿ ಬಗ್ಗೆ ಸುಳ್ಳು ಮಾಹಿತಿ ನೀಡುತ್ತವೆ. ಈ ಎಲ್ಲ ಔಷಧಿಗಳು ನಿಷೇಧಿಸಲು ಯೋಗ್ಯವಾಗಿವೆಯೆಂದು ಔಷಧಿ ಕ್ಷೇತ್ರದಲ್ಲಿ ಹೋರಾಟ ಮಾಡುತ್ತಾ ಬಂದಿರುವ ಸಂಸ್ಥೆಗಳು ಎರಡೂವರೆ ದಶಕಗಳಿಂದ ಹೇಳುತ್ತಾ ಬಂದಿವೆ. ಆದರೂ ಔಷಧಿ ನಿಯಂತ್ರಣ, ಸರಕಾರ ಜಾಣ ಕಿವುಡು ತೋರಿಸುತ್ತಾ ಈ ವಿಷಯವನ್ನು ಕಡೆಗಣಿಸಿದೆ.

ಔಷಧಿ ನಿಷೇಧ ಭಾರತದಲ್ಲಿ 1983ರಲ್ಲಿ ಪ್ರಾರಂಭವಾಯಿತು. ಈಗಾಗಲೇ ಹಲವಾರು ಔಷಧಿಗಳು ನಿಷೇಧಿಸಲಾಗಿದೆ. ಈ ಔಷಧಿ ನಿಷೇದ ಮಂದಗತಿಯಲ್ಲಿ ಸಾಗಿದೆ. ಆದರೆ ಈಗ ತಂದ ಔಷಧಿ ನಿಷೇಧ ಮೊಟ್ಟಮೊದಲ ಬಾರಿಗೆ ಔಷಧಿ ನಿಯಂತ್ರಣ ತೆಗೆದುಕೊಂಡ ಸೂಕ್ತ ಹೆಜ್ಜೆ, ಅದು ಶ್ಲಾಘನೀಯ. ಕಾರಣ

1) ಒಂದೇ ಸಾರಿ 344 ಔಷಧಿಗಳನ್ನು ನಿಷೇಧಿಸಿತು
2) ನಿಷೇಧ ಕೂಡಲೇ ಜಾರಿಗೆ ಬಂದಿದೆ. ಇದನ್ನು ಜನಪರ ನಿರ್ಣಯ ಎನ್ನಬಹುದು.

ಆದರೆ ಸಂಮಿಶ್ರ ಔಷಧಿಗಳ ನಿಯಂತ್ರಣ ಇನ್ನೂ ಸಂಪೂರ್ಣವಾಗಿಲ್ಲ. ಮಾರುಕಟ್ಟೆಯಲ್ಲಿ ದೊರಕುವ ಇತರೇ ಸಂಮಿಶ್ರ ಔಷಧಿ

ನೆಗಡಿ ಚಿಕಿತ್ಸೆಗಳು
ನೋವು ನಿವಾರಕಗಳು
ಆಂಟಿಬಯಾಟಿಕ್‌ಗಳು
ಸಕ್ಕರೆ ಕಾಯಿಲೆ ಔಷಧಿಗಳು
ಹಾರ್ಮೋನ್‌ಗಳು
ರಕ್ತದೊತ್ತಡಕ್ಕೆ ಬಳಸಲು ಔಷಧಿ
ಅಸ್ತಮಾ ಔಷಧಿಗಳು
ಟಾನಿಕ್‌ಗಳು
ಕೆಮ್ಮಿನ ಸಿರಪ್‌ಗಳು
ಚರ್ಮದ ಮುಲಾಮುಗಳು
ಆಂಟ್ರಾಸಿಡ್‌ಗಳು

ಈಗ ನಿಷೇಧಿಸಲ್ಪಟ್ಟ ಒಟ್ಟು ಔಷಧಿಗಳ ಪಟ್ಟಿ ದೊಡ್ಡದಾಗಿದೆ. ಯಾಕೆ ಈ ಔಷಧಿಗಳನ್ನು ಈಗ ನಿಷೇಧಿಸಲಾಗಿದೆ. ಈ ಔಷಧಿಗಳನ್ನು ತಯಾರಿಸಲು ಪರವಾನಗಿ ನೀಡುವಾಗ ರಾಜ್ಯದ ಔಷಧಿ ನಿಯಂತ್ರಣವು ವಿವೇಚನೆ ಮಾಡಲಿಲ್ಲವೇ? ಇಷ್ಟು ವರ್ಷ ಅಪಾಯಕರ ಈಗ ನಿಷೇಧಿಸಲ್ಪಟ್ಟ ಔಷಧಿಗಳನ್ನು ಜನರು ಉಪಯೋಗಿಸುತ್ತ ಅನೇಕ ಅಡ್ಡಪರಿಣಾಮಗಳನ್ನು ಅನುಭವಿಸಿದ್ದಾರಲ್ಲವೇ? ಹಾಗೂ ಹಣ ಕಳೆದುಕೊಂಡಿದ್ದಾರಲ್ಲವೇ? ಪ್ರಜಾಪ್ರಭುತ್ವದಲ್ಲಿ ಇದಕ್ಕೆ ಪರಿಹಾರವಿಲ್ಲವೇ? ಈ ಎಲ್ಲ ಔಷಧಿ ನಿಯಂತ್ರಣಗಳ ಮೇಲೆ ಕೇಂದ್ರ ಸರಕಾರ ಕಾನೂನು ಕ್ರಮ ತೆಗೆದುಕೊಳ್ಳಲು ತಯಾರಿದೆಯಾ?

ಈಗ ಸಂಮಿಶ್ರ ಔಷಧಿಗಳ ನಿಷೇಧ ಒಂದು ನಿರ್ಣಾಯಕ ಹೆಜ್ಜೆ. ಸರಕಾರ ಔಷಧಿ ಕ್ಷೇತ್ರದ ಅನೇಕ ಸಮಸ್ಯೆಗಳನ್ನು ಸರಿಪಡಿಸಲು ಮುಂದಾಗಿ ಜನಸಾಮಾನ್ಯರ ಆರೋಗ್ಯ ಸಾಧನೆಗೆ ಮುಂದಾಗುತ್ತದೆಯೆಂದು ನಂಬೋಣ. ●

ನಾಳಿನ ಕಾರ್ಯಕ್ರಮಗಳು :

1. **ಮಾರ್ಚ್ 30:** ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಅನಿರ್ದಿಷ್ಟ ಧರಣಿ, ಬೆಂಗಳೂರು.
2. **ಏಪ್ರಿಲ್ 11:** ಕೇಂದ್ರ ಸರ್ಕಾರಿ ನೌಕರರ ರೈಲ್ವೇ ಮತ್ತು ರಕ್ಷಣಾ ಕ್ಷೇತ್ರದ ನೌಕರರ ಸೇರಿದಂತೆ 11 ಬೇಡಿಕೆಗಳಿಗಾಗಿ ಮುಷ್ಕರ.
3. **ಏಪ್ರಿಲ್ 8 ರಿಂದ 14:** ದೇಶವ್ಯಾಪಿ ರೈತರ ಪ್ರತಿಭಟನಾ ವಾರಾಚರಣೆ: ಎಐಕೆಎಸ್
4. **ಏಪ್ರಿಲ್ 14:** ಡಾ॥ ಬಿ.ಆರ್. ಅಂಬೇಡ್ಕರ್ 125ನೇ ಜನ್ಮದಿನ. ವಿವಿಧೆಡೆ ಕಾರ್ಯಕ್ರಮಗಳು.

ಈಗ ಖೋಟಾ ರಾಷ್ಟ್ರೀಯವಾದದ ಕೇಕೆ

ನವದೆಹಲಿಯಲ್ಲಿ ಮಾರ್ಚ್ 19 ಮತ್ತು 20ರಂದು ನಡೆದ ಬಿಜೆಪಿ ರಾಷ್ಟ್ರೀಯ ಮಂಡಳಿ ಸಭೆಯು ದೇಶದಲ್ಲಿ ಜಾತ್ಯತೀತ – ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗಿನ ಸಂಘರ್ಷವನ್ನು ಹೆಚ್ಚಿಸುವ ಹಾದಿ ಹಿಡಿಯಲು ನಿರ್ಧರಿಸಿದೆ. ಬಿಜೆಪಿ ಅಧ್ಯಕ್ಷ ಅಮಿತ್ ಷಾ ಭಾಷಣ ಮತ್ತು ಅಧಿವೇಶನದಲ್ಲಿ ಅಂಗೀಕರಿಸಿದ ರಾಜಕೀಯ ಗೊತ್ತುವಳಿ ಸಾರಿರುವ ಸಂದೇಶ ಇದು.

ಬಿಜೆಪಿ ಆಕ್ರಮಣಕಾರಿ ರಾಷ್ಟ್ರೀಯವಾದದ ತನ್ನ ಆವೃತ್ತಿಯನ್ನು ಮುಂದೊತ್ತಲಿದೆ. ವಾಸ್ತವವಾಗಿ ಇದು ಹಿಂದೂ ರಾಷ್ಟ್ರವಾದವೇ. "ಭಾರತ್ ಮಾತಾಕೀ ಜೈ" ಎಂದು ಕೂಗಲು ನಿರಾಕರಿಸುವುದು ಸಂವಿಧಾನಕ್ಕೇ ಎಸಗುವ ಅಗೌರವವಾಗುತ್ತದೆ ಎಂದು ಅದರ ಗೊತ್ತುವಳಿ ಹೇಳಿದೆ. ಸಂವಿಧಾನದಲ್ಲಿ ಬಳಸಲಾದ 'ಭಾರತ್' ಪದವನ್ನು 'ಭಾರತ್ ಮಾತಾ' ಎಂದು ಅರ್ಥೈಸಲಾಗಿದೆ. ಇದೊಂದು ಘೋಷಣೆ ಮಾತ್ರವೇ ಅಲ್ಲ, ' ನಮ್ಮ ಸಂವಿಧಾನದ ಪ್ರಾಮುಖ್ಯತೆಯನ್ನು ಎತ್ತಿಹಿಡಿಯುವಲ್ಲಿ ನಾಗರಿಕರ ಸಾಂವಿಧಾನಿಕ ಕರ್ತವ್ಯದ ಪುನರುಚ್ಚಾರವೂ ಆಗಿದೆ' ಎಂದು ಬಿಜೆಪಿ ಘೋಷಿಸಿದೆ. ಹೀಗಾಗಿ ಬಿಜೆಪಿ ಪ್ರಕಾರ 'ಭಾರತ್ ಮಾತಾಕೀ ಜೈ' ಎಂದು ಕೂಗುವುದು ಒಂದು ಸಾಂವಿಧಾನಿಕ ಕರ್ತವ್ಯವಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಯಾವುದೇ ಪಾತ್ರವನ್ನು ನಿರ್ವಹಿಸದ ಆರ್‌ಎಸ್‌ಎಸ್ ನೇತೃತ್ವದ ಹಿಂದುತ್ವ ಪಡೆಗೆ ರಾಷ್ಟ್ರೀಯವಾದದ ಬಗ್ಗೆ ಹೇಳಿಕೊಳ್ಳುವಂತದ್ದೇನೂ ಇಲ್ಲ, ಅದರ ಹಿಂದೂ ಕೋಮುವಾದಿ ರೂಪಾಂತರದ ಬಗ್ಗೆಯಷ್ಟೇ ಅದು ಹೇಳಲು ಸಾಧ್ಯ. ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯವಾದಿಗಳು ಜೈ ಹಿಂದ್ ಮತ್ತು ಇಂಕ್ವಿಲಾಬ್ ಜಿಂದಾಬಾದ್‌ನಂಥ ವೈವಿಧ್ಯಮಯ ಘೋಷಣೆಗಳನ್ನು ಎತ್ತಿದ್ದರು. ಭಾರತ್ ಮಾತಾಕೀ ಜೈ ಘೋಷಣೆಯನ್ನು ಕಡ್ಡಾಯ ಮಾಡಬೇಕೆಂಬ ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಕರೆಯಾಗಲೀ ಅದಕ್ಕೆ ಅಸಾವುದ್ದಿನ್ ಓವೈಸಿ ವ್ಯಕ್ತಪಡಿಸಿದ ಪ್ರತಿಕ್ರಿಯೆಯಾಗಲೀ ರಾಷ್ಟ್ರೀಯವಾದದ ನಿಜವಾದ ಸ್ವರೂಪವನ್ನು ಬಿಂಬಿಸುವುದಿಲ್ಲ.

ಬಿಜೆಪಿಯು 'ರಾಷ್ಟ್ರ–ವಿರೋಧಿ' ಶಕ್ತಿಗಳ ವಿರುದ್ಧ ಹೋರಾಡುತ್ತದೆ ಎಂದು ಅಮಿತ್ ಷಾ ತಮ್ಮ ಭಾಷಣದಲ್ಲಿ ಹೇಳಿದ್ದಾರೆ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ 'ರಾಷ್ಟ್ರ–ವಿರೋಧಿ' ಚಟುವಟಿಕೆಗಳ ವಿರುದ್ಧ ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕೆಂಬ ಆರ್‌ಎಸ್‌ಎಸ್ ಬೇಡಿಕೆಯನ್ನು ಪುನರುಚ್ಚರಿಸಿದ್ದಾರೆ.

"'ಭಾರತ್ ಮಾತಾಕೀ ಜೈ' ಎಂದು ಹೊಸ ತಲೆಮಾರಿಗೆ ಹೇಳುವ ಸಮಯ ಬಂದಿದೆ" ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಈ ತಿಂಗಳ ಆರಂಭದಲ್ಲಿ ಹೇಳಿದ್ದರು. ಅವರ ಮಾತನ್ನೇ ಬಿಜೆಪಿ ಮುಂದುವರಿಸಿದೆ. ರಾಷ್ಟ್ರೀಯವಾದವನ್ನು ಹಿಂದೂ ರಾಷ್ಟ್ರೀಯವಾದವನ್ನಾಗಿ ಮಾಡುವ ಮೂಲಕ ದೇಶದಲ್ಲಿ ಧ್ರುವೀಕರಣ ಉಂಟುಮಾಡುವ ಆಶಯದಿಂದ ತಥಾಕಥಿತ ರಾಷ್ಟ್ರ–ವಿರೋಧಿಗಳ ವಿರುದ್ಧದ ಪ್ರಚಾರವನ್ನು ಕೈಗೆತ್ತಿಕೊಳ್ಳಲು ಬಿಜೆಪಿ ನಿರ್ಧರಿಸಿದೆ. ಬಹುಸಂಖ್ಯಾತ ಕೋಮುವಾದವು ಬಹಳ ಸುಲಭವಾಗಿ ರಾಷ್ಟ್ರೀಯವಾದದ ಮುಖವಾಡ ಹಾಕಬಲ್ಲದು ಎಂದು ಜವಾಹರಲಾಲ್ ನೆಹರೂ ಎಚ್ಚರಿಸಿದ್ದರು. ಪ್ರಸ್ತುತ ಬಿಜೆಪಿಯ ಪ್ರತಿಗಾಮಿ ರಾಷ್ಟ್ರೀಯವಾದ ಆ ಎಚ್ಚರಿಕೆಯನ್ನು ಸಾಬೀತು ಪಡಿಸುವಂತಿದೆ.

ರಾಜಕೀಯ ಗೊತ್ತುವಳಿಯು, ರಾಷ್ಟ್ರ–ವಿರೋಧಿ ಶಕ್ತಿಗಳನ್ನು ಬೆಂಬಲಿಸುತ್ತವೆ ಎಂದು ನಿರ್ದಿಷ್ಟವಾಗಿ ಎಡಪಕ್ಷಗಳನ್ನು ಗುರಿಯಾಗಿಸಿದೆ. ಮೋದಿ ಸರಕಾರದ 'ರಾಷ್ಟ್ರ–ವಿರೋಧಿ' ಆರ್ಥಿಕ ನೀತಿಗಳ ವಿರುದ್ಧ ಪ್ರಬಲವಾದ ವಿರೋಧ ರೂಪುಗೊಳ್ಳುತ್ತಿರುವುದರಿಂದ ಅದನ್ನು ಎದುರಿಸಲು ಮುಖ್ಯವಾಗಿ ಈ ರೀತಿ ಮಾಡಲಾಗುತ್ತಿದೆ. ಇತ್ತೀಚಿನ ಕೇಂದ್ರ ಬಜೆಟ್ ಪರೋಕ್ಷ ತೆರಿಗೆಗಳು ಮತ್ತು ಉಪಕರ(ಸೆಸ್)ಗಳನ್ನು ವಿಧಿಸುವ ಮೂಲಕ ಜನತೆಯ ಮೇಲೆ ಹೊರೆಗಳನ್ನು ಹೇರಿದೆ. ಶಿಕ್ಷಣ, ಆರೋಗ್ಯ ಮತ್ತು ಇತರ ಸಾಮಾಜಿಕ ಸೇವಾ ಕ್ಷೇತ್ರಗಳಲ್ಲಿ ಸರಕಾರಿ ವೆಚ್ಚವನ್ನು ಕಡಿತ ಮಾಡುವ ಹಿಂದಿನ ಎರಡು ಬಜೆಟ್‌ಗಳ ಪ್ರವೃತ್ತಿಯನ್ನೇ ಮುಂದುವರಿಸಲಾಗಿದೆ.

ಆಂತರಿಕ ಮತ್ತು ವಿದೇಶಾಂಗ, ಹೀಗೆ ಎರಡೂ ರಂಗಗಳಲ್ಲಿ ಮೋದಿ ಸರಕಾರದ ರಾಷ್ಟ್ರ–ವಿರೋಧಿ ನಡೆಗಳಿಂದ ಜನತೆಯ ಗಮನವನ್ನು ಬೇರೆಡೆ ಸೆಳೆಯುವುದಕ್ಕಾಗಿ ಕರ್ಕಶವಾದ 'ರಾಷ್ಟ್ರ–ವಿರೋಧಿ' ಕೂಗು ಹಾಕಲಾಗುತ್ತಿದೆ. ಕೋಮು ಧ್ರುವೀಕರಣವನ್ನು ಸೃಷ್ಟಿಸಿ, ಇನ್ನಷ್ಟು ಆಳಗೊಳಿಸುವುದೂ ಈ ಹೆಚ್ಚಿದ ಹಿಂದೂ ರಾಷ್ಟ್ರೀಯವಾದದ ಕೂಗಿನ ಉದ್ದೇಶವಾಗಿದೆ. ಐದು ರಾಜ್ಯಗಳಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಗಳನ್ನು, ಅದರಲ್ಲೂ ಮುಖ್ಯವಾಗಿ ಮುಂದಿನ ವರ್ಷದ ಆರಂಭದಲ್ಲಿ ಚುನಾವಣೆ ನಡೆಯಬೇಕಿರುವ ಪುಟ 12 ಕ್ಕೆ

> ಆಂತರಿಕ ಮತ್ತು ವಿದೇಶಾಂಗ, ಹೀಗೆ ಎರಡೂ ರಂಗಗಳಲ್ಲಿ ಮೋದಿ ಸರಕಾರದ ರಾಷ್ಟ್ರ-ವಿರೋಧಿ ನಡೆಗಳಿಂದ ಜನತೆಯ ಗಮನವನ್ನು ಬೇರೆಡೆ ಸೆಳೆಯುವುದಕ್ಕಾಗಿ ಕರ್ಕಶವಾದ 'ರಾಷ್ಟ್ರ-ವಿರೋಧಿ' ಕೂಗು ಹಾಕಲಾಗುತ್ತಿದೆ. ಕೋಮು ಧ್ರುವೀಕರಣವನ್ನು ಸೃಷ್ಟಿಸಿ, ಇನ್ನಷ್ಟು ಆಳಗೊಳಿಸುವುದೂ ಈ ಹೆಚ್ಚಿದ ಹಿಂದೂ ರಾಷ್ಟ್ರೀಯವಾದದ ಕೂಗಿನ ಉದ್ದೇಶವಾಗಿದೆ. ಐದು ರಾಜ್ಯಗಳಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಗಳನ್ನು, ಅದರಲ್ಲೂ ಮುಖ್ಯವಾಗಿ ಮುಂದಿನ ವರ್ಷದ ಆರಂಭದಲ್ಲಿ ಚುನಾವಣೆ ನಡೆಯಬೇಕಿರುವ ಉತ್ತರ ಪ್ರದೇಶವನ್ನು ಗಮನದಲ್ಲಿಟ್ಟುಕೊಂಡು.



ಪ್ರಕಾಶ ಕಾರಟ್



ಪರಮಾಣು ಸುರಕ್ಷತೆಯನ್ನು ಬಲಿ ಕೊಡುವ ಹುನ್ನಾರ ಇನ್ನಾದರೂ ನಿಲ್ಲಲಿ

ಜಪಾನ್‌ನ ಫುಕುಶಿಮಾ ದುರಂತದ ಐದನೇ ವಾರ್ಷಿಕದ ಸಂದರ್ಭದಲ್ಲೇ ಕಕ್ರಪಾರ್ ಸ್ಥಾವರದಲ್ಲಿ ಸೋರಿಕೆಯ ಘಟನೆ ನಡೆದಿರುವುದು ಭಾರತದಲ್ಲಿನ ಅಣು ವಿದ್ಯುತ್ ಸ್ಥಾವರಗಳ ಸುರಕ್ಷತೆಯಲ್ಲಿ ಕೊರತೆಯಿದೆ ಎನ್ನುವುದನ್ನು ಮತ್ತೆ ಮತ್ತೆ ನೆನಪಿಸುವಂತಿದೆ.ಈಗಲಾದರೂ ಪರಮಾಣು ಸ್ಥಾವರಗಳನ್ನು ಆಮದು ಮಾಡುವ ಹಾನಿಕಾರಕ ನೀತಿ ಮತ್ತು ವಿದೇಶಿ ಪರಮಾಣು ಕಂಪೆನಿಗಳಿಗೆ ಅನುಕೂಲ ಮಾಡಿಕೊಡಲು ಹೊಣೆಗಾರಿಕೆ ಕಾನೂನನ್ನು ದುರ್ಬಲಗೊಳಿಸುವ ನೀತಿಯನ್ನು ಸರಕಾರ ತಕ್ಷಣವೇ ಕೈಬಿಡಬೇಕು.

ಕಕ್ರಪಾರ್ ಅಣು ವಿದ್ಯುತ್ ಸ್ಟೇಷನ್ (ಕೆಎಪಿಎಸ್–1)ನ ಒಂದು ಘಟಕದಲ್ಲಿ ಭಾರಜಲ ಸೋರಿಕೆ ಆಗಿರುವುದು ದೇಶದಲ್ಲಿನ ಅಣು ವಿದ್ಯುತ್ ಸ್ಥಾವರಗಳಲ್ಲಿನ ಭದ್ರತೆ ಮತ್ತು ವಿಶ್ವಾಸಾರ್ಹತೆ ಬಗ್ಗೆ ಮತ್ತೊಮ್ಮೆ ಭೀತಿಯನ್ನು ಹುಟ್ಟು ಹಾಕಿದೆ. ಲಭ್ಯವಿರುವ ಅಲ್ಪಸ್ವಲ್ಪ ಮಾಹಿತಿಗಳ ಪ್ರಕಾರ 2016 ಮಾರ್ಚ್ 11ರಂದು ಕಕ್ರಪಾರ್‌ನಲ್ಲಿ ಸಾಧಾರಣವಾಗಿ ದೊಡ್ಡ ಮಟ್ಟದ ಸೋರಿಕೆ ಆಗಿದೆ. ಇದೀಗ ವಿದ್ಯುತ್ ಸ್ಥಾವರವನ್ನು ಮುಚ್ಚಲಾಗಿದೆ. ಅಣು ಇಂಧನ ನಿಯಂತ್ರಣ ಮಂಡಳಿ (ಎಇಆರ್‌ಬಿ)ಯ ವಿಜ್ಞಾನಿಗಳು ಅವಘಡದ ಸ್ವರೂಪ ಮತ್ತು ಗಂಭೀರತೆಯನ್ನು ಪರಿಶೀಲಿಸುತ್ತಿದ್ದಾರೆ ಹಾಗೂ ಸ್ಥಾವರದ ಸುರಕ್ಷತೆಯ ಖಾತರಿಗೆ ಕ್ರಮಕೈಗೊಳ್ಳುತ್ತಿದ್ದಾರೆ. ಜಪಾನ್‌ನ ಫುಕುಶಿಮಾ ದುರಂತದ ಐದನೇ ವಾರ್ಷಿಕದ ಸಂದರ್ಭದಲ್ಲೇ ಕಕ್ರಪಾರ್ ಘಟನೆ ನಡೆದಿರುವುದು ಭಾರತದಲ್ಲಿನ ಅಣು ವಿದ್ಯುತ್ ಸ್ಥಾವರಗಳ ಸುರಕ್ಷತೆಯಲ್ಲಿ ಕೊರತೆಯಿದೆ ಎನ್ನುವುದನ್ನು ಮತ್ತೆ ಮತ್ತೆ ನೆನಪಿಸುವಂತಿದೆ.

ಇದು ಹಳೆಯ ವಿದ್ಯುತ್ ಸ್ಥಾವರಗಳ ಸುರಕ್ಷತೆ ಮತ್ತು ವಿಶ್ವಾಸಾರ್ಹತೆಯ ಪ್ರಶ್ನೆ ಮಾತ್ರವೇ ಅಲ್ಲ, ಹೊಸದಾಗಿ ನಿರ್ಮಿಸಿದ ವಿದ್ಯುತ್ ಸ್ಥಾವರಗಳು ಕೂಡ ತೊಂದರೆಗೊಳಗಾಗಿವೆ. ಕೂಡಂಕುಳಮ್ ಅಣು ವಿದ್ಯುತ್ ಸ್ಥಾವರದ ಒಂದು ಮತ್ತು ಎರಡನೇ ಘಟಕಗಳೇ ಅದಕ್ಕೆ ತಾಜಾ ಉದಾಹರಣೆಗಳಾಗಿವೆ.

ಸುದೀರ್ಘ ವಿಳಂಬದ ನಂತರ, 2014 ಡಿಸೆಂಬರ್ ಕೊನೆಯಲ್ಲಿ ಕೂಡಂಕುಳಮ್ ಸ್ಥಾವರ ಕಾರ್ಯಾಚರಣೆ ಆರಂಭಿಸಿತ್ತು. ಆನಂತರದಲ್ಲಿ ಸ್ಥಾವರವು ಪದೇಪದೇ ತೊಂದರೆಗೊಳಗಾಗಿ ರಿಪೇರಿಗಾಗಿ ಅನೇಕ ಸಲ ಮುಚ್ಚಲಾಯಿತು. ಈ ಎಲ್ಲವೂ ಆದ ನಂತರವೂ ಈ ಸ್ಥಾವರವು ಅದರ ನಿಗದಿತ ಸಾಮರ್ಥ್ಯಕ್ಕಿಂತ ತುಂಬಾ ಕಡಿಮೆ ವಿದ್ಯುತ್ ಉತ್ಪಾದಿಸುತ್ತಿದೆ. 2015 ಎಪ್ರಿಲ್ ಮತ್ತು 2016 ಜನವರಿ ನಡುವೆ ಲೋಡ್ ಫ್ಯಾಕ್ಟರ್‌ನ ಶೇಕಡಾ 20ರಷ್ಟು ಮಾತ್ರ ವಿದ್ಯುತ್ ಉತ್ಪಾದಿಸಿದೆ. ಅಂದರೆ ಕೇವಲ ಶೇ. 20 ವಿದ್ಯುತ್‌ನ್ನು ಮಾತ್ರ ಅದು ಉತ್ಪಾದಿಸುತ್ತಿದೆ ಎಂದಾಯಿತು.

ಕೂಡಂಕುಳವ್‌ನ ಎರಡನೇ ಘಟಕದ ಆರಂಭಕ್ಕೆ ಗೊತ್ತುಡಿಸಿದ್ದ ಹಲವು ಸಮಯ ಮಿತಿಗಳು ದಾಟಿ ಹೋಗಿದ್ದರೂ ಅದು ಇನ್ನೂ ಕಾರ್ಯಾರಂಭ ಮಾಡಬೇಕಿದೆಯಷ್ಟೆ. ಎರಡೂ ಘಟಕಗಳ ವೆಚ್ಚ ಸುಮಾರು 22, 462 ಕೋಟಿ ರೂಪಾಯಿ ಎಂದು ಅಂದಾಜು ಮಾಡಲಾಗಿದೆ. ರಷ್ಯನ್ ಕಂಪೆನಿ ಸರಬರಾಜು ಮಾಡಿದ ಕೆಲವು ಉಪಕರಣಗಳು ಕಳಪೆಯಾಗಿರುವುದರಿಂದ ಈ ಸಮಸ್ಯೆಗಳು ಉದ್ಭವಿಸುತ್ತಿವೆ ಎನ್ನಲಾಗಿದೆ. ಹೀಗಾಗಿ, ಕೂಡಂಕುಳಮ್ ಸ್ಥಾವರ ನಿರ್ಮಾಣದ ವೇಳೆ ಅದರ ಭದ್ರತೆ–ಸುರಕ್ಷತೆ ಬಗ್ಗೆ ಸ್ಥಳೀಯ ಜನರು ವ್ಯಕ್ತಪಡಿಸಿದ್ದ ಭೀತಿ ಸಂಪೂರ್ಣವಾಗಿ ಸಮರ್ಥನೀಯ ಎಂದು ಕಾಣುತ್ತದೆ.

ಸುರಕ್ಷತೆ ಪ್ರಶ್ನೆ ಅಲ್ಲದೆ ನಾಗರಿಕ ಅಣುಸ್ಥಾವರಗಳ ಕಾರ್ಯಸಾಧ್ಯತೆ (ವಯಾಬಿಲಿಟಿ), ಅಪಾರ ವೆಚ್ಚ ಮತ್ತು ಭಾರೀ ವಿಳಂಬ ಇವೇ ಮೊದಲಾದವು ಜನರ ಕಳವಳಕ್ಕೆ ಪ್ರಮುಖ ಕಾರಣಗಳಾಗಿವೆ. ಅಣು ಶಕ್ತಿ ಇಲಾಖೆ, ಅಣು ಶಕ್ತಿ ಆಯೋಗ ಮತ್ತು ಅಣು ಶಕ್ತಿ ನಿಗಮ ಇವುಗಳು ಪ್ರತಿನಿಧಿಸುವ ನಮ್ಮ ದೇಶದ ಪರಮಾಣು ಆಡಳಿತ ವ್ಯವಸ್ಥೆಯು ಪಾರದರ್ಶಕತೆಯ ಕೊರತೆಗೆ ಹಾಗೂ ಸ್ವತಂತ್ರ ನಿಯಂತ್ರಣ ವ್ಯವಸ್ಥೆಯ ಕೊರತೆಗೆ ಕುಖ್ಯಾತಿಯಾಗಿದೆ. ಅಣು ಇಂಧನ ನಿಯಂತ್ರಣ ಮಂಡಳಿಯು ಅಣು ಶಕ್ತಿ ಇಲಾಖೆಯ ಅಧೀನದಲ್ಲಿದೆ.

ಒಂದು ಸ್ವತಂತ್ರ ಪರಮಾಣು ಸುರಕ್ಷತೆ ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸಬೇಕೆಂಬ ಪ್ರಯತ್ನಗಳು ಇನ್ನೂ ಕೈಗೂಡಿಲ್ಲ. ಯಾಕೆಂದರೆ ಈ ಸಂಬಂಧದ ಮಸೂದೆಯನ್ನು ಲೋಕಸಭೆಯ ಹಿಂದಿನ ಅಧಿವೇಶನ ಅಂಗೀಕರಿಸಲಿಲ್ಲ. ಸಂಸತ್ತಿನ ಸಂಬಂಧಪಟ್ಟ ಸ್ಥಾಯಿ ಸಮಿತಿಯು ಪ್ರಸ್ತಾವಿತ ನಿಯಂತ್ರಣ ಪ್ರಾಧಿಕಾರಕ್ಕೆ ಸ್ವಾಯತ್ತತೆ ಹಾಗೂ ಸ್ವಾತಂತ್ರ್ಯ ನೀಡುವ ವಿಚಾರದಲ್ಲಿ ಕೆಲವು ಶಿಫಾರಸುಗಳನ್ನು ಮಾಡಿದೆ. ಆದರೆ ಮಸೂದೆಯು ಸಂಸತ್ತಿನಲ್ಲಿ ಅಂಗೀಕಾರ ಆಗುವ ನಿಟ್ಟಿನಲ್ಲಿ ಸರಕಾರ ಯಾವುದೇ ಆಸಕ್ತಿಯನ್ನು ತೋರಿಲ್ಲ.

ಭಾರತ–ಅಮೆರಿಕ ಪರಮಾಣು ಒಪ್ಪಂದ ಆದ ನಂತರ, ಫ್ರಾನ್ಸ್ ಮತ್ತು ಅಮೆರಿಕದಿಂದ ದೊಡ್ಡ ಪ್ರಮಾಣದಲ್ಲಿ ಪರಮಾಣು ವಿದ್ಯುತ್ ಸ್ಥಾವರಗಳನ್ನು ಆಮದು ಮಾಡಿಕೊಳ್ಳುವ ಯೋಜನೆಯೊಂದನ್ನು ಭಾರತ ಸರಕಾರ ರೂಪಿಸಿತು. ಜೈತಪುರ, ಮಿಥಿ ವಿರ್ಧಿ ಮತ್ತು ಕೊವ್ವಡಗಳನ್ನು ಪರಮಾಣು ಪಾರ್ಕ್‌ಗಳೆಂದು ಗುರುತಿಸಲಾಗಿದ್ದು ಅಲ್ಲಿ ತಲಾ ಆರರ ವರೆಗೆ ರಿಯಾಕ್ಟರ್‌ಗಳುಳ್ಳ ಸ್ಥಾವರಗಳನ್ನು ಸ್ಥಾಪಿಸುವ ನಿರೀಕ್ಷೆಯಿದೆ. ಸ್ಥಾವರಗಳನ್ನು ಭಾರೀ ಮೊತ್ತದ ಹಣ ಕೊಟ್ಟು ಆಮದು ಮಾಡಲಾಗುತ್ತಿದ್ದು ಅವುಗಳಿಂದ ಉತ್ಪಾದನೆಯಾಗುವ ವಿದ್ಯುತ್ ಅತಿ ದುಬಾರಿಯಾಗಲಿದೆ ಮತ್ತು ತಾಳಿಕೆಯಾಗುವುದು ಕೂಡ ಕಷ್ಟವೇ.

ಆಮದು ಮಾಡಿಕೊಳ್ಳುವ ಈ ರಿಯಾಕ್ಟರ್‌ಗಳಿಗೆ ಅನುಕೂಲ ಆಗಲೆಂದೇ ಮೋದಿ ಸರಕಾರವು ಸಂಸತ್ ಅಂಗೀಕರಿಸಿದ ನಾಗರಿಕ ಪರಮಾಣು ಹೊಣೆಗಾರಿಕೆ ಕಾನೂನಿನ ಮಹತ್ವವನ್ನು ತಗ್ಗಿಸಲು ಪ್ರಯತ್ನಿಸುತ್ತಿದೆ. ಸಾಕಷ್ಟು ಸುರಕ್ಷತಾ ಕ್ರಮಗಳಿಗೆ ಮುಂದಾಗದಿರುವುದು ಮಾತ್ರವೇ ಅಲ್ಲದೆ ಒಂದು ವೇಳೆ ಪರಮಾಣು ಅವಘಡವೇನಾದರೂ ಸಂಭವಿಸಿದರೆ ಮತ್ತು ಅದರ ಪರಿಣಾಮವಾಗಿ ಏನಾದರೂ ಹಾನಿ ಉಂಟಾದರೆ ಭಾರತದ ಜನರು ಯಾವುದೇ ಪರಿಹಾರದ ಖಾತರಿ ಪಡೆಯದಂತೆಯೂ ಕೇಂದ್ರ ಸರಕಾರ ಕೆಲಸ ಮಾಡುತ್ತಿದೆ!

ಕಕ್ರಪಾರ್ ಸೋರಿಕೆಯು ದೇಶದಲ್ಲಿ ಯಾವುದೇ ಹೊಸ ಪರಮಾಣು ಸ್ಥಾವರವನ್ನು ಸ್ಥಾಪನೆ ಮಾಡುವುದರಿಂದ ಸರಕಾರವನ್ನು ತಡೆಯಬೇಕು. ಪರಮಾಣು ಸ್ಥಾವರಗಳನ್ನು ಆಮದು ಮಾಡುವ ಹಾನಿಕಾರಕ ನೀತಿ ಮತ್ತು ವಿದೇಶಿ ಪರಮಾಣು ಕಂಪೆನಿಗಳಿಗೆ ಅನುಕೂಲ ಮಾಡಿಕೊಡಲು ಹೊಣೆಗಾರಿಕೆ ಕಾನೂನನ್ನು ದುರ್ಬಲಗೊಳಿಸುವ ನೀತಿಯನ್ನು ಸರಕಾರ ತಕ್ಷಣವೇ ಕೈಬಿಡಬೇಕು. ದೇಶದಲ್ಲಿನ ಪರಮಾಣು ಸ್ಥಾವರಗಳ ಸಮಗ್ರ ಸುರಕ್ಷತಾ ಪರಿಶೀಲನೆಗೆ ಕ್ರಮ ಕೈಗೊಳ್ಳಬೇಕು. ಒಂದು ಸ್ವತಂತ್ರ ಪರಮಾಣು ನಿಯಂತ್ರಣ ಪ್ರಾಧಿಕಾರ ಇಲ್ಲದಿದ್ದರೆ ವಿಶ್ವಾಸಾರ್ಹ ಸುರಕ್ಷತೆ ಹಾಗೂ ಸ್ಥಾವರಗಳ ಸಂಭಾವ್ಯ ಅಪಾಯವನ್ನು ಅಂದಾಜು ಮಾಡುವ ಕೆಲಸ ಕಷ್ಟಸಾಧ್ಯ. ಹೀಗಾಗಿ ಅಂಥದ್ದೊಂದು ಸ್ವತಂತ್ರ ಪ್ರಾಧಿಕಾರ ಬೇಕೇಬೇಕು.

ಮುನ್ನೋಟ, ದೂರದೃಷ್ಟಿ ಇಲ್ಲದ ಬಜೆಟ್

– ಮುರಳಿ

ಅಹಿಂದ ಕುರಿತಂತೆ ಬಹುಶಃ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾತನಾಡಿರುವಷ್ಟು ಈ ವರ್ಗಗಳ ಶ್ರೇಯೋಭಿವೃದ್ಧಿಗೆ ಅವಿರತ ಶ್ರಮಿಸಿದವರೂ ಮಾತನಾಡಿಲ್ಲ. ಸರ್ವಾಂಗೀಣ ಅಭಿವೃದ್ಧಿ ಮಾಡುತ್ತೇನೆ ಎಂದು ಅವರು ಮಾತನಾಡಿರುವುದು ಸವಕಲು ನಾಣ್ಯವಾಗಿದೆ. ಅವರು ಅಧಿಕಾರಕ್ಕೆ ಬಂದ ನಂತರದಲ್ಲಿ ಅವರು ಕೈಗೊಂಡಿರುವ ಕಾರ್ಯಕ್ರಮಗಳು, ಮಂಡಿಸಿರುವ ಬಜೆಟ್‌ಗಳನ್ನು ಒಮ್ಮೆ ಅವಲೋಕನ ಮಾಡಿದರೆ ಇದು ವೇದ್ಯವಾಗಲಿದೆ.

ಸಿದ್ದರಾಮಯ್ಯನವರಿಗೆ ಇನ್ನು ಇರುವುದು ಎರಡು ಬಜೆಟ್ ಮಾತ್ರ. ಮುಂದಿನ ವರ್ಷ ಮಂಡಿಸುವ ಬಜೆಟ್ ಖಂಡಿತವಾಗಿಯೂ ಚುನಾವಣೆಯನ್ನು ಗುರಿಯಾಗಿಸಿಕೊಂಡಿರುತ್ತದೆ ಮತ್ತು ಅದರ ನಂತರ ಮಂಡಿಸುವ ಬಜೆಟ್‌ಗೆ ಕೇವಲ ವೋಟ್ ಆನ್ ಅಕೌಂಟ್ ಆಗಿರುತ್ತದೆ. ಹೀಗಾಗಿ 2016–17ನೇ ಸಾಲಿನ ಬಜೆಟ್ ಮತ್ತು ಇದಕ್ಕೂ ಹಿಂದೆ ಮಂಡಿಸಿದ ಎರಡು ಬಜೆಟ್‌ಗಳು ಅತ್ಯಂತ ಪ್ರಮುಖ.

ಈ ಮೂರು ಬಜೆಟ್‌ಗಳತ್ತ ಒಮ್ಮೆ ನೋಟ ಹರಿಸಿದರೆ ಅವರ ಮಾತಿಗೂ, ಕೃತಿಗೂ ಯಾವುದೇ ಸಾಮ್ಯತೆ, ಬದ್ಧತೆ ಇಲ್ಲದಿರುವುದು ಕಾಣಲಿದೆ. 2015–16ನೇ ಸಾಲಿನ ಬಜೆಟ್‌ಗೂ, 2016–17ನೇ ಸಾಲಿನ ಬಜೆಟ್‌ಗೂ ಯಾವುದೇ ವ್ಯತ್ಯಾಸ ಇಲ್ಲ. ಏಕೆಂದರೆ ಇದು ಕೇವಲ ಬುಕ್ ಅಡ್ಜೆಸ್ಟ್‌ಮೆಂಟ್ ಎಂಬುದನ್ನು ಬಿಟ್ಟರೆ ಸಿದ್ದರಾಮಯ್ಯ ಯಾವುದೇ ಮುನ್ನೋಟ, ದೂರದೃಷ್ಟಿ ಅಥವಾ ಯೋಜನೆ ಇಲ್ಲದಿರುವುದು ಸ್ಪಷ್ಟ.

ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನ (ಎಸ್‌ಜಿಡಿಪಿ) ಕ್ಕೆ ಕೃಷಿ ಕ್ಷೇತ್ರದ ಕೊಡುಗೆ ನಿರಂತರವಾಗಿ ಕುಸಿಯುತ್ತಿದೆ. 2014–15ನೇ ಸಾಲಿನಲ್ಲಿ ಈ ಕೊಡುಗೆ ಶೇ.14ರಷ್ಟು ಇದ್ದದ್ದು 2015–16ನೇ ಸಾಲಿನಲ್ಲಿ ಶೇ.8ಕ್ಕೆ ಕುಸಿದಿದೆ. ಅಂದರೆ ಕೃಷಿ ಕ್ಷೇತ್ರ ಇಂದು ಗಂಭೀರ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಅವಕಾಶಗಳು ಸೃಷ್ಟಿಯಾಗದೆ ಜನ ತತ್ತರಿಸುತ್ತಿದ್ದಾರೆ. ಬೆಂಗಳೂರು, ಮಹಾರಾಷ್ಟ್ರ, ಗೋವಾ ಮತ್ತಿತರ ಕಡೆ ಉದ್ಯೋಗ ಅರಸಿ ಗುಳೆ ಹೋಗುತ್ತಿದ್ದಾರೆ. ಕೃಷಿ ಕೂಲಿ ಕಾರ್ಮಿಕರು ಗುಳೆ ಹೋಗುವುದನ್ನು ನಿಯಂತ್ರಿಸಲು ಬಜೆಟ್‌ನಲ್ಲಿ ಯಾವುದೇ ಕಾರ್ಯಕ್ರಮಗಳನ್ನು ಘೋಷಿಸಿಲ್ಲ.

ಕೃಷಿ ಕೂಲಿಕಾರ್ಮಿಕರು ಮಾತ್ರವಲ್ಲ ಇಂದು ಎಲ್ಲ ವರ್ಗದ ರೈತರು ಗಂಭೀರ ಸಂಕಷ್ಟದಲ್ಲಿ ಸಿಲುಕಿದ್ದಾರೆ. ಕಳೆದ ಸಾಲಿನಲ್ಲಿ ಅತಿ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿರುವ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಕಳೆದ ವರ್ಷದಲ್ಲಿ ಮಾತ್ರವೇ ರಾಜ್ಯದಲ್ಲಿ ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡರು.

ಕೇಂದ್ರ ಸರ್ಕಾರ ಉದ್ಯೋಗ ಖಾತ್ರಿ ಯೋಜನೆಗೆ ಮೊದಲೇ ಅನುದಾನ ಕಡಿತಗೊಳಿಸಿ ಕೂಲಿಕಾರ್ಮಿಕರು ಹೊಟ್ಟೆಗೆ ತಣ್ಣೀರು ಬಟ್ಟೆ ಹಾಕಿಕೊಳ್ಳುವಂತೆ ಮಾಡಿದೆ. ಇಂತಹ ಸಂದರ್ಭದಲ್ಲಿ ರೈತರು ಮತ್ತು ಕೂಲಿಕಾರ್ಮಿಕರ ನೆರವಿಗೆಂದು ಒಂದೇ ಒಂದು ಯೋಜನೆಯನ್ನು ರಾಜ್ಯ ಬಜೆಟ್‌ನಲ್ಲಿ ರೂಪಿಸಲು ಸಾಧ್ಯವಾಗಿಲ್ಲ. ಇದು ಕೃಷಿ ಕ್ಷೇತ್ರವನ್ನು ರಾಜ್ಯ ಸರ್ಕಾರ ಕಡೆಗಣಿಸಿರುವುದನ್ನು ತೋರಿಸುತ್ತದೆ. ಕಳೆದ ಸಾಲಿನಲ್ಲಿ ಕೃಷಿ ಕ್ಷೇತ್ರಕ್ಕೆ ಒಟ್ಟಾರೆ ಜಿಡಿಪಿಯ ಶೇ.3ರಷ್ಟು ಹಣವನ್ನು ಮೀಸಲಿಡಲಾಗಿತ್ತು. ಈ ಬಾರಿಯೂ ಅಷ್ಟೇ ಹಣವನ್ನು ನೀಡಲಾಗಿದೆ.


ಸೇವಾ ವಲಯ ಎಷ್ಟೇ ವೇಗವಾಗಿ ಬೆಳೆದರೂ ಜಿಡಿಪಿಗೆ ಎಷ್ಟೇ ಕೊಡುಗೆ ನೀಡಿದರೂ ಉದ್ಯೋಗ ಸೃಷ್ಟಿಯಲ್ಲಿ ಈಗಲೂ ಕೃಷಿ ಕ್ಷೇತ್ರದ್ದೇ ಮೊದಲ ಸ್ಥಾನ. ಅನ್ನಭಾಗ್ಯ ನೀಡಿದರೆ ಬಡತನ ನಿರ್ಮೂಲನೆಯಾಗುವುದಿಲ್ಲ. ಬದಲಿಗೆ ಕಾರ್ಮಿಕರಿಗೆ ಕೆಲಸ ನೀಡುವ ಯೋಜನೆಗಳನ್ನು ರೂಪಿಸಬೇಕು. ಕೇಂದ್ರ ಸರ್ಕಾರ ರೇಗಾ ಯೋಜನೆಗೆ ಕಡಿತಗೊಳಿಸಿರುವ ಅನುದಾನವನ್ನು ರಾಜ್ಯ ಸರ್ಕಾರ ನೀಡಬೇಕಾಗಿತ್ತು. ಜೊತೆಗೆ ಕೃಷಿ ಕೆಲಸಗಳೊಂದಿಗೆ ಈ ಯೋಜನೆಯನ್ನು ಜೋಡಿಸುವ ಕೆಲಸ ರಾಜ್ಯ ಸರ್ಕಾರ ಕೈಗೊಳ್ಳಬೇಕಿತ್ತು. ಸಿದ್ದರಾಮಯ್ಯನವರು ಇಲ್ಲಿ ಸಂಪೂರ್ಣವಾಗಿ ಸೋತಿದ್ದಾರೆ.

ಅವರು ನಿರ್ಲಕ್ಷಿಸಿರುವ ಇನ್ನಿತರ ಪ್ರಮುಖ ಕ್ಷೇತ್ರಗಳು ವಿದ್ಯುತ್ ಮತ್ತು ಕೈಗಾರಿಕೆ. ಇಲ್ಲಿ ಕೈಗಾರಿಕಾ ವಲಯಕ್ಕೆ ಕಳೆದ ಸಾಲಿನಲ್ಲಿ ನೀಡಿದಷ್ಟೆ ಶೇ.1ರಷ್ಟು ನೀಡಿದ್ದರೆ, ವಿದ್ಯುತ್ ಕ್ಷೇತ್ರಕ್ಕೆ ಕಳೆದ ವರ್ಷ ನೀಡಿದ್ದಕ್ಕಿಂತ ಶೇ.1ರಷ್ಟು ಕಡಿತಗೊಳಿಸಿದ್ದಾರೆ.

ಪ್ರತಿ ದಿನ ಏಳು ಗಂಟೆ ಮೂರು ಫೇಸ್ ವಿದ್ಯುತ್ ನೀಡುವುದಾಗಿ ಬೊಗಳೆ ಬಿಡುವ ಸಿದ್ದರಾಮಯ್ಯನವರು ವಿದ್ಯುತ್ ಕ್ಷೇತ್ರಕ್ಕೆ ನೀಡುವ ಹಣವನ್ನು ಕಡಿತಗೊಳಿಸುವುದೆಂದರೆ ಏನೆನ್ನಬೇಕು? ಅಂದರೆ ಇಲ್ಲಿ ವಿದ್ಯುತ್ ಉತ್ಪಾದನೆ ಮಾಡಿ ವಿತರಿಸುವ ಸಂಪೂರ್ಣ ಜವಾಬ್ದಾರಿಯಿಂದ ಸರ್ಕಾರ ನುಣುಚಿಕೊಳ್ಳಲು ಪ್ರಯತ್ನಿಸುತ್ತಿರುವುದು ಕಾಣುತ್ತದೆ. ಅಂದರೆ ಮುಂದಿನ ದಿನಗಳಲ್ಲಿ ವಿದ್ಯುತ್ ಉತ್ಪಾದನೆ ಮತ್ತು ವಿತರಣೆಯನ್ನು ಸಂಪೂರ್ಣವಾಗಿ ಖಾಸಗೀಕರಣಗೊಳಿಸುವುದಕ್ಕೆ ಬೇಕಾದ ಭೂಮಿಕೆಯನ್ನು ಸಿದ್ದಪಡಿಸಲಾಗಿದೆ.

ಕೈಗಾರಿಕಾ ಕ್ಷೇತ್ರಕ್ಕೆ ಕಳೆದ ಸಾಲಿನ ಬಜೆಟ್‌ನಲ್ಲಿ ಶೇ.1ರಷ್ಟು ಮೀಸಲಿರಿಸಲಾಗಿತ್ತು. ಈ ಬಾರಿಯೂ ಅದರಲ್ಲಿ ಯಾವುದೇ ಬದಲಾವಣೆ ಇಲ್ಲ. ಅಂದರೆ ವಿದೇಶಿ ಅಥವಾ ಸರ್ಕಾರಿ ಸ್ವಾಮ್ಯದ ಕಂಪನಿಗಳು ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಅನುವು ಮಾಡಿಕೊಡಲಾಗಿದೆ. ಕೈಗಾರಿಕೆಗಳನ್ನು ಸ್ಥಾಪಿಸುವುದು, ಅದಕ್ಕೆ ಅಗತ್ಯವಾದ ಮೂಲ ಸೌಕರ್ಯಗಳನ್ನು ನೀಡುವುದರಿಂದ ಸಂಪೂರ್ಣ ಹಿಂದೆ ಸರಿಯಲಾಗಿದೆ. ಸಂಕಷ್ಟದಲ್ಲಿರುವ ರಾಜ್ಯ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಿ ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವ ಯಾವುದೇ ಯೋಜನೆಗಳು ಬಜೆಟ್‌ನಲ್ಲಿಲ್ಲ.

ವೆಚ್ಚ (ಯೋಜನೆ & ಯೋಜನೇತರ) ೨೦೧೬–೧೭ ಆಯವ್ಯಯ ಅಂದಾಜು ರೂಪಾಯಿ ಯಾವ ಭಾಗ ಎಷ್ಟೆಷ್ಟು?



ರಾಜ್ಯ ಸರ್ಕಾರ ಕಳೆದ ವರ್ಷ ಕೈಗಾರಿಕಾ ನೀತಿಯನ್ನು ಬಿಡುಗಡೆ ಮಾಡಿತು. ಅದನ್ನು ಅನುಷ್ಠಾನಗೊಳಿಸಲು ಬೇಕಾದ ಕ್ರಮಗಳನ್ನಾದರೂ ಕೈಗೊಳ್ಳಬೇಕಾಗಿತ್ತು. ಬದಲಿಗೆ ಖಾಸಗಿ ಕಂಪನಿಗಳಿಗೆ ರಾಜ್ಯದ ಸಂಪತ್ತನ್ನು ಒಪ್ಪಿಸಲು ಕೈಗಾರಿಕಾ ನೀತಿ ರೂಪಿಸಲಾಗಿದೆಯೇ ವಿನಃ ರಾಜ್ಯ ಸರ್ಕಾರ ಮುತುವರ್ಜಿ ವಹಿಸಿ ಕೈಗಾರಿಕೆಗಳನ್ನು ಸ್ಥಾಪಿಸಲು ಅಲ್ಲ. ಸಿದ್ದರಾಮಯ್ಯ ಮಂಡಿಸಿದ ಮೊದಲ ಮತ್ತು ಎರಡನೇ ಬಜೆಟ್‌ಗಳು ಕೇವಲ ಭಾಗ್ಯಗಳಿಗೆ ಸೀಮಿತವಾಗಿತ್ತು. ಮೂರನೆ ಬಜೆಟ್‌ನಲ್ಲಿ ಯಾವುದೇ ದೂರದೃಷ್ಟಿ ಅಥವಾ ಸರ್ವಾಂಗೀಣ ಅಭಿವೃದ್ಧಿಯ ಲವಲೇಶವೂ ಇಲ್ಲ. ಇನ್ನಿರುವುದು ಪೂರ್ಣ ಪ್ರಮಾಣ ಒಂದು ಬಜೆಟ್ ಮಾತ್ರ. ಅದು ಚುನಾವಣೆ ಘೋಷಣೆಗಳಿಂದ ತುಂಬಿರಲಿದೆ.

ರೈತ ಕೃಷಿ–ವಿರೋಧಿ, ಅಭಿವೃದ್ಧಿ–ವಿರೋಧಿ ಬಜೆಟ್ : ರೈತ ಸಂಘ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾರ್ಚ್ 17ರಂದು ಮಂಡಿಸಿದ 2016–17ರ ಸಾಲಿನ ಕರ್ನಾಟಕ ರಾಜ್ಯದ ಬಜೆಟ್ ಬಗ್ಗೆ ಈ ಕೆಳಗಿನ ಹೇಳಿಕೆಯನ್ನು ಮಾರ್ಚ್ 20ರಂದು ನೀಡಿದೆ:


ರಾಜ್ಯದ ವ್ಯವಸಾಯ ಕಳೆದ ಮೂರು ವರ್ಷಗಳಿಂದ ಸತತ ಬರಗಾಲವನ್ನು ಎದುರಿಸುತ್ತಾ ಬಂದಿದೆ. ಮಾತ್ರವಲ್ಲಾ ಜಾಗತೀಕರಣದ ನೀತಿಗಳಿಂದ ರಾಜ್ಯದ ಕೃಷಿರಂಗ ಗಂಭೀರ ಬಿಕ್ಕಟ್ಟಿಗೊಳಗಾಗಿ ರೈತರು ದೊಡ್ಡ ರೀತಿಯ ಸಾಲಬಾಧೆಗೊಳಗಾಗಿ ದೊಡ್ಡ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕಳೆದ 6–7 ತಿಂಗಳಲ್ಲಿ ರೈತರ ಆತ್ಮಹತ್ಯೆಗಳ ಸಂಖ್ಯೆ 1,100ಕ್ಕೂ ಹೆಚ್ಚಾಗಿದೆ. ಅದೇ ಸಂದರ್ಭದಲ್ಲಿ ರಾಜ್ಯ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ನಲುಗುತ್ತಿದೆ. ಗ್ರಾಮೀಣ ಪ್ರದೇಶದ ಕೃಷಿ ಕೂಲಿಕಾರರು ಮತ್ತು ಕಸಬುದಾರರು ಬರಗಾಲ ಮತ್ತು ವ್ಯವಸಾಯದಲ್ಲಿ ಕೂಲಿ ಕೆಲಸದ ಲಭ್ಯತೆ ಕಡಿಮೆಯಾಗುತ್ತಿರುವುದರಿಂದ ಮತ್ತು ರಾಜ್ಯ ಸರಕಾರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಭ್ರಷ್ಟರ ಲೂಟಿಗೆ ಧಾರಾಳವಾಗಿ ಬಿಟ್ಟಿರುವುದರಿಂದ ನಗರಗಳ ಕಡೆ ವಲಸೆ ಹೋಗುವುದು ಮುನ್ನಡೆದಿದೆ. ಅದೇ ಸಂದರ್ಭದಲ್ಲಿ ತಲಾ ಆದಾಯವು ಪ್ರತಿದಿನಕ್ಕೆ 10ರೂಗಳಿಗಿಂತ ಹೆಚ್ಚಾಗದಿರುವಾಗ ಅವರು ಅಪೌಷ್ಠಿಕತೆಯ ಸಾವುಗಳಿಗೆ ತುತ್ತಾಗುವುದು ವ್ಯಾಪಕವಾಗುತ್ತಿದೆ. ನಗರದ ಗುತ್ತಿಗೆ ಮತ್ತಿತರೇ ಅಸಂಘಟಿತ ವಲಯದ ಕಾರ್ಮಿಕರ ತಲಾ ಆದಾಯವೂ 40 ರೂ.ಗಳಿಗಿಂತಲೂ ಕಡಿಮೆ ಇದೆ. ಆರ್ಥಿಕ ಸಮೀಕ್ಷೆಯು ಕೃಷಿ ಬೆಳವಣಿಗೆಯ ದರ ಶೇ 4.5ಕ್ಕೆ ಕುಂಠಿತಗೊಂಡಿರುವುದನ್ನು ಹೇಳುತ್ತಿದೆ. ಆಹಾರದ ಧಾನ್ಯದ ಉತ್ಪಾದನೆಯು 16ಲಕ್ಷ ಟನ್‌ಗಳಷ್ಟು ಕುಸಿದಿದೆ. ಅದೇ ರೀತಿ, ಕೈಗಾರಿಕಾ ಬೆಳವಣಿಗೆಯ ದರ ಹೆಚ್ಚಳಗೊಳ್ಳದಿರುವುದನ್ನು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಗಳ ಬೆಳವಣಿಗೆಯ ದರ 6.2ಕ್ಕೆ ಕುಸಿಯುತ್ತಿರುವುದನ್ನು ಹೇಳುತ್ತಿದೆ. ಅದೇ ಸಂದರ್ಭದಲ್ಲಿ ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನದಲ್ಲಿ ಕೃಷಿ ವಲಯದ ಕೊಡುಗೆ–ಯು ಶೇ 14ರಿಂದ 8ಕ್ಕೆ ಇಳಿಕೆಯಾಗಿರುವುದು ಕಳವಳಕಾರಿಯಾಗಿದೆಯೆಂದು ಹೇಳಿದೆ.

ಇಂತಹ ಸಂದರ್ಭದಲ್ಲಿ ಮುಖ್ಯವಾಗಿ ವ್ಯವಸಾಯವನ್ನು ಬಿಕ್ಕಟ್ಟಿನಿಂದ ಹೊರತರಲು ಮತ್ತು ಗ್ರಾಮೀಣ ಹಾಗೂ ನಗರಗಳ ದುಡಿಯುವ ಜನತೆಯ ತಲಾ ಆದಾಯವನ್ನು 3–4 ಪಟ್ಟು ಹೆಚ್ಚಿಸಲು ಕ್ರಮ ವಹಿಸಿ ಅಭಿವೃದ್ಧಿಯನ್ನು ಸಾಧಿಸುವ ಬದಲು ಈ ಬಜೆಟ್ ಪೆಟ್ರೋಲ್, ಡೀಸೆಲ್ ಮತ್ತಿತರೇ ವಸ್ತುಗಳ ಬೆಲೆ ಏರಿಕೆ ಮೂಲಕ ಇರುವ ಅವರ ಅಲ್ಪ ಆದಾಯದ ಮೇಲೆ ದಾಳಿ ಮಾಡಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ. ಮತ್ತು ಅಂತಹ ಬೆಲೆ ಏರಿ–ಕೆಯ ಕ್ರಮಗಳನ್ನು ಕೂಡಲೇ ವಾಪಾಸು ಪಡೆಯಲು ಒತ್ತಾಯಿಸುತ್ತದೆ.

ಅದೇ ರೀತಿ, ಕೃಷಿ ಬಿಕ್ಕಟ್ಟಿನಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ತಡೆಯುವ ಮತ್ತು ಆಮೂಲಕ ಒಟ್ಟು ಆಂತರಿಕ ಉತ್ಪಾದನೆಯಲ್ಲಿ ಕೃಷಿ ವಲಯದ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಲು ರೈತರು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವಂತಾಗಲೂ ಹಾಗೂ ಅವರು ಸಾಲದ ಬಲೆಯಿಂದ ಹೊರ ಬರುವಂತಾಗಲೂ ಒಂದೇ ಒಂದು ಆಶಾದಾಯಕ ಅಂಶಗಳೂ ಬಜೆಟ್‌ನಲ್ಲಿ ಇಲ್ಲ. ಇದು ಸಿದ್ದರಾಮಯ್ಯನವರ ಕಾಂಗ್ರೆಸ್ ಸರಕಾರದ ಗಂಭಿರವಾದ ರೈತ–ವಿರೋಧಿ ಹಾಗೂ ರೈತರ ಆಧಾರಿತ ವ್ಯವಸಾಯದ ವಿರೋಧಿ ನೀತಿಯನ್ನು ಸಾರುವಾಗಲೇ, ವಿಶೇಷ ಆರ್ಥಿಕ ವಲಯದ ಮಾದರಿಯಲ್ಲಿ ವಿಶೇಷ ಕೃಷಿ ವಲಯವನ್ನು ಸ್ಥಾಪಿಸುವ ಸೂಚನೆ ನೀಡುವ ಮೂಲಕ ತಾನು ಕಾರ್ಪೋರೇಟ್ ಕಂಪನಿಗಳ ಪರವಾಗಿ ಇರುವುದನ್ನು ಸ್ಪಷ್ಟಪಡಿಸಿದೆ. ತಕ್ಷಣವೇ ಇಂತಹ

ಪುಟ 10 ಕ್ಕೆ

ಜಮೆ – ರೂಪಾಯಿ ಎಷ್ಟು ಭಾಗ ಯಾವುದರಿಂದ
(2016–17 ಆಯವ್ಯಯ ಅಂದಾಜು)



ಕಾರ್ಮಿಕರು ಮತ್ತು ಬಜೆಟ್

– ಎಸ್.ವರಲಕ್ಷ್ಮಿ

ಪ್ರತಿ ವರ್ಷ ಬಜೆಟ್ ಮಂಡನೆಯಾಗುತ್ತಿದೆ. ಈ ಬಜೆಟ್‌ಗಳು ದೇಶದ ಮತ್ತು ರಾಜ್ಯದ ಸರ್ವತೋಮುಖಾಭಿಯಾಗಿ ಇರಬೇಕಾಗುತ್ತದೆ. ಅಂದರೆ ರಾಜ್ಯದಲ್ಲಿರುವ ಹಸಿವು, ಅನಾರೋಗ್ಯ, ಅಪೌಷ್ಠಿಕತೆಯಿಂದ ಜನತೆ ನರಳುವುದನ್ನು ತಪ್ಪಿಸಿ ಪ್ರತಿಯೊಬ್ಬರು ಸ್ವಾತಂತ್ರ್ಯ ಮತ್ತು ಸಮಾನತೆಯಿಂದ ಬದುಕನ್ನು ನಡೆಸಲು ಅವಕಾಶ ಮಾಡಿಕೊಡುವುದು. ಈ ಹಿನ್ನೆಲೆಯಲ್ಲಿ ಬಜೆಟ್‌ನ್ನು ವಿಮರ್ಶೆ ಮಾಡಬೇಕಿದೆ.

ಮಾನ್ಯ ಸಿದ್ದರಾಮಯ್ಯನವರು 11ನೇ ಬಾರಿ, ಈಗಿನ ಸರ್ಕಾರದ ಪರವಾಗಿ 3ನೇ ಬಾರಿ ಬಜೆಟ್‌ನ್ನು ಮಂಡಿಸಿದ್ದಾರೆ.

ಬಜೆಟ್‌ನ ಗಾತ್ರ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. 1,63,419 ಕೋಟಿ ರೂ. ಒಟ್ಟು ಬಜೆಟ್‌ನ ಗಾತ್ರ. ಆದರೆ ಈ ಬಜೆಟ್‌ನಲ್ಲಿ ಅಸಂಘಟಿತ ಕ್ಷೇತ್ರದ ಕಾರ್ಮಿಕರ, ವಿವಿಧ ವಿಭಾಗಗಳಲ್ಲಿ ದುಡಿಯುವ ಗುತ್ತಿಗೆ ಕಾರ್ಮಿಕರ, ಯೋಜನೆಗಳಲ್ಲಿ ಕೆಲಸ ಮಾಡುವ ಅಂಗನವಾಡಿ, ಬಿಸಿಯೂಟ ಮತ್ತು ಆಶಾ ನೌಕರರಿಗೆ ಯಾವುದೇ ರೀತಿಯ ಪ್ರಯೋಜನಗಳು ದೊರೆತಿಲ್ಲ.

ರಾಜ್ಯದ ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕರು ಹಲವು ವರ್ಷಗಳಿಂದ ಕನಿಷ್ಟ ಕೂಲಿ, ಸಾಮಾಜಿಕ ಭದ್ರತೆ, ಅಸಂಘಟಿತ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಆದರೆ ಅದು ಯಾವ ವಿಷಯಗಳನ್ನು ಬಜೆಟ್‌ನಲ್ಲಿ ಗಮನಿಸಲೇ ಇಲ್ಲ.

ಮಾರ್ಚ್ 11ರಂದು ಸಿಐಟಿಯು ನೇತೃತ್ವದ ವಿಧಾನಸೌಧ ಚಲೋ ನಡೆದು ಅಂದು ಮತ್ತು ಅದಕ್ಕಿಂತಲೂ ಮೊದಲು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಚರ್ಚಿಸಿದೆ. ಆದರೆ ಆ ಬೇಡಿಕೆಗಳ ಕುರಿತಂತೆ ಯಾವ ಪ್ರಸ್ತಾಪಗಳು ಬಂದಿಲ್ಲ. ಪ್ರಮುಖವಾಗಿ ಬಜೆಟ್ ಮೊದಲು ಉದ್ಯಮಿಗಳ, ತಜ್ಞರ, ವಿವಿಧ ವಿಭಾಗಗಳ ಪ್ರತಿನಿಧಿಗಳ ಮತ್ತು ಸಂಘಟನೆಗಳ ಬಳಿ ಚರ್ಚೆ ಮಾಡಿ ಸಲಹೆಗಳನ್ನು ಸರ್ಕಾರ ಪಡೆಯುತ್ತದೆ. ಆದರೆ ರಾಜ್ಯದಲ್ಲಿ 2.5 ಕೋಟಿಗಿಂತಲೂ ಹೆಚ್ಚಿರುವ ಕಾರ್ಮಿಕರ ಕುರಿತ ಪೂರ್ವಭಾವಿ ಸಭೆಗಳು ನಡೆಯುವುದಿಲ್ಲ.

ಕೇಂದ್ರ ಸರ್ಕಾರದ ಮಟ್ಟದಲ್ಲಿ ಭಾರತ ಕಾರ್ಮಿಕ ಸಮ್ಮೇಳನ (ಐ.ಎಲ್.ಸಿ.) ಇರುವಂತೆ ರಾಜ್ಯ ಮಟ್ಟದ ಕರ್ನಾಟಕ ಕಾರ್ಮಿಕ ಸಮ್ಮೇಳನ ಎಂಬ ತ್ರಿಪಕ್ಷೀಯ ಉನ್ನತ ವೇದಿಕೆಯನ್ನು ರಚಿಸಬೇಕು. ಐ.ಎಲ್.ಸಿ. ಸಮ್ಮೇಳನವನ್ನು ಕಾರ್ಮಿಕ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಪ್ರತಿ ವರ್ಷ ನಡೆಸಲಾಗುತ್ತಿದ್ದು ಪ್ರಧಾನ ಮಂತ್ರಿಗಳು ಇದನ್ನು ಉದ್ಘಾಟಿಸುತ್ತಾರೆ. ಅದೇ ರೀತಿ ರಾಜ್ಯದಲ್ಲಾಗಬೇಕೆಂದೂ ಒತ್ತಾಯಿಸಲಾಗುತ್ತಿದೆ. ಇದರ ಬಗ್ಗೆ ಯಾವ ಯೋಜನೆಗಳನ್ನು ಮಾಡಿಲ್ಲ.

ರೂ. 18 ಸಾವಿರ ಕನಿಷ್ಟಕೂಲಿಯನ್ನು 23 ಕೈಗಾರಿಕೆಗಳಿಗೆ ಕನಿಷ್ಠವೇತನ ಪರಿಷ್ಕರಿಸಿ ಕರಡು ಪ್ರಕಟಿಸಲಾಗಿತ್ತು. ಆದರೆ ಕೈಗಾರಿಕಾ ಮಾಲೀಕರ ಒತ್ತಡಕ್ಕೆ ಸರ್ಕಾರ ಮಣಿದು ಅದನ್ನು ಅಧಿಸೂಚನೆಯಾಗಿ ಪ್ರಕಟಿಸಿಲ್ಲ. ಮಾಲೀಕರ ಸಂಘಗಳು ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿರುವ ಕಾರಣ ಹಾಗೂ ರಾಜ್ಯ ಸರ್ಕಾರ ತನ್ನದೇ ತೀರ್ಮಾನವನ್ನು ಪ್ರತಿಪಾದಿಸುವಲ್ಲಿ ವಿಫಲವಾಗಿರುವ ಕಾರಣ ಅಧಿಸೂಚಿತ ಕನಿಷ್ಟ ವೇತನ 75% ಮಾತ್ರ ನೀಡಲು ತಾತ್ಕಾಲಿಕವಾಗಿ ಆದೇಶಿಸಿದೆ. ಈ ತಡೆಯಾಜ್ಞೆ ತೆರವುಗೊಳಿಸಲು ರಾಜ್ಯ ಸರ್ಕಾರ ವಕೀಲರನ್ನು ನೇಮಿಸಬೇಕಿದೆ. ಆದರೆ ಅದರ ಬಗ್ಗೆಯೂ ಯಾವ ಪ್ರಸ್ತಾಪಗಳು ಇಲ್ಲ.

1965–68ರಲ್ಲಿ ಕರ್ನಾಟಕ ಕಾರ್ಮಿಕರ ಕಲ್ಯಾಣ ನಿಯಮಗಳನ್ನು ರಚಿಸಿದೆ. ಇದಕ್ಕೆ ಅಗತ್ಯ ನಿಧಿಯನ್ನು ಕಾಯ್ದಿರಿಸಿಲ್ಲ. ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಭವಿಷ್ಯನಿಧಿ ರೂಪಿಸಬೇಕು, ಸಾಮಾಜಿಕ ಭದ್ರತಾ ಮಂಡಳಿಗೆ ಅಗತ್ಯ ಹಣಕಾಸು ನೀಡಿ ಕಲ್ಯಾಣ ಯೋಜನೆಗಳನ್ನು ರೂಪಿಸಲು, ಆರ್‌ಎಸ್‌ಬಿವೈ ವಿಮಾ ಮೊತ್ತ 1 ಲಕ್ಷ ರೂ.ಗಳಿಗೇರಿಸಲು ಒತ್ತಾಯ ನಡೆಸಲಾಗುತ್ತಿದೆ. ಆದರೆ ಬಜೆಟ್‌ನಲ್ಲಿ ಈ ಅಂಶಗಳಿಗೆ ಸಂಬಂಧಿಸಿ ಯಾವ ಪ್ರಸ್ತಾಪಗಳು ಇಲ್ಲ.

ಈಗಾಗಲೇ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿಯಲ್ಲಿ ಹೋಮಿಯೋಪತಿ ಮತ್ತು ಆರ್ಯುವೇದ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಡಾಕ್ಟರ್‌ಗಳು, ಅತಿಥಿ ಉಪನ್ಯಾಸಕರು, ಮುರಾರ್ಜಿ ವಸತಿ ಶಾಲೆಯಲ್ಲಿ ಕೆಲಸ ಮಾಡುವ ಶಿಕ್ಷಕರು, ಎನ್‌ಆರ್‌ಹೆಚ್‌ಎಂ ಯೋಜನೆಯಡಿಯಲ್ಲಿ ದುಡಿಯುವ 108 ತುರ್ತು ಸೇವೆಯಲ್ಲಿ ಕೆಲಸ ಮಾಡುವ ಶಿಕ್ಷಕರು ಸಮಾಜ ಕಲ್ಯಾಣ ಮುನ್ಸಿಪಾಲಿಟಿ, ಕೆಇಬಿಯಲ್ಲಿ ಹಲವು ವರ್ಷಗಳ ಕಾಲ ದುಡಿದ ಗುತ್ತಿಗೆ ಕಾರ್ಮಿಕರನ್ನು ಬಿಟ್ಟು ಬೇರೆಯವರನ್ನು ಆ ಕೆಲಸಕ್ಕೆ ತೆಗೆದುಕೊಳ್ಳಲು ಸರ್ಕಾರ ಹವಣಿಸುತ್ತಿದೆ. ಸರ್ಕಾರ ವಿವಿಧ ಯೋಜನೆಗಳಲ್ಲಿ ದುಡಿಯುತ್ತಿರುವ ಗ್ರಾಮ ಪಂಚಾಯಿತಿ, ಅಂಗನವಾಡಿ, ಬಿಸಿಯೂಟ ಮತ್ತು ಆಶಾ ನೌಕರರ ಯೋಜನೆಗಳಿಗೆ ಸರಿಯದ ಅನುದಾನಗಳು ಸಿಕ್ಕಿಲ್ಲ.

ಲಕ್ಷಾಂತರ ಮಂದಿ ಕೆಲಸ ಮಾಡುವ ಬೀಡಿ ಕೈಗಾರಿಕೆ ರೋಗಗ್ರಸ್ಥವಾಗುತ್ತಿರುವುದರಿಂದ ಆ ಕಾರ್ಮಿಕರಿಗೆ ಪರ್ಯಾಯ ಉದ್ಯೋಗದ ಬಗ್ಗೆ ಪ್ರಸ್ತಾಪವಿಲ್ಲ.

ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಮತ್ತು ಯೋಜನಾ ಕಾರ್ಮಿಕರಿಗೆ ಕಾರ್ಮಿಕರೆಂದು ಗುರುತಿಸಿ ನಿವೇಶನ ನೀಡಬೇಕೆಂಬುದು ಬಹುದಿನಗಳ ಬೇಡಿಕೆಯ ಬಗ್ಗೆಯೂ ಪ್ರಸ್ತಾಪವಿಲ್ಲ. ಬಜೆಟ್‌ನಲ್ಲಿ ಜಿಡಿಪಿಗೆ ತಯಾರಿಕಾ ವಲಯ ಕ್ಷೇತ್ರದ ಕೊಡುಗೆ 15%, ಸೇವಾ ವಲಯದ ಕೊಡುಗೆ 64% ಎಂದು ತಿಳಿಸಿದೆ. ಆದರೆ ಅದೇ ಸಮಯದಲ್ಲಿ ಆ ಕೊಡುಗೆಯನ್ನು ನೀಡಿದವರ ಬಗ್ಗೆ ಮಾತ್ರ ದಿವ್ಯ ನಿರ್ಲಕ್ಷ್ಯವಿದೆ.

ಅಹಿಂದ ಎಂದು ಹೇಳುವ ಸರ್ಕಾರ 'ಭಾಗ್ಯ'ಗಳನ್ನು ಕೊಡುವುದು ಬಿಟ್ಟು ಶಾಶ್ವತ ಪರಿಹಾರದತ್ತ ಪ್ರಯತ್ನಿಸುತಿಲ್ಲ.

ಕಾರ್ಮಿಕ ಇಲಾಖೆ ಮತ್ತು ಸಂಬಂಧಿತ ಇಲಾಖೆಗಳಲ್ಲಿ ಹಲವಾರು ಉದ್ಯೋಗಗಳು ಖಾಲಿ ಇರುವುದರಿಂದ ಕಾರ್ಮಿಕರ ವಿವಾದಗಳನ್ನು ಕಾಲಕಾಲಕ್ಕೆ ಬಗೆಹರಿಸಲು ಸಾಧ್ಯವಾಗುತ್ತಿಲ್ಲ.

ಕೃಷಿ ರಂಗದ ಬಿಕ್ಕಟ್ಟಿನಿಂದಾಗಿ ವಲಸೆ ಕಾರ್ಮಿಕರು ಹೆಚ್ಚಾಗುತ್ತಿದ್ದಾರೆ. ತಲಾ ಆದಾಯ ಪ್ರತಿದಿನ 10 ಡಿಗ.ಗಳಿಗಿಂತ ಹೆಚ್ಚಾಗಿಲ್ಲದೇ ಇರುವುದರಿಂದ ಅಪೌಷ್ಠಿಕತೆಯ ಸಾವುಗಳು, ಆಹಾರ ಧಾನ್ಯದ ಉತ್ಪಾದನೆ 16 ಲಕ್ಷ ಟನ್‌ಗಳಿಗೆ ಕುಸಿದಿದೆ. ಕೈಗಾರಿಕಾ ದರ ಹೆಚ್ಚಳಗೊಳ್ಳದಿರುವುದನ್ನು ಮತ್ತು ರಾಜ್ಯದ ಒಟ್ಟು ಆಂತರಿಕ ಉತ್ಪನ್ನಗಳ ಬೆಳವಣಿಗೆ ದರ 6.2ಕ್ಕೆ ಕುಸಿದಿದೆ. ಕೃಷಿ ವಲಯದ ಕೊಡುಗೆ 14 ರಿಂದ 8ಕ್ಕೆ ಇಳಿದಿದೆ. ಪೆಟ್ರೋಲ್–ಡೀಸೆಲ್ ಬೆಲೆಯೇರಿಕೆಯ ಪರಿಣಾಮ ಅಗತ್ಯ ವಸ್ತುಗಳ ಬೆಲೆಯೇರಿಕೆಯಾಗಿ ಸಾಮಾನ್ಯ ಜನತೆಯ ಬದುಕು ಇನ್ನೂ ಬರ್ಬರಗೊಳ್ಳುವುದಿದೆ.

ಕನಿಷ್ಠ ಕೂಲಿಯ ಬಗ್ಗೆ ಸರ್ಕಾರ ನಿರ್ಲಕ್ಷ ಹೊಂದಿರುವುದರಿಂದ ಕಂಡುಕೊಳ್ಳುವ ಸಾಮರ್ಥ್ಯ ಕಡಿಮೆಯಾಗಿ ಉತ್ಪಾದನಾ ವಲಯದ ಮೇಲೆ ಗಂಭೀರ ಪರಿಣಾಮವಾಗಲು ಕಾರಣವಾಗಿದೆ. ಮಾತ್ರವಲ್ಲ ಇದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿಯು ಗಂಭೀರವಾಗುತ್ತದೆ.

ಹಿಂದಿನ ಸಾಲಿನ ಬಜೆಟ್ ಅನುದಾನ ಹೇಗೆ ವೆಚ್ಚವಾಗಿದೆ, ಎಷ್ಟರ ಮಟ್ಟಿಗೆ ಉದ್ದೇಶ ಪೂರೈಕೆ ಆಗಿದೆ ಎಂಬ ದೀರ್ಘ ವಿವರಣೆ ಕೊಡುವುದೇ ಸಿ.ಎ.ಜಿ. ಯ ಅನುದಾನದ ಬಳಕೆಯ ವರದಿ. ಈ ವರದಿಯನ್ನು ನೋಡಿದರೆ ಇಂದಿನ ಮುಂದಿನ ಬಜೆಟುಗಳ ವಾಸ್ತವ ಅರಿತುಕೊಳ್ಳಲು ಸಹಾಯವಾಗುತ್ತದೆ. 2014–15 ಒಟ್ಟಾರೆ ರಾಜಸ್ವ ಮತ್ತು ಬಂಡವಾಳ ಅನುದಾನವನ್ನು 28 ಇಲಾಖೆಗಳಿಗೆ 1.35 ಲಕ್ಷ ಕೋಟಿ ರೂ.ಗಳನ್ನು ಹಂಚಲಾಗಿತ್ತು. ಇದರಲ್ಲಿ 19.7 ಸಾವಿರ ಕೋಟಿ ರೂ. 'ಉಳಿತಾಯ'ವಾಗಿರುತ್ತದೆ. ಅಂದರೆ ಶೇ.15 ರಷ್ಟು 'ಉಳಿತಾಯ'ವಾಗಿರುತ್ತದೆ. ಇಲ್ಲಿರುವ ಉಳಿತಾಯ ಸರಕಾರದ ಸಾಮರ್ಥ್ಯವಲ್ಲ. ಕಾರ್ಯನಿರ್ವಹಣೆಯ ಕೊರತೆಯ ದ್ಯೋತಕವಾಗಿರುತ್ತದೆ. ಮೂ&ಲಭೂತ ಸೌಕರ್ಯದ ಕೊರತೆ, ಕುಡಿಯುವ ನೀರಿನ ಯೋಜನೆಗಳ ಅಸಮರ್ಪಕ ನಿರ್ವಹಣೆ, ಸಮಾಜ ಕಲ್ಯಾಣ ಇಲಾಖೆಯಿಂದ ಅನೇಕ ಫಲಾನುಭವಿಗಳಿಗೆ ಸಿಗಬಹುದಾಗಿದ್ದ ಸೌಲಭ್ಯಗಳ ವಂಚನೆ, ಶೈಕ್ಷಣಿಕ ಕ್ಷೇತ್ರದಲ್ಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕುಂಠಿತವಾಗಿದೆ. ದಲಿತರು, ಮಹಿಳೆಯರು, ಮಕ್ಕಳು, ವಿದ್ಯಾರ್ಥಿಗಳಿಗೆ ಆದ ವಂಚನೆ ಆಗಿದೆ ಎಂದು ಇದರ ಅರ್ಥ.

ಬಜೆಟ್ – ಬೊಗಳೆ ಮತ್ತು ವಾಸ್ತವ

2016–17 ಸಾಲಿಗೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ತಮ್ಮ 11ನೇ 1.31 ಲಕ್ಷ ಕೋಟಿ ಬಜೆಟನ್ನು ಮಂಡಿಸಿದ್ದಾರೆ. ಎಂದಿನಂತೆ ನಮ್ಮ ರಾಜ್ಯದ ಉದ್ಯಮಪತಿ ವಾಣಿಜೋದ್ಯಮಿಗಳು, ಹಲವಾರು ಕ್ಷೇತ್ರಗಳ ಪ್ರತಿನಿಧಿಗಳು ನಮ್ಮಲ್ಲಿ 24x7 ಮೊಳಗುವ ಚಾನೆಲ್‌ಗಳಲ್ಲಿ, ಪತ್ರಿಕೆಗಳಲ್ಲಿ ತಮ್ಮ ಅಮೂಲ್ಯ ವಿಶ್ಲೇಷಣೆ ನಡೆಸಿದರು. ಒಟ್ಟಾರೆ ಚರ್ಚೆ ಅವರವರ ಮೂಗಿನ ನೇರಕ್ಕೆ ಇರುತ್ತಿತ್ತು. ಇನ್ನು ಟಿವಿ ಆಂಕರ್‌ಗಳಂತು ಯಾವ ರೀತಿಯ ಅರ್ಥಪೂರ್ಣ ಚರ್ಚೆ ನಡೆಯಲೇ ಬಾರದೆಂದು ಪಣತೊಟ್ಟಿದ್ದರು. ಹೋಗಲಿ ಈ ಬಜೆಟ್‌ಗಳು ಕೇಂದ್ರ ಸರ್ಕಾರದ್ದಾಗಲಿ ರಾಜ್ಯ ಸರ್ಕಾರದ್ದಾಗಲಿ ಚುನಾವಣಾ ಪ್ರಣಾಳಿಕೆಗಳ ಹಾಗೆ ಹೆಚ್ಚು ಇರುತ್ತದೆ. ಮುಂದಿನ ವರ್ಷದ ಬಗ್ಗೆ ಮಾತನಾಡುವ ಸಚಿವರು ಹಿಂದಿನ ಸಾಲಿನ ತಮ್ಮ ಸಾಧನೆಗಳ ಬಗ್ಗೆ ಗಂಭೀರ ಮೌನವಹಿಸುತ್ತಾರೆ. ಹಿಂದಿನ ಸಾಲಿನ ಬಜೆಟ್ ಎಷ್ಟರ ಮಟ್ಟಿಗೆ ಉದ್ದೇಶಿತ ಗುರಿ ಮುಟ್ಟಿದೆ ಎಂಬ ವಿಶ್ಲೇಷಣೆ ಇಲ್ಲದೆ.

ಹಿಂದಿನ ಸಾಲಿನ ಬಜೆಟ್ ಅನುದಾನ ಹೇಗೆ ವೆಚ್ಚವಾಗಿದೆ, ಎಷ್ಟರ ಮಟ್ಟಿಗೆ ಉದ್ದೇಶ ಪೂರೈಕೆ ಆಗಿದೆ ಎಂಬ ದೀರ್ಘ ವಿವರಣೆ ಕೊಡುವುದೇ ಸಿ.ಎ.ಜಿ. ಯ ಅನುದಾನದ ಬಳಕೆಯ (Appropriation on Accounts) ವರದಿ. 2014–15 ಸಾಲಿನ ಈ ವರದಿಯನ್ನು 2016–17 ಬಜೆಟ್ ಮಂಡಿಸುವಾಗ ಸಲ್ಲಿಸಲಾಗುತ್ತದೆ. ಈ ವರದಿಯ ಬಗ್ಗೆ ಕೆಲ ಅಪವಾದ ಬಿಟ್ಟರೆ ಸದನದಲ್ಲಾಗಲಿ ಮಾಧ್ಯಮಗಳಲ್ಲಾಗಲಿ ಹೆಚ್ಚು ಚರ್ಚೆಯಾಗುವುದಿಲ್ಲ. ಹಿಂದಿನ ಬಜೆಟಿನ ಬಗೆಗಿನ ಈ ವರದಿಯನ್ನು ನೋಡಿದರೆ ಇಂದಿನ ಮುಂದಿನ ಬಜೆಟುಗಳ ವಾಸ್ತವ ಅರಿತುಕೊಳ್ಳಲು ಸಹಾಯವಾಗುತ್ತದೆ.

2014–15 ಒಟ್ಟಾರೆ ರಾಜಸ್ವ ಮತ್ತು ಬಂಡವಾಳ ಅನುದಾನವನ್ನು 28 ಇಲಾಖೆಗಳಿಗೆ 1.35 ಲಕ್ಷ ಕೋಟಿ ರೂ.ಗಳನ್ನು ಹಂಚಲಾಗಿತ್ತು. ರಾಜಸ್ವ ವೆಚ್ಚದಲ್ಲಿ ಸಂಬಳ ಸಾರಿಗೆ, ವಾರ್ಷಿಕ ನಿರ್ವಹಣೆ, ಬಡ್ಡಿ ಮುಂತಾದ ಬಾಬ್ತು ಒಳಗೊಂಡಿರುತ್ತದೆ. ಬಂಡವಾಳ ವೆಚ್ಚ ದೀರ್ಘಾವದಿ ಪ್ರಯೋಜನಕ್ಕಾಗಿ ತಗಲುವ ವೆಚ್ಚವಾಗಿರುತ್ತದೆ. 2014–15 ಸಾಲಿನಲ್ಲಿ ಖರ್ಚಾಗಿರುವುದು 1.16 ಲಕ್ಷ ಕೋಟಿ ರೂ. ಗಳು ಮತ್ತು 19.7 ಸಾವಿರ ಕೋಟಿ ರೂ. ಉಳಿತಾಯವಾಗಿರುತ್ತದೆ. ಅಂದರೆ ಶೇ.15 ರಷ್ಟು ಉಳಿತಾಯವಾಗಿರುತ್ತದೆ. ಇಲ್ಲಿರುವ ಉಳಿತಾಯ ಸರಕಾರದ ಸಾಮರ್ಥ್ಯವಲ್ಲ ಕಾರ್ಯನಿರ್ವಹಣೆಯ ಕೊರತೆಯ ದ್ಯೋತಕವಾಗಿರುತ್ತದೆ. ಯಾವ ಇಲಾಖೆಯಲ್ಲಿ ಎಷ್ಟು 'ಉಳಿತಾಯ' ಆಗಿದೆ ಎಂಬುದು ಈ ಕೆಳಕಂಡ ಕೋಷ್ಟಕದಲ್ಲಿರುತ್ತದೆ.

'ಉಳಿತಾಯ'ದ ಪ್ರಮಾಣ ಶೇ.4.45 ರಿಂದ ಕೆಲವು ಪ್ರಕರಣಗಳಲ್ಲಿ ಶೇ. 61 ರವರೆಗೂ ಇರುತ್ತದೆ. ಇನ್ನು ಉಳಿತಾಯದಿಂದ ಆದ 'ಪ್ರಯೋಜನಗಳು' ಎಂದರೆ – ಮೂ&ಲಭೂತ ಸೌಕರ್ಯದ ಕೊರತೆ, ಕುಡಿಯುವ ನೀರಿನ ಯೋಜನೆಗಳ ಅಸಮರ್ಪಕ ನಿರ್ವಹಣೆ, ಸಮಾಜ ಕಲ್ಯಾಣ ಇಲಾಖೆಯಿಂದ ಅನೇಕ ಫಲಾನುಭವಿಗಳಿಗೆ ಸಿಗಬಹುದಾಗಿದ್ದ ಸೌಲಭ್ಯಗಳ ವಂಚನೆ, ಶೈಕ್ಷಣಿಕ ಕ್ಷೇತ್ರದಲ್ಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕುಂಠಿತ, ಹೀಗೆ ಪಟ್ಟಿ ಮಾಡಬಹುದು. ದಲಿತರು, ಮಹಿಳೆಯರು, ಮಕ್ಕಳು, ವಿದ್ಯಾರ್ಥಿಗಳಿಗೆ ಆದ ವಂಚನೆ. ಸಾಮಾಜಿಕ ಕಲ್ಯಾಣಕ್ಕೆ ಸಂಬಂಧಿಸಿದ ಇಲಾಖೆಗಳಲ್ಲೇ ಅತ್ಯಂತ ಹೆಚ್ಚು 'ಉಳಿತಾಯ' ಮಾಡಲಾಗಿರುವುದು – ಶಿಕ್ಷಣ – ಬಂ. (ಶೇ. 61), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ – ಬಂ. (ಶೇ. 41), ಜಲಸಂವರ್ಧನೆ (ಶೇ.

ಪುಟ 10 ಕ್ಕೆ

ಬಜೆಟ್ – ಬೊಗಳೆ ....

ಪುಟ 9 ರಿಂದ

51), ಆಹಾರ ಮತ್ತು ನಾಗರಿಕ ಸರಬರಾಜು (ಶೇ. 42), ವಸತಿ (ಶೇ. 25), ಕೃಷಿ ಮತ್ತು ತೋಟಗಾರಿಕೆ (ಶೆ. 25), ಸಮಾಜ ಕಲ್ಯಾಣ – ಬಂ. (ಶೇ. 19), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಶೇ. 17) – ಎಂಬುದು ಸರಕಾರದ ಧೋರಣೆಗೆ ಹಿಡಿದ ಕನ್ನಡಿ. ಅನುದಾನ ಬಳಕೆಯಲ್ಲೂ ಅಥವಾ ಆಗದೆ ಹೋಗುವುದರಲ್ಲೂ ಮಂತ್ರಿಗಳು, ಅಧಿಕಾರಿಗಳು, ಸಿಬ್ಬಂದಿಗಳ ನಿರ್ಲಕ್ಷ್ಯ, ಭ್ರಷ್ಟಾಚಾರ, ಅದಕ್ಷತೆಯ ಪಾಲು ಖಂಡಿತ ಇದೆ. ಆದ್ದರಿಂದಲೇ ಇಲಾಖಾವಾರು ಬಹಳ ವ್ಯತ್ಯಾಸಗಳು ಇರುವುದು. ಆದರೆ ಅಷ್ಟು ಮಾತ್ರವಲ್ಲ. ಇಡೀ ವ್ಯವಸ್ಥೆಯೇ ಅನುದಾನವನ್ನು ಜನರ 'ಮೂಗಿಗೆ ತುಪ್ಪ ಹಾಕಲು' ಬಳಸಿ, ನಿಜವಾದ ಬಳಕೆ ಆಗದಂತೆ ನೋಡುವುದೇ ಆಗಿದೆ ಎಂಬುದನ್ನು ಗಮನಿಸಬಹುದು.

ಯಾವ ಯಾವ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಬಜೆಟ್ ಅನುದಾನವನ್ನು ಬಳಸದೆ ಎಷ್ಟರ ಮಟ್ಟಿಗೆ ನಾಗರೀಕರನ್ನು ವಂಚಿಸಿರುವುದಕ್ಕೆ ಸಂಬಂಧಿಸಿದ ವಿವರಗಳು ಇಲ್ಲಿವೆ. ಈ ವರದಿಯ ಅಧ್ಯಯನ ಬಜೆಟ್ ಅನುದಾನಗಳ, ಸರಕಾರದ ಕಾರ್ಯಕ್ರಮಗಳ ವಾಸ್ತವವನ್ನು ತಿಳಿದುಕೊಳ್ಳಲು, ಜನಸಾಮಾನ್ಯರಿಗೆ ತಿಳಿಸಲು, ಸಾಮೂಹಿಕ ಸಂಘಟನೆಗಳು ಜನಪರ ಹೋರಾಟ ಕಟ್ಟಲು ನೆರವು ನೀಡುತ್ತದೆ.

	ಇಲಾಖೆ	ಅನುದಾನ(1) ಕೋಟಿ ರೂ.ಗಳಲ್ಲಿ	(ರೂಗಳಲ್ಲಿ) ವೆಚ್ಚ(2)	ಉಳಿತಾಯ (3) (1)-(2)	ಉಳಿತಾಯ ಒಟ್ಟು ಅನುದಾನದ ಶೇಕಡಾವಾರು (4) (1)-(2) *100/(1)
1	ಕೃಷಿ ಮತ್ತು ತೋಟಗಾರಿಕೆ	ರಾ: 6153.44 ಬಂ: 112,74	4573.83 81.00	1580.11 31.79	25.0 % 28.0 %
2	ಮೂಲಭೂತ ಸೌಕರ್ಯ ಅಭಿವೃದ್ಧಿ	ಬಂ: 629.84	578.88	50.96	8.0 %
3	ಗ್ರಾಮೀಣಾಭಿವೃಧಿ ಮತ್ತು ಪಂಚಾಯತ್ ರಾಜ್:	ರಾ: 8969.64 ಬಂ: 41.19	7455,00 1707,31	1514.64 233,88	16.9 % 12.0 %
4	ಸಮಾಜ ಕಲ್ಯಾಣ	ರಾ: 5289.79 ಬಂ: 629.42	5054.18 1321.84	235.61 307.58	4.4 % 18.9 %
5	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ :	ರಾ: 3758.77 ಬಂ: 118.90	3464.08 70.16	294.68 48.73	7.8 % 41.0 %
6	ಅಹಾರ ಮತ್ತು ನಾಗರೀಕ ಸರಬರಾಜು	ರಾ: 4471.20	2616.94	1854.26	41.5 %
7	ಕಂದಾಯ	ರಾ: 5249.57 ಬಂ: 101.42	4711.93 45.51	537.64 55.90	10.2 % 55.1 %
8	ಮಾಹಿತಿ ಮತ್ತು ತಂತ್ರಜ್ಞಾನ:	228.50	199.73	28.77	12.6 %
9	ವಸತಿ	2410.32	1798.10	612.22	25.4 %
10	ಶಿಕ್ಷಣ	ರಾ:21034.88 ಬಂ: 720.04	17941.80 280.08	3043.08 439.97	14.7 % 61.1 %
11	ನಗರಾಭಿವೃದ್ಧಿ	8004.84	6761.75	1243.09	15.5 %
12	ಸಾರ್ವಜನಿಕ ಇಲಾಖೆ	ರಾ: 2684.46 ಬಂ: 6146.46	2339.39 5331.92	345.07 914.53	12.9 % 14.9 %
13	ಜಲ ಸಂವರ್ಧನೆ	ರಾ: 1367.43 ಬಂ: 8208.30	665.93 7619.50	701.51 588.80	51.3 % 7.2 %
	ಒಟ್ಟು	**1,35,394.62**	**1,15,657.36**	**19,737.26**	**14.51%**

ರೈತ ಕೃಷಿ–ವಿರೋಧಿ, ಅಭಿವೃದ್ಧಿ–ವಿರೋಧಿ ಬಜೆಟ್ ......

ಪುಟ 8 ರಿಂದ

ರೈತ ವಿರೋಧಿ ಕಾರ್ಪೋರೇಟ್ ಕಂಪೆನಿಗಳ ಪರ ನಿಲುಮೆಯನ್ನು ಕೈಬಿಡಲು ರೈತರ ಆತ್ಮಹತ್ಯೆಗಳನ್ನು ಪರಿಣಾಮಕಾರಿಯಾಗಿ ನಿಲ್ಲಿಸಲು ಒತ್ತಾಯಿಸುತ್ತದೆ. ಅವರ ಸಾಲಭಾದೆ ಸಮಸ್ಯೆ ತೊಲಗಿಸಲು ಕೇರಳದಲ್ಲಿ ಕಳೆದ ಎಡ ಮತ್ತು ಪ್ರಜಾಸತ್ತಾತ್ಮಕ ಸರಕಾರದ ಮಾದರಿಯಲ್ಲಿ ಕರ್ನಾಟಕದಲ್ಲೂ ಅದನ್ನು ಜಾರಿಗೊಳಿಸಿ ಸಾಲಬಾಧಿತ ರೈತರು–ಕೂಲಿಕಾರರು ಮತ್ತು ಕಸುಬುದಾರರನ್ನು ಸಂರಕ್ಷಿಷಿಸಲು ಕನಿಷ್ಠ 10,000 ಕೋಟಿಯನ್ನು ನಿಗದಿಸಿ ಋಣಮಕ್ತಿ ಆಯೋಗವನ್ನು ರಚಿಸಲು ಒತ್ತಾಯಿಸುತ್ತದೆ. ಅದೇ ರೀತಿ, ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕವಾಗಿ ಉತ್ಪನ್ನಗಳ ಸಮಗ್ರ ಖರ್ಚನ್ನು ಲೆಕ್ಕಹಾಕಿ ಅದಕ್ಕೆ ಡಾ.ಎಂ.ಎಸ್.ಸ್ವಾಮಿನಾಥನ್ ಅವರ ಸಲಹೆಯಂತೆ ಶೇ 50ರಷ್ಟು ಲಾಭಾಂಶ ಸೇರಿಸಿದ ಬೆಲೆ ನಿಗದಿಸಿ ಖಾತರಿಯಾಗಿ ದೊರೆಯುವಂತೆ ಮಾರುಕಟ್ಟೆಯಲ್ಲಿ ಮದ್ಯ ಪ್ರವೇಶಿಸಿ ಖರೀಧಿಸುವ ವ್ಯವಸ್ಥೆಯನ್ನು ಮಾಡಲು ಒತ್ತಾಯಿಸುತ್ತದೆ. ಇವುಗಳನ್ನು ಮಾಡದೇ, ಒಂದೆಡೆ ಉದ್ದೇಶ ಪೂರ್ವಕವಾದ ಇಂತಹ ರೈತ ದ್ರೋಹಗಳನ್ನಿಟ್ಟುಕೊಂಡು ಮತ್ತೊಂದೆಡೆ ಮೊಸಳೆ ಕಣ್ಣೀರು ಸುರಿವ ಮತ್ತು ಬಾಯಿ ಚಪಲದ ಅನುಕಂಪದ ಮಾತುಗಳು ಬಹಳ ದಿನ ನಡೆಯುವದಿಲ್ಲವೆಂದು ರಾಜ್ಯ ಸರಕಾರವನ್ನು ಕರ್ನಾಟಕ ಪ್ರಾಂತ ರೈತ ಸಂಘ ಕಟುವಾಗಿ ಟೀಕಿಸಿದೆ.

ಕೃಷಿಕೂಲಿಕಾರರನ್ನು ಗ್ರಾಮದಲ್ಲಿಯೇ ಉಳಿಯುವಂತೆ ಮತ್ತು ಅವರಿಗೆ ಅಲ್ಲಿಯೇ ಉದ್ಯೋಗಖಾತ್ರಿಯಲ್ಲಿ ಕನಿಷ್ಠ 150 ದಿನವಾದರೂ ಪ್ರತಿದಿನ ಕನಿಷ್ಠ 600 ರೂ.ಗಳ ಕನಿಷ್ಠಕೂಲಿ ದೊರೆಯುವಂತೆ ಆದೇಶ ಹೊರಡಿಸಿ, ಇದಕ್ಕೆ ಬಜೆಟ್‌ನಲ್ಲಿ ಅಗತ್ಯ ಹಣ ಒದಗಿಸಬೇಕೆಂದು ರೈತ ಸಂಘ ಒತ್ತಾಯಿಸಿದೆ.

ಬಡವರು ಸಾಗುಮಾಡಿದ ಸರಕಾರಿ ಜಮೀನುಗಳನ್ನು ಭೂ ಬ್ಯಾಂಕ್‌ಗಳಲ್ಲಿ ಸೇರ್ಪಡೆ ಮಾಡಿ ಕಾರ್ಪೋರೇಟ್ ಕಂಪೆನಿಗಳಿಗೆ ನೀಡುವ ಯೋಚನೆಯನ್ನು ಕೈಬಿಡಬೇಕು ಹಾಗೂ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಲಾದ ಜಮೀನುಗಳನ್ನು ಬಡ ರೈತರಿಗೆ ನೀಡುವುದಾಗಿ ಮತ್ತು ಅವರನ್ನು ಒಕ್ಕಲೆಬ್ಬಿಸುವುದಿಲ್ಲವೆಂದು ಬಜೆಟ್ ಮೂಲಕ ಸಾರ ಬೇಕು. ಅದೇ ರೀತಿ, ರೈತ–ವಿರೋಧಿ ಕಸ್ತೂರಿ ರಂಗನ್ ವರದಿಯನ್ನು ಜನಸ್ನೇಹಿಯಾಗಿ ಪರಿವರ್ತಿಸದೇ ಜಾರಿಗೆ ತರುವುದಿಲ್ಲವೆಂದು ರಾಜ್ಯ ಸರಕಾರ ಘೋಷಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಒತ್ತಾಯಿಸುತ್ತದೆ. ■

ನಮ್ಮ ಚುರು-ಟ್ವೀಟ್

@SitaramYechury

ಪಠಾಣಕೋಟದಲ್ಲಿ ಎಷ್ಟು ಭಯೋತ್ಪಾದಕರು ಇದ್ದರು? ಗೊತ್ತಿಲ್ಲ. ಎರಡು ವಾರಗಳ ಹಿಂದೆ ಪಾಕಿಸ್ತಾನದಿಂದ ಬಂದ 10 ಭಯೋತ್ಪಾದಕರು ಎಲ್ಲಿಗೆ ಹೋದರು? ಗೊತ್ತಿಲ್ಲ (1/2)

ಆಂತರಿಕ ಮತ್ತು ರಾಷ್ಟ್ರೀಯ ಭದ್ರತೆ ಸರಕಾರದ ದಿಕ್ಕುಗೇಡಿತನದಿಂದ ಹದಗೆಟ್ಟಿದೆ. ಘೋಷಣೆ ಕೂಗಾಟ ಮಾತ್ರ ಅವರ ಆದ್ಯತೆ ಆದಂತಿದೆ. (2/2)

– ಸೀತಾರಾಂ ಯೆಚುರಿ (ಮಾರ್ಚ್ 20)

ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರದ ಕಡೆಗಣನೆ: ಎಸ್.ಎಫ್.ಐ ಆರೋಪ.

ಸಿದ್ದರಾಮಯ್ಯನವರು ಮಂಡಿಸಿರುವ ರಾಜ್ಯ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಶಿಕ್ಷಣ ಕ್ಷೇತ್ರವನ್ನು ಕಡೆಗಣಿಸುವ ಮೂಲಕ ರಾಜ್ಯ ಸರಕಾರ ವಿದ್ಯಾರ್ಥಿ ವಿರೋಧಿ ನೀತಿ ಅನುಸರಿಸಿದೆ. 2015–16 ನೇ ಸಾಲಿನಲ್ಲಿ ರಾಜ್ಯ ಸರಕಾರವು ಪ್ರಾಥಮಿಕ ಶಿಕ್ಷಣಕ್ಕೆ 16204 ರೂ (11.36%), ಉನ್ನತ ಶಿಕ್ಷಣಕ್ಕೆ 3896 (2.73%). ಒಟ್ಟು ಶಿಕ್ಷಣಕ್ಕಾಗಿ 14.09% ರಷ್ಟು ಹಣ ನೀಡಿತ್ತು ಆದರೆ ಈ ಬಾರಿಯ ಬಜೆಟ್ ನಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ 17,373 ರೂ (10.63%) ಉನ್ನತ ಶಿಕ್ಷಣಕ್ಕೆ 4651 ರೂ (2.84%) ಒಟ್ಟು ಶಿಕ್ಷಣಕ್ಕೆ 13.47 % ರಷ್ಟು ಮಾತ್ರ ನೀಡಲಾಗಿದೆ. ಕಳೆದ ಬಾರಿಗಿಂತ 0.62% ರಷ್ಟು ಕಡಿತಗೊಳಿಸಿರುವುದನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಖಂಡಿಸುತ್ತದೆ.

ಸರಕಾರಿ ಶಿಕ್ಷಣ ಸಂಸ್ಥೆಗಳ ಸುಧಾರಣೆಗಾಗಿ ಕಳೆದ ಬಾರಿ ನಿಗದಿ ಪಡಿಸಲಾಗಿದ್ದ ಹಣ ಅನೇಕ ಕಡೆಗಳಲ್ಲಿ ಬಿಡುಗಡೆಯಾಗಿಲ್ಲ. ಬಿಡುಗಡೆಯಾದ ಕಡೆಗಳಲ್ಲಿ ಸಮರ್ಪಕವಾಗಿ ಜಾರಿಯಾಗಿಲ್ಲ. ಕಳೆದ ಬಾರಿಯ ಬಜೆಟ್ ನಲ್ಲಿ ಶಾಲಾ ಮಕ್ಕಳಿಗೆ ಶೂ ಭಾಗ್ಯ, ವಿದ್ಯಾಸಿರಿ ಯೋಜನೆಗಳು ಸಮರ್ಪಕವಾಗಿ ಜಾರಿಯಾಗದೆ ಹಳ್ಳ ಹಿಡಿದಿವೆ. ಕಲಿ–ನಲಿ ಇತ್ಯಾದಿ ಯೋಜನೆಗಳು ಶಿಕ್ಷಕರಿಗೆ ಹೊರೆಯಾಗಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಈಗ ಹೆಸರು ಬದಲಿಸಿ ಕೆಲ ಯೋಜನೆಗಳನ್ನು ಪ್ರಸ್ತಾಪಿಸಲಾಗಿದೆ ಸರಕಾರದ ಈ ಕ್ರಮ "ಹಳೆ ವೈನ್ ಹೊಸ ಬಾಟ್ಲಿಯಲ್ಲಿ" ಎಂಬಂತಾಗಿದೆ.

ಇವುಗಳ ನ್ಯೂನ್ಯತೆಯ ಮಧ್ಯೆಯೇ ವಿಶ್ವ ವಿದ್ಯಾಲಯಗಳಲ್ಲಿ ಹಲವಾರು ಮಹತ್ವಾಕಾಂಕ್ಷಿ ಯೋಜನೆಗಳನ್ನು ತರುವ ಕುರಿತು ಪ್ರಸ್ತಾಪಿಸಿರುವುದು ಉತ್ತಮ ನಡೆಯಾಗಿದೆ. ಧಾರವಾಡ ವಿ.ವಿ ಯಲ್ಲಿ ಎಂ.ಎಂ. ಕಲಬುರ್ಗಿ ಸಂಶೋಧನಾ ಅಧ್ಯಯನ ಕೇಂದ್ರ, ಕಲಬುರ್ಗಿಯಲ್ಲಿ ಧಾರ್ಮಿಕ ಅಲ್ಪ ಸಂಖ್ಯಾತ ಪೀಠ, ಹಂಪಿ ಕನ್ನಡ ವಿ.ವಿ.ಯಲ್ಲಿ ಮಹರ್ಷಿ ವಾಲ್ಮಿಕಿ ಪೀಠ, ಮಂಗಳೂರಿನಲ್ಲಿ ರಾಣಿ ಅಬ್ಬಕ್ಕ ಪೀಠ ತೆರೆಯಲಾಗುವುದು ಎಂದು ಬಜೆಟ್‌ನಲ್ಲಿ ಪ್ರಸ್ಥಾಪಿಸಲಾಗಿದೆ. ಇದರ ಜಾರಿಯ ಕಡೆ ಸರಕಾರ ಹೆಜ್ಜೆ ಹಾಕ ಬೇಕಿದೆ. ಇಲ್ಲದೆ ಹೋದಲ್ಲಿ ಮೂಗಿಗೆ ತುಪ್ಪ ಸವರಿದಂತೆ ಆಗಿತ್ತದೆ.


ಹಾಸ್ಟೆಲ್ ವಿದ್ಯಾರ್ಥಿಗಳ ಆಹಾರ ಭತ್ಯೆಯನ್ನು (100 ರೂ)ಕೊಂಚ ಪ್ರಮಾಣದಲ್ಲಿ ಏರಿಸಲಾಗಿದೆ. ಇದು ಇಂದಿನ ಆಹಾರ ಏರಿಕೆಗೆ ಯಾವುದಕ್ಕೂ ವಿದ್ಯಾರ್ಥಿಗಳಿಗೆ ಸಾಕಾಗುವುದಿಲ್ಲ. ಮತ್ತೆ ಹಾಸ್ಟೆಲ್ ವಿದ್ಯಾರ್ಥಿಗಳು ಅಪೌಷ್ಟಿಕ ಆಹಾರವನ್ನು ಸೇವಿಸುವಂತಾಗಿದೆ. ದಿನಕ್ಕೆ 8 ಗಂಟೆಗಳ ಕಾಲ ಶಾಲೆಗಳಲ್ಲಿ ಬಿಸಿಯೂಟ ಕಾರ್ಯ ನಿರ್ವಹಿಸುವ ಬಿಸಿಯೂಟ ನೌಕರರಿಗೆ ಕೇವಲ 300 ರೂ ಏರಿಸಲಾಗಿದೆ. ಅಂಗನವಾಡಿ ನೌಕರರಿಗೆ ಕೇವಲ 250 ರೂ ಏರಿಸಲಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ಹಣ ಕಡಿತ ಮಾಡಿ ಶಿಕ್ಷಣ ಕ್ಷೇತ್ರವನ್ನು ನಿರ್ಲಕ್ಷ ಮಾಡಿರುವ ರಾಜ್ಯ ಸರಕಾರದ ಬಜೆಟ್ ವಿದ್ಯಾರ್ಥಿ–ವಿರೊಧಿಯಾಗಿದೆ ■

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.350.00
ದ್ವೈವಾರ್ಷಿಕ ಚಂದಾ : ರೂ.700.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.50/5, 2ನೇ 'ಬಿ' ಮೈನ್, 16ನೇ ಕ್ರಾಸ್,
ಸಂಪಂಗಿರಾಮನಗರ, ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467



ಕ್ಯಾಸ್ಟ್ರೋ ಕಥೆ

6

ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್

ಯೂನಿವರ್ಸಿಟಿ ವಿದ್ಯಾರ್ಥಿ ಫೆಡರೇಷನ್‌ನ ಅಧ್ಯಕ್ಷ ಚುನಾವಣೆಗಳಲ್ಲಿ ಸರ್ಕಾರದ ಅಭ್ಯರ್ಥಿಯನ್ನು ಫಿಡೆಲ್ ಪ್ರಬಲವಾಗಿ ವಿರೋಧಿಸಲು ಪ್ರಾರಂಭಿಸಿದರು. ವಿವಿಯಲ್ಲಿದ್ದ ಮಾಫಿಯಾ ಹಿತಾಸಕ್ತಿಗಳಿಗೆ ಇದು ವಿರುದ್ಧವಾಗಿದ್ದರಿಂದ ಫಿಡೆಲ್‌ಗೆ ಸಾಕಷ್ಟು ತೊಂದರೆಗಳು ಶುರುವಾದವು. ದೈಹಿಕ ಬೆದರಿಕೆ ಮತ್ತು ಒತ್ತಡಗಳು ಹೆಚ್ಚಾದವು. ಫಿಡೆಲ್‌ರ ಅವಿಧೇಯತೆಯಿಂದ ಕಿರಿಕಿರಿಯಾದ ಮಾಫಿಯಾ ಸಾಕಷ್ಟು ಘಟನೆಗಳ ನಂತರ ಯೂನಿವರ್ಸಿಟಿಗೆ ಬರಲಾರದಂತೆ 'ಬ್ಯಾನ್' ಮಾಡಿದರು. ಈ ಘಟನೆ ಫಿಡೆಲ್‌ಗೆ ಆಘಾತವನ್ನುಂಟುಮಾಡಿತು. ಕಡಲ ಕಿನಾರೆಗೆ ಹೋಗಿ ಧ್ಯಾನಿಸಿದರು. ಮರಳಿನ ಮೇಲೆ ಮುಖವಿಟ್ಟು ಗಳಗಳನೆ ಅತ್ತರು. ಫಿಡೆಲ್‌ರ ಸ್ನೇಹಿತನೊಬ್ಬ ಬ್ರೌನಿಂಗ್ 15–ಷಾಟ್ ಪಿಸ್ತೂಲನ್ನು ಒದಗಿಸಿದ. ಸಾಯುವುದಾದರೆ ಫೈಟ್ ಮಾಡಿ ಸಾಯಬೇಕು, ಮಾಫಿಯಾ 'ಬ್ಯಾನ್'ಗೆ ಕೇರ್ ಮಾಡಬಾರದು ಎಂಬುದು ಫಿಡೆಲ್ ತೀರ್ಮಾನವಾಗಿತ್ತು.


ಫೈಟ್ ಮಾಡಿ ಸಾಯಬೇಕು, ಮಾಫಿಯಾ 'ಬ್ಯಾನ್'ಗೆ ಕೇರ್ ಮಾಡಬಾರದು

ಫಿಡೆಲ್ ಬಂದಾಗ ವಿವಿಯಲ್ಲಿ ಎಡಪಂಥೀಯರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದರು. ಅಂದಿಗೆ ಇಪ್ಪತ್ತು ವರ್ಷಗಳ ಹಿಂದೆ ಮೆಲ್ಲಾ ಅಲ್ಲಿ ಸ್ಫೂರ್ತಿಯ ಚಿಲುಮೆಯಾಗಿದ್ದರು. ಹನ್ನೆರೆಡು ವರ್ಷಗಳ ಹಿಂದೆ ರೂಬೆನ್ ಮಾರ್ಟಿನೆಜ್ ವಿಲ್ಲೆನಾ ರ ಕಮ್ಯುನಿಸ್ಟ್ ಪಕ್ಷದ ಪ್ರೇರಣೆಯಿಂದಾಗಿ ಮಚಾಡೋನನ್ನು ಅಧಿಕಾರದಿಂದ ಇಳಿಸುವ ಚಳುಳಿಯಲ್ಲಿ 15 ಸಾವಿರ ವಿದ್ಯಾರ್ಥಿಗಳು ಮುಷ್ಕರ ಮಾಡಿದ್ದರು. ಎರಡನೇ ಪ್ರಪಂಚ ಯುದ್ಧ ಮುಗಿದ ನಂತರ ಮೆಕಾರ್ಥಿವಾದ ಮತ್ತು ಕಮ್ಯುನಿಸಂ ವಿರೋಧಿ ದಾಳಿಗಳಿಂದಾಗಿ ಸಾಮ್ರಾಜ್ಯಶಾಹಿ ವಿರೋಧಿಗಳ ಸಂಖ್ಯೆ ಐವತ್ತಕ್ಕಿಂತ ಹೆಚ್ಚಿರಲಿಲ್ಲ. ವಿದ್ಯಾರ್ಥಿಗಳಲ್ಲಿ ಸಮಾಜ ಬದಲಾವಣೆಯ ಕ್ರಾಂತಿಕಾರಿ ವಿಷಯಗಳಿಗಿಂತ ಇತರೆ ವಿಚಾರಗಳು ಆದ್ಯತೆ ಪಡೆದವು. ಜಮೀನ್ದಾರನ ಮಗ ಮತ್ತು ಕಾಲೇಜಿಯೋ ಡಿ ಬೆಲೆನ್‌ನ ಪದವೀಧರನೆಂಬ ಕಾರಣಕ್ಕೆ ಫಿಡೆಲ್‌ನನ್ನು ಪ್ರಪಂಚದ ಅತ್ಯಂತ ಪ್ರತಿಗಾಮಿ ವ್ಯಕ್ತಿಯಿರಬೇಕೆಂದು ಎಡಪಂಥೀಯರು ನೋಡುತ್ತಿದ್ದರು.

ಫಿಡೆಲ್ ಗಳಗಳನೆ ಅತ್ತರು

ಪ್ರಾರಂಭದಲ್ಲಿ ಆಟಗಳಿಗೆ ತುಂಬಾ ಸಮಯ ಖರ್ಚು ಮಾಡುತ್ತಿದ್ದ ಫಿಡೆಲ್ ಕ್ರಮೇಣ ಅವನ್ನೆಲ್ಲಾ ಮರೆತೇ ಹೋದರು ಎನ್ನಬಹುದು. ತಮ್ಮ ಇಡೀ ಜೀವನವನ್ನು ರಾಜಕೀಯಕ್ಕೆ ಮುಡಿಪಾಗಿಟ್ಟರು. ತಮ್ಮ ತರಗತಿಯ ಪ್ರತಿನಿಧಿಯಾಗಿ ನಿಂತು 181 ಪರ ಮತ್ತು 33 ವಿರೋಧಿ ಮತಗಳನ್ನು ಪಡೆದು ಗೆದ್ದರು. ಯೂನಿವರ್ಸಿಟಿ ವಿದ್ಯಾರ್ಥಿ ಫೆಡರೇಷನ್‌ನ (FEU –Federacion Estudiantil Universitaria) ಅಧ್ಯಕ್ಷ ಚುನಾವಣೆಗಳಲ್ಲಿ ಸರ್ಕಾರದ ಅಭ್ಯರ್ಥಿಯನ್ನು ಪ್ರಬಲವಾಗಿ ವಿರೋಧಿಸಲು ಪ್ರಾರಂಭಿಸಿದರು. ವಿವಿಯಲ್ಲಿದ್ದ ಮಾಫಿಯಾ ಹಿತಾಸಕ್ತಿಗಳಿಗೆ ಇದು ವಿರುದ್ಧವಾಗಿದ್ದರಿಂದ ಫಿಡೆಲ್‌ಗೆ ಸಾಕಷ್ಟು ತೊಂದರೆಗಳು ಶುರುವಾದವು. ದೈಹಿಕ ಬೆದರಿಕೆ ಮತ್ತು ಒತ್ತಡಗಳು ಹೆಚ್ಚಾದವು. ಫಿಡೆಲ್‌ರ ಅವಿಧೇಯತೆಯಿಂದ ಕಿರಿಕಿರಿಯಾದ ಮಾಫಿಯಾ ಸಾಕಷ್ಟು ಘಟನೆಗಳ ನಂತರ ಯೂನಿವರ್ಸಿಟಿಗೆ ಬರಲಾರದಂತೆ 'ಬ್ಯಾನ್' ಮಾಡಿದರು. ಈ ಘಟನೆ ಫಿಡೆಲ್‌ಗೆ ಆಘಾತವನ್ನುಂಟುಮಾಡಿತು. ಕಡಲ ಕಿನಾರೆಗೆ ಹೋಗಿ ಧ್ಯಾನಿಸಿದರು. ಮರಳಿನ ಮೇಲೆ ಮುಖವಿಟ್ಟು ಗಳಗಳನೆ ಅತ್ತರು. ಅದೊಂದು ಸಂಕ್ಲಿಷ್ಟ ಸಮಸ್ಯೆಯಾಗಿತ್ತು. ಎಲ್ಲಾ ಅಧಿಕಾರವಿರುವ ಶಕ್ತಿಗಳ ವಿರುದ್ಧ ಫಿಡೆಲ್ ನಿಂತಿದ್ದರು. ಅವರಿಗೆ ಫಿಡೆಲ್‌ರನ್ನು ಕೊಲ್ಲುವುದು ಏನೇನೂ ಕಷ್ಟವಾಗಿರಲಿಲ್ಲ. ಪೊಲೀಸ್ ಅವರ ಜೊತೆಗಿತ್ತು. ಅವರನ್ನು ತಡೆದು ನಿಲ್ಲಿಸಿದ್ದು ಬಹುಶಃ ಫಿಡೆಲ್‌ರನ್ನು ದೊಡ್ಡ ಪ್ರಮಾಣದಲ್ಲಿ ಬೆಂಬಲಿಸುತ್ತಿದ್ದ ವಿದ್ಯಾರ್ಥಿ ಸಮೂಹ. ತಮ್ಮ ಜೀವಕ್ಕೆ ತೀವ್ರ ಗಂಡಾಂತರವಿದ್ದರೂ ಯೂನಿವರ್ಸಿಟಿಗೆ ಹಿಂದಿರುಗಲು – ಹಿಂದುರುಗಿ ಎದುರಿಸಲು – ತೀರ್ಮಾನಿಸಿದರು.

ಫಿಡೆಲ್‌ರ ಸ್ನೇಹಿತನೊಬ್ಬ ಬ್ರೌನಿಂಗ್ 15–ಷಾಟ್ ಪಿಸ್ತೂಲನ್ನು ಒದಗಿಸಿದ. ಸಾಯುವುದಾದರೆ ಫೈಟ್ ಮಾಡಿ ಸಾಯಬೇಕು, ಮಾಫಿಯಾ 'ಬ್ಯಾನ್'ಗೆ ಕೇರ್ ಮಾಡಬಾರದು ಎಂಬುದು ಫಿಡೆಲ್ ತೀರ್ಮಾನವಾಗಿತ್ತು. ಈ ರೀತಿಯಾಗಿ ಸರ್ಕಾರ ಮತ್ತು ಪ್ರಭುತ್ವದ ಅಧಿಕಾರಿಗಳ ವಿರುದ್ಧ ಫಿಡೆಲ್‌ರ ವಿಶಿಷ್ಟವಾದ ಮೊದಲ ಸಶಸ್ತ್ರ ಹೋರಾಟ ಪ್ರಾರಂಭವಾಗಿತ್ತು. ಫಿಡೆಲ್‌ರ ಶೌರ್ಯದಿಂದ ಪ್ರೇರೇಪಿತರಾದ ಇತರ ಐದು ಮಂದಿ ಇವರಂತೆಯೇ ಶಸ್ತ್ರಸಜ್ಜಿತರಾಗಿ ಯೂನಿವರ್ಸಿಟಿ ಪ್ರವೇಶಿಸಿದರು. ಈ ಪ್ರಕರಣವು ಮಾಫಿಯಾ ಶಕ್ತಿಗಳನ್ನು ಅಲುಗಾಡಿಸಿತು. ಈ ಮಾಫಿಯಾ ಶಕ್ತಿಗಳ ಜೊತೆ ನಿಂತಿದ್ದ ಮತ್ತು ಫಿಡೆಲ್‌ಗೆ ವಿರೋಧವಾಗಿದ್ದ ಹಲವಾರು ಯುವಜನರು ಮುಂದೆ ಕ್ರಾಂತಿಯ ಸಂದರ್ಭದಲ್ಲಿ ಸ್ನೇಹಿತರಾದರು, ಮಾತ್ರವಲ್ಲ, ಅವರಲ್ಲಿ ಕೆಲವರು ತಮ್ಮ ಪ್ರಾಣಗಳನ್ನು ಕೊಟ್ಟರು.



ಫಿಡೆಲ್ ಕ್ಯೂಬಾದ ಮೊದಲ ಸ್ವಾತಂತ್ರ್ಯ ಹೋರಾಟದ ಪ್ರತೀಕವಾಗಿದ್ದ ಗಂಟೆಯನ್ನು ಹವಾನಾ ವಿ.ವಿ,ಗೆ ತರುತ್ತಿರುವುದು

ಡೊಮಿನಿಕನ್ ಪ್ರಜಾಪ್ರಭುತ್ವಕ್ಕಾಗಿನ ಈಇಗನ ಸಮಿತಿಯ ಅಧ್ಯಕ್ಷರಾಗಿ ಫಿಡೆಲ್ ಮೊದಲನೇ ವರ್ಷದಲ್ಲಿ ನಿಯುಕ್ತಿಗೊಂಡಿದ್ದರು. ತಮ್ಮ ಇಪ್ಪತ್ತೊಂದನೇ ವಯಸ್ಸಿನಲ್ಲಿ ಡೊಮಿನಿಕನ್ ಗಣ–ರಾಜ್ಯದ ಸರ್ವಾಧಿಕಾರಿ ಟ್ರುಜಿಲ್ಲೋ1ನ ವಿರುದ್ಧ ಕೆ–ಯೋ ಕಾನ್ಫೆಟ್ಸ್ ದಂಡಯಾತ್ರೆಯಲ್ಲಿ ಪಾಲ್ಗೊಂಡರು. ಪೋರ್ಟೋರಿಕೋ ಸ್ವಾತಂತ್ರ್ಯಕ್ಕಾಗಿನ ಸಮಿತಿಗೂ ಫಿಡೆಲ್ ಅಧ್ಯಕ್ಷರಾಗಿದ್ದರು. ಈ ಜವಾಬ್ದಾರಿಗಳನ್ನು ಗಂಭೀರವಾಗಿಯೇ ಪರಿಗಣಿಸಿದರು. ಟ್ರುಜಿಲ್ಲೋನ ವಿರುದ್ಧದ ದಂಡಯಾತ್ರೆಯಲ್ಲಿ ಫಿಡೆಲ್‌ಗೆ ಮುಂದಿನ ದಿನಗಳಿಗೆ ಬೇಕಾದ ಅನುಭವ ಸಾಕಷ್ಟು ದೊರೆಯಿತು. ಕೆಯೋ ಕಾನ್ಫೆಟ್ಸ್ ದಂಡಯಾತ್ರೆ ವಿಫಲವಾಯಿತು. 1947ರ ಈ ದಂಡಯಾತ್ರೆ, 1948ರ ಬೊಗೋಟಜೊ, 1953ರ ಮೊಂಕಾಡಾ ದಾಳಿ ಮತ್ತಿತರ ಅನುಭಗಳು ಫಿಡೆಲ್‌ರ ಅನಿಯಮಿತ ಯುದ್ಧ ಅಥವಾ ಗೆರಿಲ್ಲಾ ಯುದ್ಧತಂತ್ರಗಳಲ್ಲಿ ನಂಬಿಕೆಯನ್ನು ಬಲಪಡಿಸಿತು. ಕ್ಯೂಬಾದಲ್ಲಾಗಲೀ, ಡೊಮಿನಿಕನ್ ಗಣರಾಜ್ಯದಲ್ಲಾಗಲೀ ಸೈನ್ಯವನ್ನು ನೇರವಾಗಿ ಎದುರಿಸಲು ಅಸಾಧ್ಯ, ಏಕೆಂದರೆ ಅದಕ್ಕೆ ನೌಕಾಪಡೆ, ವಾಯುಪಡೆ ಮತ್ತು ಇತರೆ ಎಲ್ಲವೂ ಇರುತ್ತವೆ, ಅವನ್ನು ಪರಿಗಣಿಸದಿರುವುದು ಮೂರ್ಖತನ ಎಂಬುದು ಫಿಡೆಲ್‌ರ ದೃಢ ನಂಬಿಕೆಯಾಯಿತು. ಬೆಟ್ಟಗಳ ಬಗ್ಗೆ ಫಿಡೆಲ್‌ಗಿದ್ದ ಅರಿವು, ಜೊತೆಗೆ ಹಳ್ಳಿಯ ವಾತಾವರಣದಲ್ಲಿ ಹುಟ್ಟಿದ್ದು ಎಲ್ಲವೂ ಈ ನಂಬಿಕೆಯನ್ನು ಗಟ್ಟಿಗೊಳಿಸಿದವು.

ಲ್ಯಾಟಿನ್ ಅಮೆರಿಕದ ಹೋರಾಟಗಳಲ್ಲಿ

ಫಿಡೆಲ್‌ಗೆ ಅತ್ಯಂತ ರಾಜಕೀಯ ಮಹತ್ವದ ಅನುಭವವೊಂದು ಬೊಗೊಟದಲ್ಲಿ ಆಯಿತು. ಲ್ಯಾಟಿನ್ ಅಮೇರಿಕದ ವಿದ್ಯಾರ್ಥಿಗಳನ್ನು ಪ್ರತಿನಿಧಿಸುವ ವಿದ್ಯಾರ್ಥಿಗಳ ವಿಶಾಲ ಒಕ್ಕೂಟವನ್ನು ಸ್ಥಾಪಿಸಲು ಫಿಡೆಲ್ ಮತ್ತು ಸ್ನೇಹಿತರು ಯೋಜಿಸಿದ್ದರು. ಅರ್ಜೈಂಟೈನರ ಫಾಕ್‌ಲ್ಯಾಂಡ್ ದ್ವೀಪಕ್ಕಾಗಿನ (Falkland Island) ಹೋರಾಟ, ಪೋರ್ಟೋರಿಕೋ ಸ್ವಾತಂತ್ರ್ಯ ಹೋರಾಟ, ಟ್ರುಜಿಲ್ಲೋನನ್ನು ಕಿತ್ತೆಸೆಯುವ ಹೋರಾಟ, ಪನಾಮಾ ಕಾಲುವೆ ವಾಪಸಾತಿ ಹೋರಾಟ ಮತ್ತು ಯೂರೋಪಿಯನ್ ವಸಾಹತುಗಳ ವಿಮೋಚನಾ ಹೋರಾಟ ಮುಂತಾದ ಸಾಮ್ರಾಜ್ಯಶಾಹಿ ಮತ್ತು ಸರ್ವಾಧಿಕಾರಿ ವಿರೋಧಿ ಕಾರ್ಯಕ್ರಮವನ್ನು ಈ ಒಕ್ಕೂಟವು ಒಳಗೊಂಡಿತ್ತು. ಈ ಹಿನ್ನೆಲೆಯಲ್ಲಿ 1948 ಏಪ್ರಿಲ್‌ನಲ್ಲಿ ಕೊಲಂಬಿಯಾಕ್ಕೆ ಹೋಗಿದ್ದಾಗ ಅಲ್ಲಿನ ಅತ್ಯಂತ ಜನಪ್ರಿಯ ರಾಜಕೀಯ ನಾಯಕ ಜಾರ್ಜ್ ಎಲೀಸರ್ ಗೈತನ್‌ರ ಕೊಲೆ ಸಂಭವಿಸಿತು. ಗೈತನ್ ಎಲ್ಲಾ ಉದಾರವಾದಿಗಳನ್ನು ಒಂದುಗೂಡಿಸಿದ್ದರು. ಅವರಿಗೆ ವಿಶ್ವವಿದ್ಯಾಲಯಗಳಲ್ಲಿ ಅಪಾರ ಪ್ರಭಾವವಿತ್ತು. ಲ್ಯಾಟಿನ್ ಅಮೇರಿಕನ್ ವಿದ್ಯಾರ್ಥಿಗಳ ಸಂಘಟನೆಗೆ ಫಿಡೆಲ್‌ರವರು ಗೈತನ್‌ರನ್ನು ಭೇಟಿ ಮಾಡಿ ಬೆಂಬಲ ಕೋರಿದ್ದರು. ಕೊಲಂಬಿಯಾದ ಜನರಿಗೆ ಗೈತನ್ ಭರವಸೆಯಾಗಿದ್ದರು. ಅಭಿವೃದ್ಧಿಯ ಸಂಕೇತವಾಗಿದ್ದರು. ಇವರ ಕೊಲೆಯು ಜನರಲ್ಲಿ ದಂಗೆಯನ್ನು ಸೃಷ್ಟಿಸಿತು. ನ್ಯಾಯ ಕೋರಿ ಕೈಗೆ ಸಿಕ್ಕ ಆಯುಧಗಳನ್ನು ಹಿಡಿದು ಜನತೆ ಬೀದಿಗಿಳಿದರು. ಸಾವಿರಾರು ಪ್ರಾಣಗಳು ಹಾರಿಹೋದವು. ಆಗ ಫಿಡೆಲ್ ದಕ್ಷಿಣ ಅಮೇರಿಕಾದ ವಿದ್ಯಾರ್ಥಿಗಳ ಸಮ್ಮೇಳನದ ಸಲುವಾಗಿ ಬೊಗೊಟಾದಲ್ಲಿದ್ದರು. ಅವರೊಂದಿಗೆ ಇವರೂ ಹೆಜ್ಜೆ ಹಾಕಿದರು. ಆಗಷ್ಟೇ ಚಿಗುರೊಡೆ–ಯುತ್ತಿದ್ದ ಮಾರ್ಕ್ಸ್‌ವಾದಿ ಚಿಂತನೆಗಳಿಗಿಂತಲೂ ಆ ತಕ್ಷಣದ ಪ್ರತಿಕ್ರಿಯೆಯಾಗಿ ಇದು ಸಂಭವಿಸಿತು.

ಗೈತನ್ ಕೊಲೆಯ ಹಿಂದಿನ ದಿನ ಫಿಡೆಲ್ ಪನಾಮದಲ್ಲಿದ್ದರು. ಪನಾಮಾ ಕಾಲುವೆಯನ್ನು ಹಿಂದಿರುಗಿಸಬೇಕೆಂಬ ಬೇಡಿಕೆಯಿಟ್ಟು ಯಾಂಕೀಗಳ ಕುತಂತ್ರದ ವಿರುದ್ಧ ಜನ ಬೀದಿಗಿಳಿದಿದ್ದರು. ಯಾಂಕೀಗಳು ಮೆಷಿನ್‌ಗನ್‌ಗಳನ್ನು ಬಳಸಿ ಹಲವಾರು ಜನರನ್ನು ಸಾಯಿಸಿದ್ದರು. ಅದರ ವಿರುದ್ಧ ನಡೆದ ದೀರ್ಘವಾದ ಮೆರವಣಿಗೆಗಳಲ್ಲಿ ಫಿಡೆಲ್ ವಿದ್ಯಾರ್ಥಿಗಳೊಂದಿಗೆ ನಡೆದಿದ್ದರು. ಅಮೇರಿಕನ್ನರ ದುಷ್ಟ ಆಕ್ರಮಣದಿಂದ ಅವರ ಬಂದೂಕುಗಳಿಗೆ ಬೆನ್ನು ಮೂಳೆಗಳನ್ನು ಕೊಟ್ಟಿದ್ದ ಮಕ್ಕಳನ್ನು ಸಂತೈಸಿದ್ದರು. ಅವರ ಹೋರಾಟವನ್ನು ಬೆಂಬಲಿಸಿದ್ದರು. ಇವೆಲ್ಲವೂ ಫಿಡೆಲ್‌ರ ಯೋಚನಾ ಲಹರಿಯನ್ನು ತಿದ್ದಿ ತೀಡುತ್ತಿದ್ದವು.

ಗೋಪ್ಯ ರೇಡಿಯೊ ಪತ್ರಿಕೆ

ಯೂನಿವರ್ಸಿಟಿಯಲ್ಲಿರುವಾಗ ನಡೆಸಿದ ಚಟುವಟಿಕೆಗಳಲ್ಲಿ ಫಿಡೆಲ್‌ರ ಪಾತ್ರ ವಿಭಿನ್ನವಾದುದು. ಒಂದು ಕ್ರಾಂತಿಕಾರಿ ಗೋಪ್ಯ ಪ್ರಕಟಣೆಯನ್ನು ಸೃಷ್ಟಿಸುವ ಸಲುವಾಗಿ ಗೋಪ್ಯವಾದ ವಾರ್ತಾಪತ್ರಿಕೆ, ಕಿರುಹೊತ್ತಿಗೆಗಳು, ಪ್ರಣಾಳಿಕೆಯನ್ನು ಹೊರತರುತ್ತಿದ್ದರು. ಅದಕ್ಕಾಗಿ ನಕಲುಯಂತ್ರವನ್ನು (Mimeograph) ಬಳಸುತ್ತಿದ್ದರು. ಜೊತೆಗೆ ಕಡಿಮೆ ತರಂಗಗಳನ್ನು ಬಳಸಿದ ರೇಡಿಯೋ ಸ್ಟೇಷನ್ ಕೂಡಾ ನಡೆಸುತ್ತಿದ್ದರು. ಇದಕ್ಕೆಲ್ಲಾ ಕೇಳುಗರ ಮತ್ತು ಓದುಗರ ನೆಲೆಯಿತ್ತು. ಮುಖ್ಯವಾಗಿ ಜನಪ್ರಿಯ ಮುಖಂಡ ಎಡ್ವರ್ಡೋ ಚೀಬಾಸ್2 ಸ್ಥಾಪಿಸಿದ ಆರ್ಥೋಡಕ್ಸ್ ಪೀಪಲ್ಸ್ ಪಾರ್ಟಿ ಆಫ್ ಕ್ಯೂಬಾದ ಬೃಹತ್ ಬೆಂಬಲಿಗರಿದ್ದರು. ಇವರೆಲ್ಲರೂ ಬಟಿಸ್ಟಾನ ವಿರುದ್ಧವಾಗಿದ್ದರು.

ಈ ಸಂದರ್ಭದ ಒಂದು ಪ್ರಸಂಗವನ್ನು ಫಿಡೆಲ್ ನೆನಪಿಸಿಕೊಳ್ಳುತ್ತಾರೆ. ಬೈರನ್‌ನಲ್ಲಿ ಟೆಲಿಗ್ರಾಫ್ ಆಪರೇಟರ್ ಆಗಿದ್ದ ವಲೆರೋನ ಮಗ ಇಲ್ಲಿ ಫಿಡೆಲ್‌ನ ಬೆಂಬಲಿಗನಾಗಿರುತ್ತಾನೆ. 'ಎಲ್ ಅಕ್ಯುಸೇಡರ್' (The Accusader) ಎಂಬ ವಾರ್ತಾಪತ್ರಿಕೆಯನ್ನು ನಕಲು ಮಾಡವಾಗ ನಕಲು ಯಂತ್ರದ ಬಗ್ಗೆ ಬಟಿಸ್ಟಾನ ಪೊಲೀಸರಿಗೆ ಮಾಹಿತಿ ನೀಡುತ್ತಾನೆ ಮತ್ತು ಬಟಿಸ್ಟಾನ ವಿರುದ್ಧದ ಹೋರಾಟಕ್ಕೆ ದ್ರೋಹ ಬಗೆಯುತ್ತಾನೆ. ಇವನನ್ನು ಫಿಡೆಲ್ ಪೂರ್ಣವಾಗಿ ನಂಬಿರುತ್ತಾನೆ ಅದು ತಪ್ಪಾಗಿತ್ತು. ಕೇವಲ ಸ್ನೇಹಿತ ಎಂಬ ಕಾರಣಕ್ಕಾಗಿ ಯಾರನ್ನಾದರೂ ನಂಬಬಾರದು ಎನ್ನುತ್ತಾರೆ ಫಿಡೆಲ್.

ಟಿಪ್ಪಣಿಗಳು

1. **ರಫಾಯ್‌ಲ್ ಟ್ರುಜಿಲ್ಲೋ (1891–1961) :** 1930 ರಿಂದ 1961 ರವರೆಗೆ ಡೊಮಿನಿಕನ್ ಗಣರಾಜ್ಯದ ಸರ್ವಾಧಿಕಾರಿ. ಸಂಯುಕ್ತ ರಾಷ್ಟ್ರ ಅಮೇರಿಕದ ಬಾಲಬಡುಕನಾಗಿದ್ದ. ದೇಶಭ್ರಷ್ಟರಾಗಿದ್ದ ಕಮ್ಯುನಿಸ್ಟರಿಗೆ ಪುನಃ ನೆಲೆ ನೀಡುವುದಾಗಿ 1946ರಲ್ಲಿ ಘೋಷಿಸಿ, ಅವರೆಲ್ಲಾ ದೇಶದೊಳಗೆ ಬಂದ ನಂತರ ಅವರನ್ನು ಸಾಮೂಹಿಕವಾಗಿ ಕೊಲೆ ಮಾಡಿಸಿದ. ಇದಕ್ಕೆ ಪ್ರತಿರೋಧವಾಗಿ ಕೆಯೋ ಕಾನ್ಫೆಟ್ಸ್ ದಂಡಯಾತ್ರೆ ಯೋಜನೆ ರೂಪುಗೊಂಡಿತು. ಟ್ರುಜಿಲ್ಲೋನ ದಮನಕಾರಿ ಆಡಳಿತವು ಲ್ಯಾಟಿನ್ ಅಮೇರಿಕದ ಚರಿತ್ರೆಯಲ್ಲೇ ಅತ್ಯಂತ ಪ್ರತಿಗಾಮಿ ಮತ್ತು ರಕ್ತಸಿಕ್ತವಾಗಿತ್ತು. 1961ರಲ್ಲಿ ಟ್ರುಜಿಲ್ಲೋನ ಕೊಲೆಯಾಯಿತು.
2. **ಎಡ್ವರ್ಡೋ ಚೀಬಾಸ್ (1907–51) :** ಮಚಾಡೋನ ವಿರುದ್ಧ ನಡೆದ ವಿದ್ಯಾರ್ಥಿ ದಂಗೆಗಳ ಮೂಲಕ ಹೊರಹೊಮ್ಮಿದ ಪ್ರಭಾವಿ ನಾಯಕ. ಮೊದಲಿಗೆ ಅಥೆಂಟಿಕ್ ಪಕ್ಷದಲ್ಲಿದ್ದ. ಆ ಪಕ್ಷದ ಅಧ್ಯಕ್ಷ ರೇಮನ್ ಮಾರ್ಟಿನ್‌ನ ಆಡಳಿತದ ಭ್ರಷ್ಟಾಚಾರ, ತತ್ವಗಳನ್ನು ಕೈಬಿಟ್ಟಿದ್ದು ಇತ್ಯಾದಿಗಳಿಂದ ಬೇಸತ್ತು ಆರ್ಥೋಡಕ್ಸ್ ಕ್ಯೂಬನ್ ಪೀಪಲ್ಸ್ ಪಾರ್ಟಿಯನ್ನು ಸ್ಥಾಪಿಸಿದ. ಫಿಡೆಲ್ ಈ ಪಕ್ಷವನ್ನು ಸೇರಿದರು. ಅತ್ಯಂತ ಸಮರ್ಥ ವಾಗ್ಮಿ ಮತ್ತು ರಾಷ್ಟ್ರೀಯವಾದಿಯಾಗಿದ್ದ ಚೀಬಾಸ್ 1952ರಲ್ಲಿ ನಡೆಯಬೇಕಿದ್ದ ಅಧ್ಯಕ್ಷ ಚುನಾವಣೆಯಲ್ಲಿ ತಮ್ಮ ಪಕ್ಷದ ಅಭ್ಯರ್ಥಿಯಾಗಿದ್ದ. 1951ರ ಆಗಸ್ಟ್‌ನಲ್ಲಿ ತನ್ನ ರೇಡಿಯೋ ಭಾಷಣ ಮುಗಿದ ನಂತರ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡ. ●

ಈಗ ಖೋಟಾ ರಾಷ್ಟ್ರೀಯವಾದದ ಕೇಕೆ


ಪುಟ 7 ರಿಂದ

ಉತ್ತರ ಪ್ರದೇಶವನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ಈ ರೀತಿ ಮಾಡುತ್ತಿದೆ.

"ಭಾರತ್ ಮಾತಾಕೀ ಜೈ" ನಂತರದ ಘೋಷಣೆ ಹಸುವನ್ನು 'ರಾಷ್ಟ್ರ ಮಾತಾ' ಮಾಡುವ ಘೋಷಣೆ. ಈಗಾಗಲೇ ಗೋಹತ್ಯೆ-ವಿರೋಧಿ ಪ್ರಚಾರ ಮುಸ್ಲಿಮರನ್ನು ಗುರಿಯಾಗಿಸಿಕೊಂಡಿದೆ. ಇಂಥ ಅಪಪ್ರಚಾರಗಳು ಯಾವ ರೀತಿಯಲ್ಲಿ ಕೋಮು ವಿಷವನ್ನು ಕಾರಲು ಸಹಾಯಕವಾಗುತ್ತವೆ ಎನ್ನುವುದಕ್ಕೆ ಜಾರ್ಖಂಡ್‌ನ ಲಾತೇಹರ್ ಜಿಲ್ಲೆಯ ಘಟನೆ ತಾಜಾ ಉದಾಹರಣೆಯಾಗಿದೆ. ದನಗಳ ಜಾತ್ರೆಯೊಂದಕ್ಕೆ ಎತ್ತುಗಳನ್ನು ಒಯ್ಯುತ್ತಿದ್ದ 12 ವರ್ಷದ ಹುಡುಗನೂ ಸೇರಿದಂತೆ ಇಬ್ಬರು ಮುಸ್ಲಿಮರನ್ನು ಹೊಡೆದು ಸಾಯಿಸಲಾಯಿತು. ದಾದ್ರಿ ಮತ್ತು ಹಿಮಾಚಲ ಪ್ರದೇಶ, ಜಮ್ಮು ಘಟನೆಗಳ ನಂತರ ಜಾರ್ಖಂಡ್‌ನಲ್ಲಿ ನಡೆದ ಹತ್ಯೆಗಳು ದೇಶದಲ್ಲಿ ಕೋಮು ವಿದ್ವೇಷ ಹರಡುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಬಿಜೆಪಿ ಸರಕಾರ ಒಂದು ಶ್ರಮ ವಿಭಜನೆಯನ್ನು ರೂಪಿಸಿಕೊಂಡಿದೆ. ರಾಷ್ಟ್ರೀಯ ಮಂಡಳಿಯ ಸಭೆಯಲ್ಲಿನ ತಮ್ಮ ಭಾಷಣದಲ್ಲಿ 'ವಿಕಾಸ, ವಿಕಾಸ ಮತ್ತು ವಿಕಾಸ' ತಮ್ಮ ಸರಕಾರದ ಮುಖ್ಯ ವಿಷಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಅತ್ತ ಅಮಿತ್ ಷಾ ಮತ್ತು ಇತರ ಸಚಿವರು ಹಿಂದೂ ರಾಷ್ಟ್ರೀಯವಾದಿ ಅಜೆಂಡಾವನ್ನು ಮತ್ತು ನಗ್ನ ಕೋಮುವಾದಿ ವಿಚಾರಗಳನ್ನು ಪ್ರತಿಪಾದಿಪಾದಿಸುತ್ತಾರೆ.

ಆರ್‌ಎಸ್‌ಎಸ್ ಈ ಶ್ರಮ ವಿಭಜನೆಯ ಸಂಯೋಜಕ ಎನ್ನುವುದಕ್ಕೆ ಬಿಜೆಪಿಯ ರಾಷ್ಟ್ರೀಯ ಮಂಡಳಿಯ ಸಭೆ ನಡೆಯುವುದಕ್ಕೆ ಕೇವಲ ಒಂದು ವಾರದ ಹಿಂದೆ ರಾಜಸ್ಥಾನದ ನಾಗೋರ್‌ನಲ್ಲಿ ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರತಿನಿಧಿ ಸಭೆ ನಡೆದಿದ್ದೇ ಸಾಕ್ಷಿ. ಆರ್‌ಎಸ್‌ಎಸ್‌ನ ಸಭೆಯಲ್ಲಿ ಬಿಜೆಪಿ ಸೇರಿದಂತೆ ಎಲ್ಲಾ ವಿಭಾಗಗಳು ಮತ್ತು ಮುಂಚೂಣಿ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕಳೆದ ಒಂದು ವರ್ಷದಲ್ಲಿ ಬಿಜೆಪಿ ನಡೆಸಿದ ಚಟುವಟಿಕೆಗಳ ಬಗ್ಗೆ ಅಮಿತ್ ಷಾ ವಿವರವಾದ ವರದಿಯನ್ನು ಅಲ್ಲಿ ಮಂಡಿಸಿದ್ದರು. ಕೇಂದ್ರ ಸರಕಾರದ ಯಾವುದೇ ಪ್ರಮುಖ ಕಾರ್ಯಾಚರಣೆಯಲ್ಲಾಗಲೀ ಬಿಜೆಪಿಯಲ್ಲಾಗಲೀ ಸಂಘ ಪರಿವಾರದ ಮುಖ್ಯ ಸಿದ್ಧಾಂತವನ್ನು ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಸಭೆಗೆ ಅವರು ಹೇಳಿದ್ದರು. ಬಿಜೆಪಿ ಯಾವ ಉದ್ದೇಶಕ್ಕಾಗಿ (ಆರ್‌ಎಸ್‌ಎಸ್‌ನಿಂದ) ಸ್ಥಾಪಿತವಾಯಿತೋ ಸರಕಾರದ ಕೆಲಸಗಳು ಆ ಸಿದ್ಧಾಂತ ಮತ್ತು ತತ್ವಗಳಿಂದ ನಿರ್ದೇಶಿತವಾಗಿರುತ್ತವೆ ಎಂದು ಅವರು ಅಭಯ ನೀಡಿದ್ದರು.



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ಹಿಂದೂ ರಾಷ್ಟ್ರೀಯವಾದವನ್ನು ಮುಂದಿಟ್ಟುಕೊಂಡು ಆರ್‌ಎಸ್‌ಎಸ್-ಬಿಜೆಪಿ ನಡೆಸುತ್ತಿರುವ ದಾಳಿಯನ್ನು ಎದುರಿಸಿ ಹಿಮ್ಮೆಟ್ಟಿಸಬೇಕು. ಆದರೆ ಈ ಖೋಟಾ ಅತಿ-ರಾಷ್ಟ್ರೀಯವಾದ ಕೆಲವು ಬಂಡವಾಳಶಾಹಿ ಜಾತ್ಯತೀತ ಪಕ್ಷಗಳು ಮತ್ತು ಶಕ್ತಿಗಳು ಮುದುರಿಕೊಳ್ಳುವಂತೆ ಮಾಡಿದೆ. 'ಭಾರತ್ ಮಾತಾಕೀ ಜೈ' ಘೋಷಣೆಯನ್ನು ಕೂಗಲಿಲ್ಲ ಎಂಬ ಕಾರಣಕ್ಕೆ ಮಹಾರಾಷ್ಟ್ರ ವಿಧಾನಸಭೆಯಿಂದ ಎಂಐಎಂ ಸದಸ್ಯರೊಬ್ಬರನ್ನು ಅಮಾನತು ಮಾಡಿರುವುದು ಆಘಾತಕರ ಸಂಗತಿಯಾಗಿದೆ. ಎಂಐಎಂ ಶಾಸಕನ ಅಮಾನತು ಗೊತ್ತುವಳಿಗೆ ಕಾಂಗ್ರೆಸ್ ಮತ್ತು ಎನ್‌ಸಿಪಿ ಶಾಸಕರು ಬಿಜೆಪಿ ಮತ್ತು ಶಿವಸೇನೆಯೊಂದಿಗೆ ಮತ ಚಲಾಯಿಸಿದ್ದು ಖಂಡನೀಯವಾಗಿದೆ. ಅದೇ ರೀತಿ, ಘೋಷಣೆ ಕೂಗಲು ನಿರಾಕರಿಸಿದ ಓವೈಸಿ ವಿರುದ್ಧ ಮಧ್ಯಪ್ರದೇಶ ವಿಧಾನಸಭೆಯಲ್ಲಿ ಖಂಡನಾ ಗೊತ್ತುವಳಿಯನ್ನು ಮಂಡಿಸಿದ್ದು ಒಬ್ಬ ಕಾಂಗ್ರೆಸ್ ಶಾಸಕ!. ಈ ಗೊತ್ತುವಳಿಗೆ ಬಿಜೆಪಿ ಬೆಂಬಲ ನೀಡಿದ್ದು ಸರ್ವಾನುಮತದಿಂದ ಅಂಗೀಕಾರವಾಯಿತು. ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷವಾಗಲೀ ಬಿಎಸ್‌ಪಿಯಾಗಲೀ, ಹಿಂದುತ್ವ-ವಿರೋಧಿ ಶಕ್ತಿಗಳನ್ನು ದೇಶ-ವಿರೋಧಿ ಎಂದು ಬ್ರಾಂಡ್ ಮಾಡುವ ಬಿಜೆಪಿ ಪ್ರಚಾರವನ್ನು ಎದುರಿಸಲು ಮುಂದೆ ಬಂದಿಲ್ಲ.

ಇಂಥ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳುವ ಮೂಲಕ ಬಿಜೆಪಿಯನ್ನು ರಾಜಕೀಯವಾಗಿ ಎದುರಿಸಲು ಸಾಧ್ಯವಿಲ್ಲ ಎನ್ನುವುದನ್ನು ಇತರ ಜಾತ್ಯತೀತ ಪಕ್ಷಗಳು ಮನಗಾಣಬೇಕಾಗಿದೆ. ಹಿಂದುತ್ವದ ಪ್ರಹಾರದ ವಿರುದ್ಧ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಮೌಲ್ಯಗಳ ರಕ್ಷಣೆಗಾಗಿ ಮುಂದಿನ ದಿನಗಳಲ್ಲಿ ಒಂದು ದೊಡ್ಡ ಸೈದ್ಧಾಂತಿಕ ಹೋರಾಟ ನಡೆಯಲಿದೆ.


ಸಣ್ಣ ಉಳಿತಾಯಗಳ ಬಡ್ಡಿ ದರಗಳಲ್ಲಿ ಕಡಿತ: ಇನ್ನೊಂದು ಅಚ್ಛೇ ದಿನ್ ಮುನ್ನೋಟ



ನೌಕರರ ಭವಿಷ್ಯ ನಿಧಿಯ ಮೇಲೆ ತೆರಿಗೆ ಹಾಕಿ ಅದನ್ನು ಶೇರು ಮಾರುಕಟ್ಟೆಗೆ ತಿರುಗಿಸುವ ಪ್ರಯತ್ನ ವಿಫಲವಾದ ನಂತರ 'ಅಚ್ಛೇದಿನ್' ಹಣಕಾಸು ಮಂತ್ರಿಗಳು ದೇಶದ ಜನಸಾಮಾನ್ಯರ ಸಣ್ಣ ಉಳಿತಾಯಗಳಿಗೆ ಕೈಹಾಕಿದ್ದಾರೆ. ಮೋದಿಯವರ ಸಂಪುಟದ ಮಂತ್ರಿಗಳಿಗೆ ಜನಸಾಮಾನ್ಯರ ಮೇಲೆ ಹೊರೆ ಹಾಕುವುದರ ಬಗ್ಗೆ ಒಂದು ವಿಶೇಷ ಮೋಹವಿದ್ದಂತೆ ಕಾಣುತ್ತದೆ ಎಂದು ಈ ಬಗ್ಗೆ ಒಬ್ಬರು ಟಿಪ್ಪಣಿ ಮಾಡಿದ್ದಾರೆ.

ಅಂಚೆ ಕಚೇರಿಗಳ ಮೂಲಕ ಕೋಟ್ಯಂತರ ಜನಸಾಮಾನ್ಯರು ಮಾಡುತ್ತಿರುವ ಸಣ್ಣ ಉಳಿತಾಯಗಳ ಮೇಲೆ ಬಡ್ಡಿ ದರಗಳನ್ನು ಗಮನಾರ್ಹವಾಗಿ ಇಳಿಸಲಾಗಿದೆ. ಕಿಸಾನ್ ವಿಕಾಸ್ ಪತ್ರಗಳ ಮೇಲಿನ ಬಡ್ಡಿ ದರವನ್ನು 8.7ಶೇ. ದಿಂದ 7.8ಶೇ.ಕ್ಕೆ, ಮೂರು ವರ್ಷಗಳ ವರೆಗಿನ ಠೇವಣಿಗಳದ್ದು 8.4ಶೇ.ದಿಂದ 7.1, 7.2 ಮತ್ತು 7.3ಶೇ.ಕ್ಕೆ , 5 ವರ್ಷದ ಠೇವಣಿಯ ದರವನ್ನು 8.5ಶೇ.ದಿಂದ 7.9ಶೇ.ಕ್ಕೆ ಇಳಿಸಲಾಗಿದೆ. ಸಾಮಾಜಿಕ ಭದ್ರತೆಯ ಅಂಶ ಇರುವ ಯೋಜನೆಗಳಾದ ಸಾರ್ವಜನಿಕ ಭವಿಷ್ಯ ನಿಧಿ(8.7ರಿಂದ8.1ಕ್ಕೆ) ಹೆಣ್ಣುಮಕ್ಕಳಿಗಾಗಿ ಇರುವ ಸುಕನ್ಯ ಸಮೃದ್ಧಿ ಯೋಜನೆ(9.2ರಿಂದ 8.6) ಮತ್ತು ಹಿರಿಯ ನಾಗರಿಕರ ಉಳಿತಾಯ ಯೋಜನೆ(9.3ರಿಂದ 8.6)ಗಳ ಮೇಲಿನ ಬಡ್ಡಿದರಗಳನ್ನೂ ಬಿಟ್ಟಿಲ್ಲ.

ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ನಮ್ಮ ಆರ್ಥಿಕ ವ್ಯವಸ್ಥೆಯೊಳಗೆ ಬೇಡಿಕೆಗಳನ್ನು ಹೆಚ್ಚಿಸಲು ಜನಸಾಮಾನ್ಯರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಬದಲು ಜನಸಾಮಾನ್ಯರಿಂದಲೇ ಕಿತ್ತುಕೊಂಡು ಶೇರು ಮಾರುಕಟ್ಟೆಗೆ ಉತ್ತೇಜನೆ ನೀಡುವ ಕ್ರಮಗಳು ಇವು ಎಂದು ಬೇರೆ ಹೇಳಬೇಕಾಗಿಲ್ಲ. ಇವು ಎಪ್ರಿಲ್‌ನಿಂದ ಜೂನ್ ವರೆಗಿನ ಮೂರು ತಿಂಗಳಿಗೆಂದು ಘೋಷಿಸಿರುವ ದರಗಳು. ಆರ್ಥಿಕ ಬಿಕ್ಕಟ್ಟು ಮುಂದುವರೆಯುವ ಭೀತಿ ಇರುವ ಸಂದರ್ಭದಲ್ಲಿ ಜನಸಾಮಾನ್ಯರ ಸಣ್ಣ ಉಳಿತಾಯಗಳ ಮೇಲೆ ಮುಂದಿನ ತ್ರೈಮಾಸಿಕಗಳಲ್ಲೂ ಮತ್ತಷ್ಟು ಹೊರ ಬೀಳುವ ಸಾಧ್ಯತೆಗಳೇ ಹೆಚ್ಚು.



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಿಜಯ ಕರ್ನಾಟಕ

ರಿಝರ್ವ್ ಬ್ಯಾಂಕ್ ಬಡ್ಡಿ ದರಗಳನ್ನು ಇಳಿಸುವಾಗ 25 ಬೇಸಿಕ್ ಪಾಯಿಂಟುಗಳಷ್ಟು, ಹೆಚ್ಚೆಂದರೆ 50 ಪಾಯಿಂಟ್‌ಗಳಷ್ಟು ಮಾಡುತ್ತದೆ. ಆದರೆ ಅಚ್ಛೇ ದಿನ್ ಸರಕಾರ ಸರಾಸರಿ 90 ಬೇಸಿಕ್ ಪಾಯಿಂಟ್‌ಗಳಷು ಇಳಿಸಿ ದಂತಾಗಿದೆ ಎಂದು ಲೆಕ್ಕ ಹಾಕಲಾಗಿದೆ. ವಾಸ್ತವವಾಗಿ ಇದು ಜನತೆಯ ಮೇಲೆ ಬಜೆಟ್ ನಂತರ ಹೇರಿರುವ, ಇನ್ನು ಮುಂದೆ ಪ್ರತಿ ಮೂರು ತಿಂಗಳು ಹೇರಬಹುದಾದ ಪರೋಕ್ಷ ತೆರಿಗೆಗಳೇ ಎನ್ನುತ್ತಾರೆ ಪರಿಣಿತರು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿರುವಂತೆ "ಸಣ್ಣ ಉಳಿತಾಯಗಳು ನಮ್ಮ ಆರ್ಥಿಕದ ಬೆನ್ನೆಲುಬು. ಬೇರಾವ ಸಾಮಾಜಿಕ ಭದ್ರತೆಯಿಲ್ಲದ ಜನ ಇಂತಹ ಖಾತ್ರಿ ಪ್ರತಿಫಲದ ಯೋಜನೆಗಳನ್ನು ಅವಲಂಬಿಸುತ್ತಾರೆ....'. ಈಗ ಅದರ ಮೇಲೂ ಪ್ರಹಾರ ನಡೆಸಲಾಗುತ್ತಿದೆ.

ಪೆಟ್ರೋಲ್, ಡೀಸೆಲ್‌ಗಳ ಬೆಲೆಗಳನ್ನು ಏರಿಸಿದ ಬೆನ್ನ ಹಿಂದೆಯೇ ಬಂದಿರುವ ಈ ಬಡ್ಡಿ ದರ ಕಡಿತಗಳು ಬಡ ಮತ್ತು ಮಧ್ಯಮ ವರ್ಗಗಳ ಉಳಿತಾಯಗಳ ಮೇಲೆ ದುಷ್ಪರಿಣಾಮ ಬೀರಲಿವೆ ಎಂದಿರುವ

ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿದೇಶಗಳಲ್ಲಿ ಪೇರಿಸಿಟ್ಟಿರುವ ಕಪ್ಪು ಹಣವನ್ನು ತರಲು ಯಾವುದೇ ಪ್ರಯತ್ನ ನಡೆಸದ ಸರಕಾರ ಜನಸಾಮಾನ್ಯರ ಸಣ್ಣ ಉಳಿತಾಯಗಳ ಮೆಲೆ ದಾಳಿ ಮಾಡುತ್ತಿದೆ, ಇದನ್ನು ಸಹಿಸಲು ಸಾಧ್ಯವಿಲ್ಲ ಎಂದು ಹೇಳಿದೆ, ಈ ಕಡಿತಗಳನ್ನು ಹಿಂತೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಸ್ವಯಂ ಘೋಷಿತ 'ಬಾಬಾ ಸಾಹೇಬ್' ಭಕ್ತ'ರೂ ಮತ್ತು ರೋಹಿತ್‌ಗೆ ನ್ಯಾಯವೂ

ಮಾರ್ಚ್ 21ರಂದು ನವದೆಹಲಿಯಲ್ಲಿ ಅಂಬೇಡ್ಕರ್ ಸ್ಮಾರಕ ಭಾಷಣ ಮಾಡುತ್ತ ಪ್ರಧಾನಿಗಳು ಅಂಬೇಡ್ಕರ್ ಕೇವಲ ದಲಿತರ ಉದ್ಧಾರಕರಷ್ಟೇ ಅಲ್ಲ, ಅವರು ನಮ್ಮ ದವಿಶದ ಮಾರ್ಟಿನ ಲೂಥರ್ ಕಿಂಗ್ ಎಂದರಂತೆ. ಇದರಿಂದ ಅಂಬೇಡ್ಕರ್‌ರವರ ಮಹಾನತೆಯನ್ನು ಒಪ್ಪುವವರಿಗೆ ಬಹಳ ಸಂತೋಷವೇನೂ ಆಗಿಲ್ಲ. ಏಕೆಂದರೆ ಈ ಹಿಂದೆ ಈ ಪ್ರಧಾನಿಗಳೇ ಅಕಾಲಿ ದಳದ ಮುಖಂಡ ಪ್ರಕಾಶ ಸಿಂಗ್ ಬಾದಲ್ ಅವರನ್ನು ನೆಲ್ಸನ್ ಮಂಡೇಲಾ ಅವರಿಗೆ ಹೋಲಿಸಿದ್ದರು.

ಇದು ಕೇವಲ ಅವರ ಇತಿಹಾಸ ಜ್ಞಾನದ ಉದಾಹರಣೆಗಳಷ್ಟೇ ಎಂದು ಉಪೇಕ್ಷಿಸಿ ಬಿಡುವಂತಿಲ್ಲ ಎಂದು ಕೆಲವು ಇತಿಹಾಸಜ್ಞರು ಹೇಳುತ್ತಾರೆ. ಏಕೆಂದರೆ ಅದೇ ಭಾಷಣದಲ್ಲಿ ಮುಮದುವರೆದು ಅವರು ಅಂಬೇಡ್ಕರ್ ಮೊದಲ ನೆಹರೂ ಸಂಪುಟವನ್ನು ಏಕೆ ತ್ಯಜಿಸಿದು ಎಂದು ಪ್ರಶ್ನಿಸಿಕೊಳ್ಳುತ್ತ ಹಿಂದೂ ಕೋಡ್ ಬಿಲ್‌ಇದಕ್ಕೆ ಕಾರಣ ಎಂದೂ ಹೇಳಿದರು.

ಹೌದು, ಈ ಮಸೂದೆಯ ಬಗ್ಗೆ ನೆಹರೂ ಸಾರ್ವತ್ರಿಕ ಚುನಾವಣೆಗಳು ಮುಗಿಯುವ ವರೆಗೆ ನಿಧಾನ ಮಾಡೋಣ ಎಂದಿದ್ದರಂತೆ. ಏಕೆಂದರೆ ಕಾಂಗ್ರೆಸ್‌ನ ಒಳಗೂ ಇದಕ್ಕೆ ಬಲಪಂಥೀಯರಿಂದ ವಿರೋಧವಿತ್ತು. ಆದರೆ ಅದೇ ಸಂಪುಟದಲ್ಲಿ ಅಂಬೇಡ್ಕರ್‌ರವರ ಸಹಯೋಗಿಯಾಗಿದ್ದ, ಮುಂದೆ ಬಿಜೆಪಿಯ ಪೂರ್ವಾವತಾರವಾದ ಭಾರತೀಯ ಜನಸಂಘದ ಜನಕನೆನಿಸಿರುವ ಆಗ ಹಿಂದೂ ಮಹಾಸಭಾದ ಮುಖಂಡರಾಗಿದ್ದ ಶ್ಯಾಮ ಪ್ರಸಾದ್ ಮುಖರ್ಜಿಯವರು ಫೆಬ್ರುವರಿ 1951ರಲ್ಲಿ ಅಂಬೇಡ್ಕರ್ ಈ ಮಸೂದೆಯನ್ನು ಮಂಡಿಸಿದಾಗ ಅದನ್ನು ಕಟುವಾಗಿ ವಿರೋಧಿಸಿದ್ದರು, ಅದು ಸ್ಥಿರತೆಯನ್ನು, ಹಿಂದೂ ಸಂಸ್ಕೃತಿಯ ಭವ್ಯತೆಯನ್ನು ಹಾಳುಗೆಡವುತ್ತದೆ ಎಂದಿದ್ದರಲ್ಲಾ ಎಂದು ಇತಿಹಾಸಜ್ಞೆ ಮೃದುಲಾ ಮುಖರ್ಜಿ ಪ್ರಶ್ನಿಸಿದ್ದಾರೆ. ಇನ್ನೊಬ್ಬ ಇತಿಹಾಸ ಲೇಖಕ ರಾಮಚಂದ್ರ ಗುಹ ರವರ ಪ್ರಕಾರ ಆರೆಸ್ಸೆಸ್ 1949ರ ಒಂದೇ ವರ್ಷದಲ್ಲಿ 79 ಸಭೆಗಳಲ್ಲಿ ನೆಹರೂ ಮತ್ತು ಅಂಬೇಡ್ಕರ್ ಪ್ರತಿಕೃತಿಗಳನ್ನು ಸುಟ್ಟಿತ್ತು ಎಂದಿದ್ದಾರೆ.

ಆದರೂ **ಮಾರ್ಚ್ 21ರ ಈ ಭಾಷಣದಲ್ಲಿ ಮೋದಿಯವರು ತಾನು 'ಬಾಬಾ ಸಾಹೇಬರ ಭಕ್ತ' ಎಂದಿದ್ದಾರೆ. ಕಳೆದ 60 ವರ್ಷಗಳಲ್ಲಿ ಆಗದ್ದನ್ನು ತಾನು ಮಾಡುವುದಾಗಿ ಹೇಳಿದ್ದಾರೆ.** ಕಳೆದ 60 ವರ್ಷ ಬಿಡಿ, ಶಿಕ್ಷಣದ ಖಾಸಗೀಕರಣ ನಡೆದ ಕಳೆದ 20ವರ್ಷಗಳಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಲಿತ ಮತ್ತಿತರ ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳ ವಿದ್ಯಾರ್ಥಿಗಳ ಕುರಿತಾದ ಥೋರಟ್ ಸಮಿತಿಯ ವರದಿಯ ಬಗ್ರೆ ಏನಾದರೂ ಮಾಡಬಹುದಲ್ಲ ಎಂದು ವಿದ್ಯಾರ್ಥಿಗಳು ಕೇಳುತ್ತಿದ್ದಾರೆ. ಅಂತಹ ಲಕ್ಷಣಗಳೇನೂ ಇಲ್ಲ.

ಏಕೆಂದರೆ, ಮರುದಿನವೇ, ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಅಂಬೇಡ್ಕರ್ ವಿದ್ಯಾರ್ಥಿ ಸಂಘದ ಮುಖಂಡ ರೋಹಿತ್ ವೆಮುಲ ಆತ್ಮಹತ್ಯೆಯ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿ ಅನಿರ್ದಿಷ್ಟ ಕಾಲದ ರಜೆಯಲ್ಲಿ ತೆರಳಿದ್ದ ಆ ವಿವಿಯ ಉಪಕುಲಪತಿಗಳು ಇದ್ದಕ್ಕಿದ್ದಂತೆ ಹಾಜರಾಗಿ ವಿವಿ ಕ್ಯಾಂಪಸ್‌ನ್ನು ಪೋಲೀಸ್ ದಬ್ಬಾಳಿಕೆಗೆ ವಹಿಸಿಕೊಟ್ಟಿದ್ದಾರೆ. ರೋಹಿತ್ ವೆಮುಲ ಮತ್ತು ಆತನ ನಾಲ್ಕು ದಲಿತ ಸಂಗಡಿಗರಿಗೆ ನ್ಯಾಯ ಒದಗಿಸಬೇಕು ಎನ್ನುವ ವಿದ್ಯಾರ್ಥಿಗಳ ಬೇಡಿಕೆಯ ಬಗ್ಗೆ ಈ ಸ್ವಯಂ ಘೋಷಿತ 'ಅಂಬೇಡ್ಕರ್ ಭಕ್ತ'ರದ್ದು ಯಥಾಪ್ರಕಾರ ದಿವ್ಯ ಮೌನವೇ!

ಕಳೆದ ವಾರ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ 'ಭಾರತ್ ಮಾತಾಕೀ ಜೈ' ಎನ್ನಲು ನಿರಾಕರಿಸುವುದು ಸಂವಿಧಾನಕ್ಕೆ ತೋರುವ ಅಗೌರವ ಎಂದು ಜೇಟ್ಲಿಯವರು ಹೇಳಿದರೆ, ಮೋದಿ ದೇಶಕ್ಕೆ ದೇವರ ಕೊಡುಗೆ ಎಂದು ವೆಂಕಯ್ಯ ನಾಯ್ಡು ಹೇಳಿದರಂತೆ-ಸುದ್ದಿ



ವ್ಯಂಗ್ಯಚಿತ್ರ ಕೃಪೆ: ಗೋಕುಲ್,

ಉದಾರೀಕರಣದ ಹಾದಿಯಲ್ಲಿ ದೇಶದ ಆರ್ಥಿಕ ಸ್ಥಿತಿ-ಗತಿ : ಆಮದುಗಳಿಂದಾಗಿ ನಿರುದ್ಯೋಗ-ಇನ್ನು ನಿರುದ್ಯೋಗದ ಆಮದು!



ಕೆ.ಎಂ.ನಾಗರಾಜ್

ಈ ವರ್ಷದ 'ಆರ್ಥಿಕ ಸಮೀಕ್ಷೆ'ಯಲ್ಲಿನ ಅಂಕಿ-ಅಂಶಗಳ ವಿಶ್ವಾಸಾರ್ಹತೆ ಪ್ರಶ್ನಾರ್ಹ. ಆದರೂ ಅದೇ ನೀಡಿರುವ ಅಂಕಿ-ಅಂಶಗಳ ಪ್ರಕಾರವೂ ನಮ್ಮ ಅರ್ಥವ್ಯವಸ್ಥೆ ನಿಂತಲ್ಲೇ ನಿಂತಿರುವುದು ಕಾಣುತ್ತದೆ. ಇದಕ್ಕೆ ಕಾರಣ ಜನತೆಯ ಕೊಳ್ಳುವ ಶಕ್ತಿಯನ್ನು ಹಿಂಡಿ ಹಾಕಿರುವುದು.

ವ್ಯಾಪಾರಗಳ ಉದಾರೀಕರಣದಲ್ಲಿ ಆಮದುಗಳು ನಮ್ಮ ಕೈಗಾರಿಕೆಗಳನ್ನು ನಾಶ ಮಾಡುವ ಮೂಲಕ ನಿರುದ್ಯೋಗಕ್ಕೆ ಕಾರಣವಾಗುತ್ತವೆ. ಈಗ ನಿರುದ್ಯೋಗವನ್ನೇ ಆಮದು ಮಾಡುವತ್ತ ನಮ್ಮ ಆಳರಸರು ಸಾಗುತ್ತಿರುವಂತಿದೆ ಎನ್ನುತ್ತಾರೆ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್. ರೂಪಾಯಿ ಮೌಲ್ಯ ಹೆಚ್ಚಿನ ಏರಿಳಿತಕ್ಕೆ ಒಳಗಾಗದಂತೆ ಒದೆ(ತಡೆ) ಕೊಟ್ಟು ನಿಲ್ಲಿಸಿರುವ ಷೇರು ಮಾರುಕಟ್ಟೆಗೆ ಹರಿಯುತ್ತಿರುವ ವಿದೇಶಿ ಹಣ, ನಿರುದ್ಯೋಗ ಆಮದುಮಾಡಿಕೊಳ್ಳುವ ಹಾದಿಯನ್ನು ತೆರೆಯಬಲ್ಲದು ಎನ್ನುತ್ತಾರೆ ಅವರು.

ಒಂದು ಕಾಲವಿತ್ತು, ಆಗ ದೇಶದ ಅಂಕಿ ಅಂಶಗಳ ಏರ್ಪಾಡಿನ ಬಗ್ಗೆ ವಿಶ್ವಾಸಾರ್ಹತೆ ಇತ್ತು. ಆ ವಿಶ್ವಾಸಾರ್ಹತೆ ಈಗ ಉಳಿದಿಲ್ಲ. ಜಿಡಿಪಿಯ ಅಂದಾಜಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಕೇಂದ್ರ ಸರ್ಕಾರದ ಆರ್ಥಿಕ ಸಮೀಕ್ಷೆಯೇ ಅನುಮಾನಿಸಿದೆ. ಇತ್ತೀಚಿನ ಆರ್ಥಿಕ ಸಮೀಕ್ಷೆಯಲ್ಲಿ ಕೊಟ್ಟಿರುವ ಕೆಲವು ಅಂಕಿ ಅಂಶಗಳು ವಿಚಿತ್ರವಾಗಿ ಕಾಣುತ್ತವೆ. ಉದಾಹರಣೆಗೆ, ಸಮೀಕ್ಷೆಯಲ್ಲಿ, ಕೈಗಾರಿಕಾ ಉತ್ಪನ್ನಗಳ ಸೂಚ್ಯಂಕವನ್ನು ಉಲ್ಲೇಖಿಸಿ, ಎಪ್ರಿಲ್-ಡಿಸೆಂಬರ್ 2015 ಅವಧಿಯಲ್ಲಿ, ಹಿಂದಿನ ವರ್ಷದ ಅದೇ ಅವಧಿಗೆ ಹೋಲಿಸಿದರೆ, ತಯಾರಿಕಾ ವಲಯದಲ್ಲಿ ಶೇ.3.1 ಉತ್ಪತ್ತಿ ಹೆಚ್ಚಾಗಿದೆ ಎಂಬುದಾಗಿ ವರದಿಯಾಗಿದೆ. ಅದೇ ಸಮೀಕ್ಷೆಯಲ್ಲಿ, ಸಿಎಸ್‌ಒ ಒದಗಿಸಿರುವ ಅಂಕಿ ಅಂಶಗಳ ಆಧಾರದ ಮೇಲೆ, 2015-16ರಲ್ಲಿ, ತಯಾರಿಕಾ ವಲಯದಲ್ಲಿ ಅಂದಾಜು ಶೇ. 9.5 ಉತ್ಪಾದನೆ ಹೆಚ್ಚಾಗಲಿದೆ ಎಂದು ತಿಳಿಸುತ್ತದೆ. ಹಾಗಾಗಿ, ಜಿಡಿಪಿಯ ಶೇಕಡಾವಾರು ಬೆಳವಣಿಗೆಯ ಅಂದಾಜಿಗೆ ಮಹತ್ವ ಉಳಿದಿಲ್ಲ. ಆದ್ದರಿಂದ, ಜಿಡಿಪಿ ಅಂಕಿ ಅಂಶಗಳ ವಿಶ್ವಾಸಾರ್ಹತೆಯನ್ನು ಪಕ್ಕಕ್ಕೆ ಸರಿಸಿ, 'ನಿರ್ವಿವಾದ'ವಾಗಿರುವ ಕೆಲವು ಅಂಕಿ ಅಂಶಗಳನ್ನು ಗಮನಿಸಿದಾಗ, ನಮ್ಮ ಅರ್ಥವ್ಯವಸ್ಥೆ ನಿಂತಲ್ಲೇ ನಿಂತಿರುವುದು ಕಾಣುತ್ತದೆ. ಮತ್ತು ಜನತೆಯ ಕೊಳ್ಳುವ ಶಕ್ತಿಯನ್ನು ಹಿಂಡಿರುವುದೇ ಅದಕ್ಕೆ ಕಾರಣವೆಂಬುದೂ ಸ್ಪಷ್ಟವಾಗುತ್ತದೆ.

ಆಂತರಿಕ ಮಾರುಕಟ್ಟೆಯ ಕುತ್ತಿಗೆ ಹಿಸುಕಿದೆ


ಜನರ ಆಹಾರ ಸೇವನೆಯ ಪ್ರಮಾಣ ಕಡಿಮೆಯಾಗಿದೆ. 2012-13ರ ನಂತರದ ಮೂರು ವರ್ಷಗಳಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 5 ಮಿಲಿಯನ್ ಟನ್ ಕಡಿಮೆಯಾಗಿದೆ. ಅದೇ ಹೊತ್ತಿನಲ್ಲಿ, ಪಡಿತರ ವ್ಯವಸ್ಥೆಯ ಮೂಲಕ ಮಾರಾಟವಾದ ಧಾನ್ಯಗಳ ಪ್ರಮಾಣ 10 ಮಿಲಿಯನ್ ಟನ್ ಇಳಿದಿರುವುದು ಜನರ ಆಹಾರ ಸೇವನೆಯ ಪ್ರಮಾಣ ಎಷ್ಟರ ಮಟ್ಟಿಗೆ ಕಡಿಮೆಯಾಗಿದೆ ಎಂಬುದನ್ನು ತೋರಿಸುತ್ತದೆ.

ಹತ್ತೊಂಭತ್ತನೆಯ ಶತಮಾನದ ಕೊನೆಗಾಲದಲ್ಲಿ, ಬ್ರಿಟಿಷ್ ಇಂಡಿಯಾದಲ್ಲಿ, ಆಹಾರ ಧಾನ್ಯಗಳ ತಲಾ ಬಳಕೆಯ ಪ್ರಮಾಣ ಸುಮಾರು 200 ಕೆ.ಜಿಗಳಿತ್ತು. ಬ್ರಿಟಿಷ್ ಆಡಳಿತದ ಕೊನೆಯಲ್ಲಿ (1945-46ರಲ್ಲಿ) ತಲಾ ಬಳಕೆಯ ಆಹಾರದ ಪ್ರಮಾಣ 137 ಕೆ.ಜಿಗೆ ಇಳಿಯಿತು. ಸ್ವಾತಂತ್ರ್ಯಾನಂತರದಲ್ಲಿ, ಸತತ ಪ್ರಯತ್ನಗಳ ಮೂಲಕ ಆಹಾರ ಧಾನ್ಯಗಳ ತಲಾ ಬಳಕೆಯ ಪ್ರಮಾಣ ಏರಿಕೆ ಕಂಡು, 1991-92ರ ವೇಳೆಗೆ 177 ಕೆ.ಜಿಯ ಮಟ್ಟ ತಲುಪಿತು. ಆರ್ಥಿಕ ಉದಾರೀಕರಣ ನೀತಿಗಳು ಆರಂಭವಾದ ನಂತರದ ಕಾಲದಲ್ಲಿ, ಮೊದಲು ಸ್ವಲ್ಪ ನಿಧಾನವಾಗಿ ಮತ್ತು ನಂತರ ವೇಗವಾಗಿ ಇಳಿದು, ತಲಾ ಬಳಕೆಯ ಪ್ರಮಾಣ 2011-12ರ ಹೊತ್ತಿಗೆ 163ಕೆ.ಜಿಗೆ ತಲುಪಿತು. ನಂತರ, ಮತ್ತಷ್ಟು ಇಳಿಕೆಯಾಗಿದೆ ಎಂದು ಆರ್ಥಿಕ ಸಮೀಕ್ಷೆ ಹೇಳಿದೆ. ಈ ಇಳಿಕೆಯು ಧಾನ್ಯಗಳ ಉತ್ಪಾದನೆ ಕಡಿಮೆಯಾಗಿದ್ದರಿಂದ ಆದದ್ದಲ್ಲ ಎಂಬುದು ವಿಶೇಷವಾಗಿ ಗಮನಿಸ ಬೇಕಿರುವ ಅಂಶ. ಏಕೆಂದರೆ, 2013-14 ಮತ್ತು 2014-15 ರಲ್ಲಿ ಒಟ್ಟು 42 ಮಿಲಿಯನ್ ಟನ್ ಧಾನ್ಯಗಳನ್ನು ರಫ್ತು ಮಾಡಲಾಗಿದ್ದು, ಅದರ ಬಳಿಕವೂ ಭಾರತ ಆಹಾರ ನಿಗಮದಲ್ಲಿ ಸಾಧಾರಣವಾಗಿ ಇರುವುದಕ್ಕಿಂತಲೂ ಹೆಚ್ಚಿನ ದಾಸ್ತಾನು ಉಳಿದಿತ್ತು. ಅಂದರೆ, ಪಡಿತರ ನಿಗದಿ ಬೆಲೆಯಲ್ಲಿಯೂ ಕೊಳ್ಳುವ ಶಕ್ತಿ ಜನರಲ್ಲಿ ಇರಲಿಲ್ಲ. ಜನರ ಕೊಳ್ಳುವ ಶಕ್ತಿ ಸೀಮಿತಗೊಂಡಿರುವುದರಿಂದ ಆಂತರಿಕ ಮಾರುಕಟ್ಟೆಯ ಗಾತ್ರವೂ ಕುಗ್ಗಿದೆ. ಅಷ್ಟರ ಮಟ್ಟಿಗೆ ಅದರ ಕುತ್ತಿಗೆ ಹಿಸುಕಿದಂತಾಗಿದೆ.

ತಯಾರಿಕಾ ವಲಯ ಸಂಪೂರ್ಣ ಸ್ಥಗಿತ

ಕಳೆದ ನಾಲ್ಕು ವರ್ಷಗಳಲ್ಲಿ (2012-13 ರಿಂದ 2015-16ರವರೆಗೆ), ತಯಾರಿಕಾ ವಲಯದಲ್ಲಿ, ಸತತವಾಗಿ, ನಗಣ್ಯ ಎನ್ನುವಷ್ಟು ಕಡಿಮೆ ಬೆಳವಣಿಗೆಯಾಗಿದೆ. ಇದು, ಆರ್ಥಿಕ ಉದಾರೀಕರಣ ನೀತಿಗಳ ಆರಂಭದ ಮುನ್ನ ಇದ್ದ ಸರಾಸರಿ ಬೆಳವಣಿಗೆಗಿಂತಲೂ ಕಡಿಮೆ ಇದೆ. ಹಾಗಾಗಿ, ತಯಾರಿಕಾ ವಲಯ ಈಗ ಸ್ಥಗಿತಗೊಂಡಿದೆ ಎಂಬುದು ನಿಚ್ಚಳವಾಗಿದೆ. ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು, ಜನರ ಕೈಯಲ್ಲಿ ಕೊಳ್ಳುವ ಶಕ್ತಿ ಕ್ಷೀಣಗೊಂಡಿರುವುದರಿಂದ ನಮ್ಮ ಇಡೀ ಆಂತರಿಕ ಮಾರುಕಟ್ಟೆ ಸ್ಥಗಿತಗೊಂಡಿದೆ. ಎರಡನೆಯದು, ವ್ಯಾಪಾರದ ಉದಾರೀಕರಣದಿಂದಾಗಿ ಸರಕುಗಳು ಪ್ರವಾಹದ ರೀತಿಯಲ್ಲಿ ದೇಶದೊಳಗೆ ನುಗ್ಗುತ್ತಿವೆ. ಅದರೊಟ್ಟಿಗೆ, ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ನಮ್ಮ ರಫ್ತುಗಳನ್ನು ಸೊರಗುವಂತೆ ಮಾಡಿದೆ. ಈ ಬೆಳವಣಿಗೆಗಳಿಂದಾಗಿ ನಮ್ಮ ತಯಾರಿಕಾ ವಲಯ ಸ್ಥಗಿತಗೊಂಡಿದೆ.

ಉದಾರೀಕರಣ ನೀತಿಗಳನ್ನು ಅಳವಡಿಸಿಕೊಂಡ ನಂತರ ನಮ್ಮ ಕೈಗಾರಿಕಾ ವಲಯಕ್ಕೆ ಎರಗಿರುವ ದುಃಸ್ಥಿತಿಯನ್ನು ಕೆಲವರು "ವಿಕೈಗಾರೀಕರಣ" (deindustrialisation) ಎಂದೂ ಹೇಳುತ್ತಾರೆ. ವಸಾಹತು ಕಾಲದಲ್ಲಿ, ಇಂಗ್ಲೆಂಡಿನಲ್ಲಿ ತಯಾರಾದ ಅನೇಕಾನೇಕ ಸರಕುಗಳನ್ನು ಆಮದು ಮಾಡಿಕೊಂಡ ಪರಿಣಾಮವಾಗಿ ಭಾರತದ ಕುಲ ಕಸುಬುದಾರರು ಮತ್ತು ಕುಶಲ ಕರ್ಮಿಗಳು ಬೀದಿಗೆ ಬಿದ್ದಿದ್ದ ಪರಿಸ್ಥಿತಿಯನ್ನು ರಾಷ್ಟ್ರವಾದಿ ಬರಹಗಾರರು "ವಿಕೈಗಾರೀಕರಣ" ಎಂದು ವರ್ಣಿಸಿದ್ದರು. ಅದೇ ರೀತಿಯಲ್ಲಿ, ಉದಾರೀಕರಣದ ಆಳ್ವಿಕೆಯಲ್ಲಿ, ಕಂಪ್ಯೂಟರ್ ಯಂತ್ರೋಪಕರಣಗಳಿಂದ ಹಿಡಿದು ಬೃಹತ್ ಎಲೆಕ್ಟ್ರಿಕಲ್ ಯಂತ್ರೋಪಕರಣಗಳ ವರೆಗೆ ಸರಕುಗಳನ್ನು ಅಗ್ಗದ ಬೆಲೆಯಲ್ಲಿ ಆಮದು ಮಾಡಿಕೊಳ್ಳುತ್ತಿರುವುದರಿಂದ ಭಾರತದ ಕೈಗಾರಿಕೆಗಳು ಹೊಡೆತ ತಿನ್ನುತ್ತಿವೆ. ಏಕೆಂದರೆ, ಬೇರೆ ದೇಶಗಳಿಂದ ಆಮದಾಗುತ್ತಿರುವ ಸರಕುಗಳ ಮೇಲೆ ಹೆಚ್ಚಿನ ಸುಂಕ ವಿಧಿಸುವ ಮೂಲಕ ತಡೆ ಒಡ್ಡುವ ಕೆಲಸವನ್ನು ಸರ್ಕಾರ ಮಾಡುತ್ತಿಲ್ಲ.



ಇತ್ತೀಚೆಗೆ ನಮ್ಮ ದೇಶಕ್ಕೆ ಭೇಟಿ ಕೊಟ್ಟಿದ್ದ ಐಎಂಎಫ್ ಮುಖ್ಯಸ್ಥೆ ಕ್ರಿಸ್ಟೀನ್ ಲಗಾರ್ಡ್ ಅವರ ಸಮ್ಮುಖದಲ್ಲಿ ನರೇಂದ್ರ ಮೋದಿಯವರು, ಭಾರತವು ತನ್ನ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಸಲುವಾಗಿ ವಿದೇಶಿ ವಿನಿಮಯ ದರವನ್ನು ಒಂದು ಅಸ್ತ್ರವಾಗಿ ಬಳಸುವುದಿಲ್ಲ ಎಂದು ಹೇಳಿರುವುದು ಕುತೂಹಲಕಾರಿಯಾಗಿದೆ. ಅದರ ಅರ್ಥ ನಿರುದ್ಯೋಗವನ್ನು ಆಮದು ಮಾಡಿಕೊಳ್ಳುವುದು ಎಂದಾಗುತ್ತದೆ.

ದೇಶ ದೇಶಗಳ ನಡುವಿನ ವ್ಯಾಪಾರಗಳಲ್ಲಿ ಉದಾರೀಕರಣ ನೀತಿಗಳನ್ನು ಜಾರಿಗೊಳಿಸುವ ಪ್ರಕ್ರಿಯೆ ಪೈಪೋಟಿಯನ್ನು ಉತ್ತೇಜಿಸುವ ಉದ್ದೇಶದಿಂದ ಕೂಡಿತ್ತು. ಅಂದರೆ, ಅತಿ ಕಡಿಮೆ ಬೆಲೆಯಲ್ಲಿ ಉತ್ತಮ ಸರಕುಗಳನ್ನು ಉತ್ಪಾದಿಸುವ ದಕ್ಷತೆ ಉಳ್ಳ ಉತ್ಪಾದಕರು ಅದಕ್ಷರನ್ನು ಮಾರುಕಟ್ಟೆಯಿಂದ ಹೊರಹಾಕುತ್ತಾರೆ ಎನ್ನುವ ಪ್ರತಿಪಾದನೆ. ಈ ವಾದ ಸಮರ್ಥನೀಯವಲ್ಲ ಎಂಬುದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು, ಬಲಾಢ್ಯ ದೇಶಗಳು ಕುಟಿಲ ವ್ಯವಹಾರ ನೀತಿಗಳನ್ನು ಅನುಸರಿಸುತ್ತವೆ. ಅಂದರೆ, ಆ ದೇಶಗಳು ತಮ್ಮ ಸರಕುಗಳನ್ನು ಅತಿ ಕಡಿಮೆ ಬೆಲೆಯಲ್ಲಿ ಉತ್ಪಾದಿಸಲಾಗದಿದ್ದರೂ, ತಮ್ಮ ಕುತಂತ್ರಗಳಿಗೆ ಬಲಿ ಬೀಳುವ ದೇಶಗಳ ಮೇಲೆ, ಕೆಲವು ನಿರ್ಬಂಧಗಳನ್ನು(ಕೋಟಾ, ಲೆವಿ, ತಡೆಯಾಜ್ಞೆ, ಒತ್ತಾಯ, ಮುಂತಾದ ಕ್ರಮಗಳು) ಹೇರಿ, ಆಮದುಗಳು ತಮ್ಮ ದೇಶದೊಳಗೆ ನುಗ್ಗದಂತೆ ತಡೆದು ತಮ್ಮ ಆಂತರಿಕ ಮಾರುಕಟ್ಟೆಗಳಿಗೆ ರಕ್ಷಣೆ ಒದಗಿಸುತ್ತವೆ. ಹಾಗಾಗಿ, ಆ ದೇಶಗಳ ಉತ್ಪಾದಕರು ತಮ್ಮ ಸರಕುಗಳನ್ನು ಬೇರೆ ದೇಶಗಳಲ್ಲಿ ರಾಶಿಗಟ್ಟಲೆ ಸುರಿದು ರಫ್ತು ಮಾರುಕಟ್ಟೆಯನ್ನು ವಶಪಡಿಸಿಕೊಳ್ಳುತ್ತವೆ. ಇದನ್ನೇ ಬೇರೆ ಮಾತುಗಳಲ್ಲಿ ಹೀಗೆ ಹೇಳಬಹುದು: ನಮ್ಮ ಮಾರುಕಟ್ಟೆಯಲ್ಲಿ ಬೇರೆ ದೇಶಗಳು ತಮ್ಮ ಸರಕುಗಳನ್ನು ಅವುಗಳ ಉತ್ಪಾದನಾ ಬೆಲೆಗಿಂತ ಕಡಿಮೆ ಬೆಲೆಗೆ ಮಾರುತ್ತಿದ್ದಾರೆ. ಇದು, ನಮ್ಮ ತಯಾರಕರನ್ನು ನಿಸ್ಸಹಾಯಕರನ್ನಾಗಿ ಮಾಡಿದೆ.

ಎರಡನೆಯದಾಗಿ, ದಕ್ಷತೆಯನ್ನು ಉತ್ತೇಜಿಸುತ್ತದೆ ಎಂಬುದನ್ನೇ ಪ್ರಧಾನವಾಗಿ ಪರಿಗಣಿಸಿರುವ ವ್ಯಾಪಾರಗಳ ಉದಾರೀಕರಣವು, ಆಮದುಗಳು ನಿರುದ್ಯೋಗಕ್ಕೆ ಕಾರಣವಾಗುತ್ತವೆ ಎಂಬ ಅಂಶವನ್ನು ಒಪ್ಪುವುದಿಲ್ಲ. ಇದೊಂದು ವಿಚಿತ್ರವಾದ ತರ್ಕ. ಏಕೆಂದರೆ, ವಸಾಹತುಶಾಹಿಗಳು ತಮ್ಮ ಆಳ್ವಿಕೆಗೆ ಒಳಪಟ್ಟಿದ್ದ ದೇಶಗಳಲ್ಲಿ ಶತಮಾನಗಳ ಕಾಲ ಕೈಗಾರಿಕೆಗಳು ಬೆಳೆಯಲು ಬಿಡದಿದ್ದ ಪರಿಸ್ಥಿತಿಯ ಅರಿವಿದ್ದರೂ, ಆಮದುಗಳು ನಿರುದ್ಯೋಗಕ್ಕೆ ಕಾರಣವಾಗುವ ವಿದ್ಯಮಾನವನ್ನು ನಿರಾಕರಿಸುವ ಬರಡು ಆರ್ಥಿಕ ಸಿದ್ಧಾಂತವು, ಅನಿವಾರ್ಯವಾಗಿ, ವ್ಯಾಪಾರಗಳ ಉದಾರೀಕರಣದ ಪೂರ್ವದಲ್ಲಿ ಮತ್ತು ನಂತರದ ಎರಡೂ ಪರಿಸ್ಥಿತಿಗಳಲ್ಲೂ ಉದ್ಯೋಗಗಳು ಪೂರ್ಣ ಪ್ರಮಾಣದಲ್ಲಿರುತ್ತವೆಂದು ಊಹಿಸಿಕೊಳ್ಳುತ್ತದೆ. ಹಾಗಾಗಿ, ವ್ಯಾಪಾರಗಳ ಉದಾರೀಕರಣವು ದೇಶದ ಕೈಗಾರಿಕಾ ಉತ್ಪತ್ತಿಗೆ ಮತ್ತು ಆ ಮೂಲಕ ರಫ್ತುಗಳಿಗೂ ಹಾನಿಯಾಗುತ್ತದೆ.

ಆದರೆ, ವಿರೋಧಾಭಾಸದ ರೀತಿಯಲ್ಲಿ, ಆಮದುಗಳನ್ನು ತಡೆಯುವ ಉದ್ದೇಶದಿಂದ ಕೆಲವು ದೇಶಗಳು ತಮ್ಮ ಉತ್ಪಾದಕರಿಗೆ ಕೆಲವು ಅನುಕೂಲ ಕಲ್ಪಿಸಿಕೊಡುತ್ತವೆ. ಆ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಳ್ಳುವ ಕ್ರಮಗಳಿಂದಾಗಿ ಆ ದೇಶವು ಬೇರೆ ದೇಶಗಳ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿ ಉಳಿಯುತ್ತದೆ. ಅಂದರೆ, ಉತ್ಪಾದಕರಿಗೆ ತಮ್ಮ ದೇಶದ ಆಂತರಿಕ ಮಾರುಕಟ್ಟೆಯಲ್ಲಿ ಭದ್ರವಾಗಿ ಕಾಲೂರಲು ಸರ್ಕಾರ ನೆರವಾಗುವುದರಿಂದ ಅವರು ರಫ್ತು ಮಾರುಕಟ್ಟೆಯಲ್ಲಿ ಪೈಪೋಟಿ ಒಡ್ಡಲು ಸಮರ್ಥರಾಗುತ್ತಾರೆ. ಅದು ನೆರವೇರುತ್ತದೋ, ಇಲ್ಲವೋ ಎಂಬುದಕ್ಕಿಂತಲೂ ಬಹಳ ಮುಖ್ಯವಾದದ್ದು ಅಂತಹ ಕ್ರಮಗಳು ಆಂತರಿಕ ಉತ್ಪತ್ತಿ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಮೂಲಕ ವಿಕೈಗಾರೀಕರಣವಾಗದಂತೆ ತಡೆಯುವುದು ನಿಸ್ಸಂಶಯವಾಗಿದೆ.

ಮುಕ್ತ ವ್ಯಾಪಾರದ ಸದ್ಗುಣಗಳ ಬಗ್ಗೆ ಬೇರೆ ಯಾವುದೇ ದೇಶಕ್ಕೂ ಉಪದೇಶ ಮಾಡುವ ಒಂದು ಸಣ್ಣ ಅವಕಾಶವನ್ನೂ ಬಿಡದ ಅಮೆರಿಕ ಸದ್ಯದ ಬಿಕ್ಕಟ್ಟಿನ ಹೊಡೆತಗಳಿಂದ ತಪ್ಪಿಸಿಕೊಳ್ಳಲು ಅದೇ ಸದ್ಗುಣಗಳನ್ನು ಗಾಳಿಗೆ ತೂರಿ ತನ್ನ ಸ್ವಹಿತ ಕಾಪಾಡಿಕೊಳ್ಳುತ್ತಿರುವುದು ಆಶ್ಚರ್ಯವೇನಲ್ಲ. ಸೇವಾ ವಲಯದ ಎಲ್ಲ ಚಟುವಟಿಕೆಗಳನ್ನೂ "ಹೊರಗುತ್ತಿಗೆ" ನೀಡಿರುವ ಕಂಪೆನಿಗಳನ್ನು, ದಕ್ಷತೆಯ ಗುಣಗಾನ ಮಾಡುವ ಅಮೆರಿಕದ ಸರ್ಕಾರ ದಂಡಿಸುತ್ತಿದೆ. ಇದು, ಭಾರತದಂತಹ ದೇಶಗಳ ಉದ್ಯೋಗ ಪರಿಸ್ಥಿತಿಯನ್ನು ಹಾಳುಗೆಡವುತ್ತದೆ.

ನಿರುದ್ಯೋಗದ ಆಮದು

ಇತ್ತೀಚೆಗೆ ನಮ್ಮ ದೇಶಕ್ಕೆ ಭೇಟಿ ಕೊಟ್ಟಿದ್ದ ಐಎಂಎಫ್ ಮುಖ್ಯಸ್ಥೆ ಕ್ರಿಸ್ಟೀನ್ ಲಗಾರ್ಡ್ ಅವರ ಸಮ್ಮುಖದಲ್ಲಿ ನರೇಂದ್ರ ಮೋದಿಯವರು, ಭಾರತವು ತನ್ನ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಸಲುವಾಗಿ ವಿದೇಶಿ ವಿನಿಮಯ ದರವನ್ನು ಒಂದು ಅಸ್ತ್ರವಾಗಿ ಬಳಸುವುದಿಲ್ಲ ಎಂದು ಹೇಳಿರುವುದು ಕುತೂಹಲಕಾರಿಯಾಗಿದೆ. ಆರ್ಥಿಕ ಹಿಂಜರಿತದ ಸನ್ನಿವೇಶದಲ್ಲಿ, ತನ್ನ ಸರಕುಗಳನ್ನು ಜಾಗತಿಕ ಮಾರುಕಟ್ಟೆಯಲ್ಲಿ ಪೈಪೋಟಿಯ ಮೇಲೆ ಮಾರುವ ಸಲುವಾಗಿ, ಪ್ರತಿಯೊಂದು ದೇಶವೂ ತನ್ನ ಕರೆನ್ಸಿಯ ಮೌಲ್ಯವನ್ನು ಕಡಿಮೆಮಾಡಿಕೊಳ್ಳುತ್ತದೆ. ಬೇರೆ ದೇಶಗಳನ್ನು ತುಳಿದು ತಮ್ಮ ದೇಶದಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಿಕೊಳ್ಳುವ ಈ ಕ್ರಮವನ್ನು 'ನನ್ನ-ನೆರೆಯವನು-ಹಾಳಾಗಲಿ' ನೀತಿ ಎಂದು ಕರೆಯುತ್ತಾರೆ. ಇಂತಹ ಪೈಪೋಟಿಯಲ್ಲಿ ತೊಡಗಿದ ಪ್ರತಿಯೊಂದು ದೇಶವೂ ಕೊನೆಗೆ ಕೈ ಸುಟ್ಟುಕೊಳ್ಳುತ್ತದೆ. ಆದ್ದರಿಂದ, ಎಲ್ಲ ದೇಶಗಳೂ ಒಮ್ಮತದಿಂದ ಈ ನೀತಿಯನ್ನು ತಿರಸ್ಕರಿಸಬೇಕು. ಆದರೆ, ಎಲ್ಲ ದೇಶಗಳೂ ಇದೇ ಪೈಪೋಟಿಯಲ್ಲಿ ತೊಡಗಿರುವಾಗ, ನಾನು ಇಂತಹ ನೀತಿ ಅನುಸರಿಸುವುದಿಲ್ಲ ಎಂದು ಕೇವಲ ಒಂದು ದೇಶ ಘೋಷಿಸಿದರೆ, ಅದಕ್ಕೆ ಏನಾದರೂ ಅರ್ಥವಿದೆಯೇ? ಅದರ ಅರ್ಥ ನಿರುದ್ಯೋಗವನ್ನು ಆಮದು ಮಾಡಿಕೊಳ್ಳುವುದು ಎಂದಾಗುತ್ತದೆ. ಬೇರೆ ದೇಶಗಳ ಕರೆನ್ಸಿಗಳು ಡಾಲರ್ ಎದುರು ಅಪಮೌಲ್ಯಕ್ಕೆ ಒಳಗಾಗಿರುವಾಗ ನಮ್ಮ ರೂಪಾಯಿ ದೃಢವಾಗಿ ನಿಂತಿದೆ ಎಂದು ಆರ್ಥಿಕ ಸಮೀಕ್ಷೆಯಲ್ಲಿ ಹೆಮ್ಮೆಯಿಂದ ಹೇಳಿಕೊಂಡಿರುವ ಮಾತಿನ ಇಂಗಿತವೂ ನಿರುದ್ಯೋಗ ಆಮದಾದರೆ ತಪ್ಪೇನಿದೆ ಎನ್ನುವಂತಿದೆ. ರೂಪಾಯಿ ಮೌಲ್ಯ ಹೆಚ್ಚಿನ ಏರಿಳಿತಕ್ಕೆ ಒಳಗಾಗದಂತೆ ಒದೆ(ತಡೆ) ಕೊಟ್ಟು ನಿಲ್ಲಿಸಿರುವ ಷೇರು ಮಾರುಕಟ್ಟೆಗೆ ಹರಿಯುತ್ತಿರುವ ವಿದೇಶಿ ಹಣ, ನಿರುದ್ಯೋಗ ಆಮದುಮಾಡಿಕೊಳ್ಳುವ ಹಾದಿಯನ್ನು ತೆರೆಯಬಲ್ಲದು.

('ಪೀಪಲ್ಸ್ ಡೆಮಾಕ್ರಸಿ'ಪತ್ರಿಕೆಯಲ್ಲಿ ಪ್ರಕಟವಾದ ಪ್ರೊ. ಪ್ರಭಾತ್ ಪಟ್ನಾಯಕ್ ಅವರ ಲೇಖನದ ಭಾವಾನುವಾದ)

ಟಿಎಂಸಿ ಎಂದರೆ ಭ್ರಷ್ಟಾಚಾರ-ಹಗರಣಗಳ ಮತ್ತೊಂದು ಹೆಸರು



ಟಿಎಂಸಿ ಎಂದರೆ ಭ್ರಷ್ಟಾಚಾರ-ಹಗರಣಗಳ ಮತ್ತೊಂದು ಹೆಸರು. ಪಶ್ಚಿಮ ಬಂಗಾಳದ ವಿಧಾನ ಸಭಾ ಚುನಾವಣೆಗಳಲ್ಲಿ ಹಣದ ಹುಚ್ಚು ಹೊಳೆಯ ಹರಿದಾಟ- ಅಕ್ರಮಗಳನ್ನು ತಡೆಯಲು ಅಗತ್ಯವಾದಲ್ಲಿ ರಾಷ್ಟ್ರಪತಿ ಆಡಳಿತವನ್ನು ತನ್ನಿ-ಎಂದು ವಿರೋ ಧ ಪಕ್ಷದ ಮುಖಂಡರಾದ, ಸಿಪಿಐ(ಎಂ) ಪಶ್ಚಿಮ ಬಂಗಾಳ ಕಾರ್ಯದರ್ಶಿಗಳೂ ಆದ ಡಾ. ಸೂರ್ಯಕಾಂತ ಮಿಶ್ರ ಆಗ್ರಹಿಸಿದ್ದಾರೆ. ಸದ್ಯಕ್ಕೆ ಎಡರಂಗದಿಂದ ರಾಜ್ಯವ್ಯಾಪಿಯಾಗಿ ಇತ್ತೀಚಿನ 'ನಾರದಾ ನ್ಯೂಸ್.ಕಾಂ' ಬಯಲು ಮಾಡಿದ ಲಂಚ ಪ್ರಕರಣದ ವಿರುದ್ಧ ಚಳುವಳಿ ನಡೆದಿದೆ. ರಾಜ್ಯದಲ್ಲಿ ಟಿಎಂಸಿ ಮುಖಂಡರ ಖಜಾನೆ ತುಂಬಿಸಲು ಸಾರ್ವಜನಿಕ ಹಣದ ಲೂಟಿ ಯಾವುದೇ ಎಗ್ಗಿಲ್ಲದಂತೆ ನಡೆದಿದೆ. ಹಗರಣಗಳ ಸರಣಿಯೇ ಬಯಲಿಗೆ ಬಂದಿದೆ.

ತೃಣಮೂಲದ ಒಬ್ಬ ಸಂಸದ ಮತ್ತು ಒಬ್ಬ ಮಾಜಿ ಸಚಿವರು ಶಾರದಾ ಚಿಟ್‌ಫಂಡ್ ಹಗರಣದಲ್ಲಿ ಜೈಲುಕಂಬಿ ಎಣಿಸುತ್ತಿದ್ದಾರೆ. ಇದು ಮಾತ್ರವಲ್ಲ ರಾಜ್ಯದಲ್ಲಿ ಒಂದು ಸಾವಿರ ಸಣ್ಣ ಮತ್ತು ಮಧ್ಯಮ 'ಚಿಟ್ ಫಂಡ್ ಸಂಸ್ಥೆಗಳು' ಸಾರ್ವಜನಿಕರಿಗೆ ದ್ರೋಹ ಬಗೆದು ಮೋಸ ಮಾಡಿವೆ. ಈ ಸಾವಿರ ಪ್ರಕರಣದಲ್ಲಿ ಬಹುತೇಕವುಗಳಲ್ಲಿ ಟಿಎಂಸಿ ಮುಖಂಡರು ಸಿಲುಕಿದ್ದಾರೆ.


2015 ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪರೀಕ್ಷೆಯಲ್ಲಿ ಪಶ್ಚಿಮ ಬಂಗಾಳ ಹಿಂದೆಂದೂ ಕಾಣದ ಹಗರಣ ನಡೆದಿದೆ.

ಈ ನೇಮಕಾತಿ ಸಂಬಂಧದ ಟಿಇಟಿ ಪರೀಕ್ಷೆಯನ್ನು ಜನ 'ತೃಣಮೂಲ ಅರ್ಹತಾ ಪರೀಕ್ಷೆ' ಅಂತ ವ್ಯಂಗ್ಯ ಮಾಡುತ್ತಾರೆ. ತೃಣಮೂಲ ಕಾಂಗ್ರೆಸ್‌ನ ಸಂಸದರು, ಶಾಸಕರೂ ಜಿಲ್ಲಾಮುಖಂಡರ ಸಂಬಂಧಿಕರುಗಳಿಗೆ ಹುದ್ದೆಯನ್ನು ನೀಡಲಾಗಿದೆ. ಈ ಸಂಬಂಧದಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿದ್ದು ತೃಣಮೂಲ ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ ಎಂಬುದನ್ನು ಬಂಗಾಳಿ ಟಿವಿ ಚಾನೆಲ್ ಒಂದು 'ರಹಸ್ಯ ಕಾರ್ಯಾಚರಣೆ'ಯ ಮೂಲಕ ಬಯಲು ಮಾಡಿದೆ. ಮತ್ತು ಪರೀಕ್ಷೆಯಲ್ಲಿ ಅಕ್ರಮ ನಡೆಯಲು, ಕಾಪಿ ಮಾಡಲು ಅವಕಾಶ ನೀಡಿದ್ದರಿಂದಾಗಿ ಅನೇಕ ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ.

ರಾಜ್ಯದ ಉತ್ತರ ಭಾಗದಲ್ಲಿ 'ಸಿಲಿಗುರಿ-ಜಲಪೈಗುರಿ ಸ್ವಾಯತ್ತ ಅಭಿವೃದ್ಧಿ ಮಂಡಳಿ'(ಎಸ್‌ಜೆಡಿಎ)ಯಲ್ಲಿ 200 ಕೋಟಿ ರೂ.ಗಳ ದುರ್ಬಳಕೆ ನಡೆದಿದೆ. ಇದರಲ್ಲಿ ರಾಜ್ಯದ ಉತ್ತರ ಭಾಗದ ತೃಣಮೂಲ ಕಾಂಗ್ರೆಸ್‌ನ ಮುಖಂಡರು ಭಾಗಿಯಾಗಿದ್ದಾರೆ. ಕೋಲ್ಕತ್ತಾ ಮುನಿಸಿಪಲ್ ಕಾರ್ಪೋರೇಷನ್‌ನಲ್ಲಿ ವಿದ್ಯುತ್ ದೀಪಗಳ ಖರೀದಿಯಲ್ಲಿ 30 ಕೋಟಿ ರೂ.ಗಳ ಭ್ರಷ್ಟಾಚಾರ ನಡೆದಿದೆ.

ರಾಜ್ಯದ ಜನತೆ ಕಳೆದ 5 ವರ್ಷಗಳ ತೃಣಮೂಲ ಆಡಳಿತವನ್ನು ಹಿಂದಿನ ಎಡರಂಗದ ಅವಧಿಯ ಹಗರಣಗಳ ಕಳಂಕವಿಲ್ಲದ ಆಡಳಿತದೊಂದಿಗೆ ಹೋಲಿಸಿ ನೋಡಿದರೆ ಎಡರಂಗವೇ ಅವರ ಮುಂದಿರುವ ಅತ್ಯುತ್ತಮ ಆಯ್ಕೆ ಎನ್ನುವ ಬಗೆಗೆ ಯಾವುದೇ ಅನುಮಾನವಿಲ್ಲ.

ವ್ಯಾಪಕ ಚುನಾವಣಾ ಅಕ್ರಮಗಳು, ಅಧಿಕಾರದ ದುರುಪಯೋಗ ನಡೆದ 2011ರ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಒಟ್ಟು 294 ಸ್ಥಾನ ಪೈಕಿ ಸಿಪಿಐ(ಎಂ)ನ 40 ಸ್ಥಾನಗಳು ಸೇರಿ ಎಡರಂಗವು 62 ಸ್ಥಾನಗಳನ್ನು ಪಡೆದಿತ್ತು. ■



ತಮಿಳುನಾಡು: ಪ್ರಬಲವಾದ ಮೂರನೇ ಪರ್ಯಾಯದ ಉದಯ



ಮೇ 16 ರಂದು ಚುನಾವಣೆ ನಡೆಯಲಿರುವ ತಮಿಳುನಾಡಿನ ರಾಜಕೀಯದಲ್ಲಿ ಬಹಳ ಮಹತ್ವದ ಬೆಳವಣಿಗೆಗಳು ಜರುಗಿವೆ. ಸಿಪಿಐ, ಸಿಪಿಐ(ಎಂ), ವೈಕೋ ನೇತೃತ್ವದ ಎಂಡಿಎಂಕೆ ಮತ್ತು ವಿಸಿಕೆ ಪಕ್ಷಗಳು ಸೇರಿ

'ಜನತಾ ಕಲ್ಯಾಣ ರಂಗ' (ಪೀಪಲ್ಸ್ ವೆಲ್‌ಫೇರ್ ಫ್ರಂಟ್-ಪಿಡಬ್ಲ್ಯೂಎಫ್) ಎಂಬ ಮೈತ್ರಿಕೂಟವನ್ನು ರಚಿಸಿಕೊಂಡಿವೆ. ಈ ಪಕ್ಷಗಳು ಜನರ ಬದುಕಿನ ಪ್ರಶ್ನೆಗಳ ಆಧಾರದಲ್ಲಿ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ'ವನ್ನು ರೂಪಿಸಿಕೊಂಡು ಈಗಾಗಲೇ ನಾಲ್ಕು ಸುತ್ತಿನ ಪ್ರಚಾರಾಂದೋಲನ ವನ್ನು ನಡೆಸಿವೆ.

ಆರಂಭದಲ್ಲಿ 'ಜನತಾ ಕಲ್ಯಾಣ ರಂಗ'ದ ಅಂಗಪಕ್ಷಗಳು ನಡೆಸುತ್ತಿರುವ ಪ್ರಚಾರಾಂದೋಲನಕ್ಕೆ ಸೂಕ್ತವಾದ ಪ್ರಚಾರ ನೀಡದೇ ನಿರ್ಲಕ್ಷ್ಯ ವಹಿಸಿದ್ದ ಮಾಧ್ಯಮಗಳು ರಂಗದ ಕರೆಗೆ ಬಂದು ಸೇರುವ ಬೃಹತ್ ಜನಸಮುದಾಯವನ್ನು, ರಂಗಕ್ಕೆ ಜನರಿಂದ ದೊರೆಯುತ್ತಿರುವ ಸ್ಪಂದನೆಯನ್ನು ನೋಡಿ ಆನಂತರ ಪ್ರಚಾರ ನೀಡುವುದು ಅನಿವಾರ್ಯ ಎಂಬಂತಾಗಿದೆ. ರಾಜ್ಯದ ಮಹಾನಗರ, ದೊಡ್ಡಗಳು ನಗರಗಳು ಸೇರಿದಂತೆ ರಾಜ್ಯದ 22 ಜಿಲ್ಲೆಗಳಲ್ಲಿ ಈಗಾಗಲೇ ಪ್ರಚಾರಾಂದೋಲನ ನಡೆದಿದೆ.

ಮತ್ತೊಂದು ಮಹತ್ವದ ಬೆಳವಣಿಗೆ

ಮಾರ್ಚ್ 23, 2016 ರಂದು ಮತ್ತೊಂದು ಮಹತ್ವದ ಬೆಳವಣಿಗೆ ನಡೆದಿದೆ. ವಿಜಯಕಾಂತ್ ನೇತೃತ್ವದ 'ದೇಸೀಯ ಮುರುಪೊಕು ದ್ರಾವಿಡ ಕಳಗಂ'-(ಡಿಎಂಡಿಕೆ) 'ಜನತಾ ಕಲ್ಯಾಣ ರಂಗ'ಗಳ ನಡುವೆ ಸ್ಥಾನ ಹೊಂದಾಣಿಕೆ ಒಪ್ಪಂದಕ್ಕೆ ಸಹಿ ಬಿದ್ದಿದೆ.

ಆಳುವ ಎಐಎಡಿಎಂಕೆಯು ಕಿತ್ತಾಟಗಳಲ್ಲಿ ಮುಳುಗಿದೆ. ರಾಜಕೀಯ ವಿಶ್ಲೇಷಕರ ಅಭಿಪ್ರಾಯದಂತೆ ಈ ಚುನಾವಣೆಯಲ್ಲಿ ಎಐಎಡಿ-ಎಂಕೆಯ ಜನಬೆಂಬಲವು ಸಾಕಷ್ಟು ಕುಸಿಯಲಿದೆ.

ಈ ಹಿನ್ನೆಲೆಯಲ್ಲಿ ಪಕ್ಷದ ವರಿಷ್ಠ ನಾಯಕಿ ಜಯಲಲಿತ ಸಣ್ಣಪುಟ್ಟ ಪಕ್ಷಗಳೊಂದಿಗೆ ಮಾತುಕತೆ ಮುಂದಾಗಿದ್ದರು. ಅದರಲ್ಲಿ ಕೆಲವು ಪಕ್ಷಗಳು ಕೇವಲ 'ಲೆಟರ್ ಹೆಡ್' ಪಕ್ಷಗಳು. ಅಂದ-ರೆ ಜನಬೆಂಬಲವಿಲ್ಲದ-ಹೆಸರಿಗೆ ಮಾತ್ರ ಇರುವ ಪಕ್ಷಗಳು.

ವಿಜಯ ಕಾಂತ್ ನೇತೃತ್ವದ ಡಿಎಂಡಿಕೆಯನ್ನು ತಮ್ಮ ಕೂಟಕ್ಕೆ ಸೆಳೆದುಕೊಳ್ಳಲು ಒಂದು ಕಡೆಯಿಂದ ಡಿಎಂಕೆ ಪಕ್ಷ, ಮತ್ತೊಂದು ಕಡೆಯಿಂದ ಬಿಜೆಪಿ ಸಾಕಷ್ಟು ಪ್ರಯತ್ನ ಮಾಡಿದ್ದರೂ ಕೊನೆಗೆ ಅವರು 'ಜನತಾ ಕಲ್ಯಾಣ ರಂಗ'ದೊಂದಿಗೆ ಸೀಟು ಹೊಂದಾಣಿಕೆಗೆ ಮುಂದಾಗಿದ್ದಾರೆ.

ಒಟ್ಟು 234 ಸ್ಥಾನಬಲದ ವಿಧಾನ ಸಭೆಯಲ್ಲಿ ಡಿಎಂಡಿಕೆಯು 124 ಸ್ಥಾನಗಳಲ್ಲಿ ಸ್ಪರ್ಧಿಸಲಿದೆ. ಉಳಿದ 110 ಸ್ಥಾನಗಳಲ್ಲಿ 'ಜನತಾ ಕಲ್ಯಾಣ ರಂಗ'ದ ಅಂಗಪಕ್ಷಗಳು ಸ್ಪರ್ಧಿಸಲಿವೆ ಎಂದು ವರದಿಯಾಗಿದೆ.

ನಾನಾ ಭ್ರಷ್ಟ ಹಗರಣಗಳಲ್ಲಿ ಸಿಲುಕಿಕೊಂಡು ನಲುಗಿರುವ ಡಿಎಂಕೆ ಪಕ್ಷವು ಕಾಂಗ್ರೆಸ್ ಪಕ್ಷದೊಂದಿಗೆ ಮೈತ್ರಿಮಾಡಿಕೊಂಡಿದೆ.

ಬಿಜೆಪಿ ಪಕ್ಷವು ವಿಜಯಕಾಂತ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸುವುದಾಗಿ ಹೇಳಿದಾಗಲೂ ವಿಜಯಕಾಂತ್ ಬಿಜೆಪಿಯೊಂದಿಗೆ ಹೋಗಲು ನಿರಾಕರಿಸಿದ್ದಾರೆ.

ಇನ್ನು ಜಾತಿ ಆಧಾರಿತ ರಾಜಕೀಯ ಮಾಡುತ್ತಿರುವ ಪಾಟ್ಟಾಳ್ ಮಕ್ಕಳ್ ಕಚ್ಚಿ(ಪಿಎಂಕೆ)ವು ತಾನು ಒಂಟಿಯಾಗಿ ಚುನಾವಣೆ ಎದುರಿಸುವುದಾಗಿ ಹೇಳಿದೆ. ರಾಮದಾಸ್ ತಮ್ಮ ಮಗ ಅನ್ಬುಮಣಿ ರಾಮದಾಸ್‌ರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿದ್ದು ಪಿಎಂಕೆ ಪಕ್ಷದ ಬಣ್ಣ ಬಯಲಾಗಿದೆ.■

ಝುರ್ನಾ ದಾಸ್ ಬೈದ್ಯ:

ತ್ರಿಪುರಾದಿಂದ ರಾಜ್ಯಸಭೆಗೆ ಮುನರಾಯ್ಕೆ ತ್ರಿಪುರಾದಿಂದ ರಾಜ್ಯಸಭೆಯ ಏಕೈಕ ಸ್ಥಾನಕ್ಕೆ ಸಿಪಿಐ(ಎಂ)ನ ಝುರ್ನಾ ದಾಸ್ ಬೈದ್ಯ ಅವರು ಪುನರಾಯ್ಕೆ ಗೊಂಡಿದ್ದಾರೆ. ಅವರು ಕಾಂಗ್ರೆಸಿನ ಅಭ್ಯರ್ಥಿ ಯನ್ನು 49-10 ಮತಗಳಿಂದ ಸೋಲಿಸಿದರು. ಸಿಪಿಐ(ಎಂ) ತ್ರಿಪುರಾ ರಾಜ್ಯಸಮಿತಿ ಸದಸ್ಯರೂ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿಗಳೂ ಆದ ಅವರು ಈಗ ಎರಡನೆ ಬಾರಿಗೆ ರಾಜ್ಯ ಸಭಾ ಸದಸ್ಯರಾಗಿದ್ದಾರೆ.





ಎ.ಕೆ.ಜಿ. ಸ್ಮಾರಕ ಗ್ರಂಥಾಲಯಕ್ಕೆ ಬೆಂಕಿ ಹಚ್ಚಿದ ಸಂಘಪರಿವಾರಿಗರು

ಅದು ತಲಕ್ಕಾಡ್ ಪ್ರದೇಶದ ತಲುಕ್ಕರ ಎಂಬ ಗ್ರಾಮ. ಅಲ್ಲಿ ಭಾರತದ ಅಪ್ರತಿಮ ಜನನಾಯಕ ಎ.ಕೆ. ಗೋಪಾಲನ್ ಸ್ಮಾರಕ ಗ್ರಂಥಾಲಯ ಮತ್ತು ಸಾಂಸ್ಕೃತಿಕ ಕೇಂದ್ರ ಒಂದು ಇತ್ತು. ಸಂಘ ಪರಿವಾರದ ಗೂಂಡಾಗಳು ಈ ಅಮೂಲ್ಯ ಮಸ್ತಕಗಳಿಂದ ಕೂಡಿದ ಗ್ರಂಥಾಲಯಕ್ಕೆ ಬೆಂಕಿ ಹಚ್ಚಿದ್ದಾರೆ. ಸುಮಾರು 6000 ಮಸ್ತಕಗಳು ಸುಟ್ಟು ಕರಕಲಾಗಿವೆ. ಅದಲ್ಲದೇ ಕೇಂದ್ರದಲ್ಲಿದ್ದ ಪೀಠೋಪಕರಣಗಳು ನಾಶವಾಗಿವೆ. ರಾಜಕೀಯ ಎದುರಾಳಿಗಳನ್ನು ರಾಜಕೀಯವಾಗಿ ಎದುರಿಸಲು ಸಾಧ್ಯವಿಲ್ಲದ ಹೇಡಿತನದ ಕೃತ್ಯವಿದು.

ಈ ದುಷ್ಕೃತ್ಯವನ್ನು ಖಂಡಿಸಿ ಊರಿನಲ್ಲಿ ಸ್ವ-ಯಂ ಪ್ರೇರಿತ ಹರತಾಳವನ್ನು ಆಚರಿಸುವ ಮೂಲಕ ಕೋಮುವಾದಿಗಳ ಕೃತ್ಯಕ್ಕೆ ಜನತೆ ಸೂಕ್ತ ಉತ್ತರವನ್ನೆ ಕೊಟ್ಟಿದ್ದಾರೆ. ■



ಹೈದ್ರಾಬಾದ್ ವಿ.ವಿಯಲ್ಲಿ ಅಘೋಷಿತ ತುರ್ತುಪರಿಸ್ಥಿತಿ ಖಂಡಿಸಿ ಪ್ರತಿಭಟನೆ.

ಮಾರ್ಚ್ 24ರಂದು ಟೌನ್ ಹಾಲ್ ಮುಂದೆ ಹೈದ್ರಾಬಾದ್ ವಿ.ವಿಯಲ್ಲಿ ಕೇಂದ್ರ ಸರಕಾರದ ಅಘೋಷಿತ ತುರ್ತು ಪರಿಸ್ಥಿತಿ ವಿರೋಧಿಸಿ, ಉಪ ಕುಲಪತಿ ಅಪ್ಪಾರಾವ್ ಸರ್ವಾಧಿಕಾರಿ ಧೋರಣೆ ಖಂಡಿಸಿ, ಸ್ಮೃತಿ ಇರಾನಿ, ಬಂಡಾರು ದತ್ತಾತ್ರಯ, ಅಪ್ಪಾರಾವ್ ಅವರ ಬಂಧನಕ್ಕೆ ಒತ್ತಾಯಿಸಿ, ಕ್ಯಾಂಪಸ್ ಡೆಮಾಕ್ರಸಿ ಉಳಿಸಲು ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು. ಹಿರಿಯ ಪತ್ರಕರ್ತೆ ಗೌರಿ ಲಂಕೇಶ್, ದಲಿತ ಮುಖಂಡರಾದ ಮಾವಳ್ಳಿ ಶಂಕರ್, ಭಾಸ್ಕರ ಪ್ರಸಾದ್ ವಿದ್ಯಾರ್ಥಿ ಮುಖಂಡರಾದ ವಿ.ಅಂಬರೀಷ್, ಗುರುರಾಜ್ ದೇಸಾಯಿ, ಬಸವರಾಜ ಪೂಜಾರ, ಹರಿರಾಮ್, ರಾಜಗೋಪಾಲ್ ಗಣೇಶ್, ಸೇರಿದಂತೆ ಹಲವರು ಭಾಗವಹಿಸಿದ್ದರು.

ರೋಹಿತ್ ವೇಮುಲ ಬಲಿ, ಜೆಎನ್‌ಯು ಮೇಲೆ ದಾಳಿ–ಏಕೆ?



ಈಗ ಪ್ರಜಾಪ್ರಭುತ್ವವಾದಿಗಳನ್ನು ಬಹುವಾಗಿ ಕಾಡುತ್ತಿರುವ ಈ ಪ್ರಶ್ನೆಯನ್ನೆತ್ತಿಕೊಂಡು ಮಾರ್ಚ್ 21 ರಂದು ಬೆಂಗಳೂರಿನಲ್ಲಿ ಒಂದು ಸಂವಾದ ಕಾರ್ಯಕ್ರಮ ನಡೆಯಿತು. ಎಸ್‌ಎಫ್‌ಐ, ಡಿವೈಎಫ್‌ಐ ಮತ್ತು ಪುಸ್ತಕಪ್ರೀತಿ ಜೊತೆಗೂಡಿ ಇದನ್ನು ಏರ್ಪಡಿಸಿದ್ದರು. ನಿವೃತ್ತ ಹೈಕೋರ್ಟ್ ನ್ಯಾಯಾಧೀಶ ನ್ಯಾಯಮೂರ್ತಿ ನಾಗಮೋಹನ ದಾಸ್ ಮತ್ತು ಕನ್ನಡ ಸಾಹಿತ್ಯ ಅಕಾಡೆಮಿ ಸದಸ್ಯೆ ನೀಲಾ ಕೆ ಈ ಸಂವಾದಕ್ಕೆ ಪೀಠಿಕೆ ಹಾಕಿದರು.

ಈ ಎರಡು ಘಟನೆಗಳು ನಡೆಯುತ್ತಿರುವ ಸದ್ಯದ ರಾಜಕೀಯ ,ಸಾಮಾಜಿಕ ಪರಿಸ್ಥಿತಿಯನ್ನು ವಿಮರ್ಶಿಸುತ್ತ ನ್ಯಾ.ನಾಗಮೋಹನ ದಾಸ್ ಅವರು ಆಳುವವರು ಪ್ರತಿಬಾರಿ ಏನೋ ವಿವಾದ ಸೃಷ್ಟಿಸಿ ಜನಗಳ ಗಮನ ಬೇರೆಡೆಗೆ ತಿರುಗಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ ಎಂದರು. ಇದ–ಕ್ಕೆ ಉದಾಹರಣೆಯಾಗಿ ಬಜೆಟಿನಲ್ಲಿ ಪಿ.ಎಫ್. ನ ಮೇಲೆ ತೆರಿಗೆ ಹಾಕಿದ ಮತ್ತು ತೆಗೆದ ಪ್ರಸಂಗವನ್ನು ನೆನಪಿಸಿದರು.

ಸ್ವತಂತ್ರ ರಾಷ್ಟ್ರಗಳೆಲ್ಲ ಪ್ರಜಾಪ್ರಭುತ್ವಗಳಲ್ಲ, ಆದರೆ ಪ್ರಜಾಪ್ರಭುತ್ವಗಳೆಲ್ಲ ಸ್ವತಂತ್ರ ರಾಷ್ಟ್ರಗಳು. ಒಂದು ಪ್ರಜಾಪ್ರಭುತ್ವವಾಗಿ ನಾವು ಕಳೆದ ಆರೂವರೆ ದಶಕಗಳಲ್ಲಿ ಏನೂ ಸಾಧಿಸಿಯೇ ಇಲ್ಲವೆಂದೇನಲ್ಲ. ಸಾಕಷ್ಟು ಸಾಧಿಸಿದ್ದೇವೆ. ಸಾಧಿಸಬೇಕಾದಷ್ಟು ಸಾಧಿಸಿಲ್ಲ ಎಂಬುದು ಬೇರೆ ಮಾತು. ಆದರೆ ಸಾಧಿಸಿದ್ದನ್ನು ಕಳೆದುಕೊಳ್ಳುವ ಅಪಾಯದಲ್ಲಿ ಇದ್ದೇವೆ. ಜಗತ್ತಿನಲ್ಲೇ ಅತಿ ದೊಡ್ಡದೆನಿಸಿರುವ, ಎರಡೂವರೆ ವರ್ಷಗಳ ಆಮೂಲಾಗ್ರ ಚರ್ಚೆಯ ಮೂಲಕ ಅಂಗೀಕರಿಸಿದ ನಮ್ಮ ಸಂವಿಧಾನ ಪ್ರಜಾತಂತ್ರದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೊಟ್ಟಿದೆ. ಭಿನ್ನಮತವನ್ನು ವ್ಯಕ್ತಪಡಿಸುವಂತಹ ಹಕ್ಕು ಈ ಸಂವಿಧಾನದ ಅಡಿಯಲ್ಲಿ ಇದೆ. ಮೌನವಾಗಿರುವ ಹಕ್ಕು ಕೂಡ ಇದರ ಭಾಗವೇ ಆಗಿದೆ ಎಂದು ಶಾಲೆಯಲ್ಲಿ ರಾಷ್ಟ್ರಗೀತೆ ಹಾಡುವ ಬಗ್ಗೆ ಪ್ರಕರಣದಲಲಿ ನ್ಯಾ. ಒನ್ನಪ್ಪಪ ರೆಡ್ಡಿ ಅವರ ಚಾರಿತ್ರಿಕ ತೀರ್ಪನ್ನು ನೆನಪಿಸುತ್ತ ಹೇಳಿದರು.

ರೋಹಿತ್ ವೆಮುಲರದ್ದು ಆತ್ಮಹತ್ಯೆಯಲ್ಲ, ವ್ಯವಸ್ಥಿತ ಕೊಲೆ, ಇದಕ್ಕೆ ಹಲವು ಆಯಾಮಗಳಿವೆ ಎಂದ ನೀಲಾ ಅವರು ಜಾಮೀನಿನಲ್ಲಿ ಬಿಡುಗಡೆ ಹೊಂದಿ ಹೊರಬಂದಾಗ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹೈಯ ಕುಮಾರ್ ಮಾತಾಡುತ್ತ ಜೈಲಿನಲ್ಲಿ ಕೊಟ್ಟ ಒಂದು ಬಟ್ಟಲು ಮತ್ತು ಎರಡು ನೀಲಿ ಮತ್ತು ಕೆಂಪು ಲೋಟಾಗಳ ಪ್ರತೀಕಗಳನ್ನು ನೆನಪಿಸಿದರು. ಬಟ್ಟಲು ಆತನಿಗೆ ಭಾರತವಾಗಿ ಕಂಡರೆ ನೀಲಿ ಲೋಟ ಅಂಬೇಡ್ಕರ್ ಚಿಂತನೆಗಳು ಮತ್ತು ಕೆಂಪು ಲೋಟ ಸಮಾಜವಾದದ ಚಿಂತನೆಗಳ ಪ್ರತೀಕಗಳಾಗಿ ಕಂಡವು. ಈ ನೀಲಿ ಮತ್ತು ಕೆಂಪು ಜತೆಗೂಡುತ್ತಿವೆಯೆಂಬುದೇ ರೋಹಿತ್ ಬಲಿ, ಜೆಎನ್‌ಯು ಮೇಲೆ ದಾಳಿಯ ಮೂಲದಲ್ಲಿದೆ.

ಬಹುಸಂಸ್ಕೃತಿಯ ಮೇಲೆ ದಾಳಿ ನಡೆಯುತ್ತಿದೆ, ಈ ಎರಡೂ ಧಾರೆಗಳು ಒಟ್ಟಾಗಿ ಇದರ ವಿರುದ್ಧ ಬೀದಿಗಿಳಿಯಬೇಕು ಎಂದು ನೀಲಾ ಹೇಳಿದರು.

ಇದು ಕೇವಲ ಧಾಳಿಯಲ್ಲಿ, ಇದಕ್ಕೆ ಪ್ರತಿ–ರೋಧದ ಅಲೆಗಳೂ ಎದ್ದು ಬರುತ್ತಿವೆ ಎಂದು ಸಂವಾದದಲ್ಲಿ ಭಾಗವಹಿಸುತ್ತ 'ಪುಸ್ತಕ ಪ್ರೀತಿ'ಯ ವಸಂತರಾಜ್ ಹೇಳಿದರು. ಇತಿಹಾಸದಲ್ಲಿ ಹಲವು ಬಾರಿ ಕಂಡಂತೆ, ಈ ಬಾರಿಯೂ ವಿದ್ಯಾರ್ಥಿಗಳಿಂದ ಈ ಪ್ರತಿರೋ ಧಧ ಅಲೆ ಆರಂಭವಾಗಿದೆ. ಇದನ್ನು ಬಲಪಡಿಸಿ ಮುಂದೊಯ್ಯುವುದರಲ್ಲಿ ಎಲ್ಲ ಪ್ರಜಾಪ್ರಭುತ್ವವಾದಿಗಳು ತಂತಮ್ಮ ಪಾತ್ರ ವಹಿಸಬೇಕು ಎಂದರು.

ನಂತರ ನಡೆದ ಸಂವಾದದದಲ್ಲಿ ಹೋರಾಟದ ಬಗೆಗಳು ಮತ್ತು ಈಗ ಕೇಸರೀ ಪಡೆಗಳು ಹರಿಯ ಬಿಟ್ಟಿರುವ 'ಭಾರತ್ ಮಾತಕೀ ಜೈ' ವಿವಾದದ ಬಗ್ಗೆ ಮಾತಾಡಿದರು.

ಪುಸ್ತಕಗಳ ಬಿಡುಗಡೆ

ಆರಂಭದಲ್ಲಿ ನ್ಯಾ. ನಾಗಮೋಹನ ದಾಸ್ ಕ್ರಿಯಾಪುಸ್ತಕ ಪ್ರಕಟಿಸಿರುವ 'ಜೆಎನ್‌ಯು ದಾಳಿ, ಭಾರತದ ಮೇಲೆ ದಾಳಿ' ಎಂಬ ಲೇಖನಗಳ ಸಂಗ್ರಹವನ್ನು ಮತ್ತು ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಪ್ರಕಡಿಸಿದ 'ಭಗತ್ ಸಿಂಗ್ ಹಾದಿಯಲ್ಲಿ' ಕಿರುಪುಸ್ತಕವನ್ನು ಬಿಡುಗಡೆ ಮಾಡಿದರು.

ನೀಲಾ ಅವರು ಸಂಪಾದಿಸಿರುವ ಜೆಎನ್‌ಯು ಮೇಲಿನ ದಾಳಿ ಕುರಿತಾದ ಪುಸ್ತಕ ಹಲವು ಕರ್ನಾಟಕದ ಮತ್ತು ರಾಷ್ಟ್ರದ ಪ್ರತಿಷ್ಠಿತರ ಲೇಖನಗಳು, ಅಭಿಪ್ರಾಯಗಳನ್ನು, ವಿಶ್ಲೇಷಣೆಗಳನ್ನು ಒಳಗೊಂಡಿದೆ. ವಾಸ್ತವವಾಗಿ ಇದೀಗ ಭಾರತದ ಮೇಲೆ, ಅದು ಅಂಗೀಕರಿಸಿರುವ ಸಂವಿಧಾನದ ಮೇಲಿನ ದಾಳಿ ಎಂಬ ತೀರ್ಮಾನಕ್ಕೆ ಈ ಲೇಖನಗಳು ಬರುತ್ತಿವೆ.

ಎರಡನೇ ಪುಸ್ತಕವನ್ನು ಡಿವೈಎಫ್‌ಐ ಮುಖಂಡರಾದ ರಾಜಶೇಖರ ಮೂರ್ತಿ ಮತ್ತು ಎಸ್‌ಎಫ್‌ಐ ಮುಖಂಡರಾದ ಗುರುರಾಜ ದೇಸಾಯಿ ಸಂಪಾದಿಸಿದ್ದು, ಇದು ಈಗ ಎದ್ದಿರುವ ವಿದ್ಯಾರ್ಥಿಗಳ ಪ್ರತಿರೋಧದ ಅಲೆ ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳು ತೋರಿದ ಹಾದಿಯಲ್ಲಿದೆ ಎಂದು ವಿಶ್ಲೇಷಿಸುತ್ತದೆ. ಇದರಲ್ಲಿ ಈಗ ಚಾರಿತ್ರಿಕ ದಾಖಲೆಯಾಗಿ ಬಿಟ್ಟಿರುವ ರೋಹಿತ್ ಅವರ ಎರಡು ಪತ್ರಗಳು ಮತ್ತು ಕನ್ಹೈಯಾರವರ ಎರಡು ಭಾಷಣಗಳ ಪೂರ್ಣ ಪಠ್ಯಗಳಿವೆ.

ಪ್ರತಿಭೆಯ ಸಾವು: ಡಾಕ್ಯುಮೆಂಟರಿ ಪ್ರದರ್ಶನ

'ಡೆತ್ ಆಫ್ ಮೆರಿಟ್' ಅಥವ ಪ್ರತಿಭೆಯ ಸಾವು ಎಂಬ ಒಂದು ಚಿಕ್ಕ ಡಾಕ್ಯುಮೆಂಟರಿ ಚಿತ್ರವನ್ನೂ ಈ ಸಂದರ್ಭದಲ್ಲಿ ಪ್ರದರ್ಶಿಸಲಾಯಿತು. ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು ಮತ್ತು ಇತರ ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳಿಂದ ನಮ್ಮ ಪ್ರಜಾಪ್ರಭುತ್ವ ತೆ–ರೆದು ಕೊಟ್ಟ ಅವಕಾಶಗಳಿಂದಾಗಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಎದುರಿಸಬೇಕಾಗಿರುವ ಸಮಸ್ಯೆಗಳ, ಸಂಕಟಗಳ ಒಂದು ಕಿರುನೋಟವನ್ನು ಈ ಡಾಕ್ಯುಮೆಂಟರಿ ಕೊಡುತ್ತದೆ. ಮೀಸಲಾತಿ ಮತ್ತು ಪ್ರತಿಭೆ ತದ್ವಿರುದ್ಧ ಸಂಗತಿಗಳು ಎಂಬ ಅಪಪ್ರಚಾರಕ್ಕೆ ನಮ್ಮಲ್ಲಿ ಬಹಳ ಜನ ಬಲಿಯಾಗಿದ್ದಾರೆ. ಆದರೆ ವಾಸ್ತವವಾಗಿ ಪ್ರತಿಭೆಯನ್ನು ಸಾಯಿಸುವುದು ಮೀಸಲಾತಿಯಲ್ಲ, ನಮ್ಮಲ್ಲಿ ಇನ್ನೂ ಬೇರು ಬಿಟ್ಟಿರುವ ಜಾತಿ ಪದ್ಧತಿಯೇ. ರೋಹಿತ್ ಇದಕ್ಕೆ ಇತ್ತೀಚಿನ ಉದಾಹರಣೆಯಷ್ಟೇ.

ಬಾಲಮುಕುಂದ ಭಾರತಿ ನವದೆಹಲಿಯ ಪ್ರತಿಷ್ಠಿತ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ(ಏಮ್ಸ್)ನಲ್ಲಿ ಅಂತಿಮ ಎಂಬಿಬಿಎಸ್ ವಿದ್ಯಾರ್ಥಿಯಾಗಿದ್ದಾತ. ಮಾರ್ಚ್ 2010ರಲ್ಲಿ ಆತ್ಮಹತ್ಯೆ ಮಾಡಿಕೊಂಡ. ಕಾರಣ ಆತನ ಪ್ರೊಫೆಸರುಗಳ ಸತತ ಕಿರುಕುಳ. ಆತ ಕಾಲೇಜು ಸೇರಿದ ದಿನದಿಂದಲೇ ಪ್ರೊಫೆಸರುಗಳು ಕೇವಲ ಮೀಸಲಾತಿಯಿಂದ ನೀನು ಇಲ್ಲಿಗೆ ಬಂದಿದ್ದೀಯಾ, ನೀನು ಖಂಡಿತ ಡಾಕ್ಟರಾಗುವುದಿಲ್ಲ ಎಂದು ಹೇಳಲಾರಂಬಿಸಿದ್ದರಂತೆ. ವಾಸ್ತವವಾಗಿ ಆತ ಪ್ರಾಥಮಿಕ ತರಗತಿಯಿಂದಲೇ ಬಹಳ ಪ್ರತಿಭಾಶಾಲಿ ಹುಡುಗ. ಏಮ್ಸ್ ಸೇರಿದಂತೆ ಇನ್ನೂ ಹಲವು ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳ ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ರ್‍ಯಾಂಕ್ ಪಡೆದಾತ. ಎಐಐಎಂಎಸ್‌ನಲ್ಲಿ ಅಖಿಲ ಭಾರತ ಮಟ್ಟದಲ್ಲಿ ಎಂಟನೇ ಸ್ಥಾನ ಪಡೆದಿದ್ದಾತ. ಆತನ ಪ್ರತಿಭೆಯ ಆದಾರದಲ್ಲೇ ಆತನ ಬಡಕುಟುಂಬದವರು ತಮ್ಮ ಸರ್ವಸ್ವವನ್ನೂ ಆತನ ಶಿಕ್ಷಣಕ್ಕೆ ಧಾರೆಯೆರೆದಿದ್ದರು. ಆತನ ಆತ್ಮಹತ್ಯೆ ಅವರ ಕನಸುಗಳನ್ನೆಲ್ಲ ನುಚ್ಚು ನೂರು ಮಾಡಿದವು.

ಈ ದಾರಣ ಆತ್ಮಹತ್ಯೆಯ ಸುತ್ತಲಿನ ಸಂಗತಿಗಳನ್ನು ಕಲೆ ಹಾಕಿ ಇನ್‌ಸೈಟ್ ಫೌಂಡೇಶನ್ ಈ ಡಾಕ್ಯುಮೆಂಟರಿಯನ್ನು ರಚಿಸಿದೆ. ಈ ಫೌಂಡೇಶನ್ ಇಂತಹ 18 ಆತ್ಮಹತ್ಯೆಯ ಪ್ರಕರಣಗಳ ದಾಖಲೆಗಳನ್ನು ಸಂಗ್ರಹಿಸಿದೆ. ಮೂರು ಪ್ರಕರಣಗಳ ಮೇಲೆ ಕಿರುಚಿತ್ರ ತಯಾರಿಸಿದೆ. ಅವು ಯೂ ಟ್ಯೂಬಿನಲ್ಲಿ ದೊರಕುತ್ತವೆ.

ಈ ಏಮ್ಸ್‌ನಲ್ಲಿ ದಲಿತ ವಿದ್ಯಾರ್ಥಿಗಳಿಗೆ ಕಿರುಕುಳದ ಘಟನೆ ಇದೇ ಮೊದಲಿನದಲ್ಲ. ಇಂತಹ ಹಲವು ದೂರುಗಳ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಸಪ್ಟಂಬರ್ 2006ರಲ್ಲಿ ಆಗ ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ)ದ ಅಧ್ಯಕ್ಷರಾಗಿದ್ದ ಪ್ರೊಫೆಸರ್ ಸುಖದೇವ್ ಥೋರಟ್ ಅವರ ಅಧ್ಯಕ್ಷತೆಯಲ್ಲಿ ಒಂದು ತನಿಖಾ ಸಮಿತಿಯನ್ನು ನೇಮಿಸಿತ್ತು.

ಮೇ 2007ರಲ್ಲಿ ಸಮಿತಿ ತನ್ನ ವರದಿ ಸಲ್ಲಿಸಿತು. ದಲಿತ ವಿದ್ಯಾರ್ಥಿಗಳಿಗೆ ಕಿರುಕುಳದ ದೂರುಗಳು ನಿಜ ಎಂಬುದನ್ನು ಕಂಡುಕೊಂಡ ಈ ಸಮಿತಿ ಇದು ಮರುಕಳಿಸದಂತೆ ಮಾಡಲು ಹಲವು ಶಿಫಾರಸುಗಳನ್ನು ಸಲ್ಲಿಸಿತು. ಒಬಿಸಿ ಮೀಸಲಾತಿ –ವಿರೋಧಿ ಚಳುವಳಿಯ ಕೇಂದ್ರವಾಗಿ ಬಿಟ್ಟ ಏಮ್ಸ್ ಈ ವರದಿಯನ್ನು ತಿರಸ್ಕರಿಸಿತು.

2011 ರಲ್ಲಷ್ಟೇ ಇದನ್ನು ಸಂಸತ್ತಿನಲ್ಲಿ ಮಂಡಿಸಲಾಯಿತು. ಅದಾಗಿಯೂ ಐದು ವರ್ಷಗಳಾಗಿವೆ. ಮುಂದೇನೂ ಆಗಿಲ್ಲ. ಹೈದರಾಬಾದಿನ ಎಂಪಿ/ಕೇಂದ್ರ ಮಂತ್ರಿಯ ಪತ್ರದ ಮೇಲೆ ಕ್ರಮ ಕೈಗೊಳ್ಳಲು ಮೂರು ತಿಂಗಳಲ್ಲೇ ಐದು ಬಾರಿ ನೆನಪಿಸಿದ್ದು ಇದೇ ಮಂತ್ರಾಲಯ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಡಿಸೆಂಬರ್ 18ರಂದು ತನ್ನನ್ನು ಮತ್ತು ಇತರ ನಾಲ್ಕು ಸಂಶೋಧನಾ ವಿದ್ಯಾರ್ಥಿಗಳನ್ನು ಹಾಸ್ಟೆಲುಗಳಿಂದ ಹೊರಗೆ ಹಾಕಿದಾಗ ರೋಹಿತ್ ಪ್ರೊ. ಥೋರಟ್ ಅವರನ್ನು ಸಂಪರ್ಕಿಸಿದ್ದ ಎಂದು ತಿಳಿದು ಬಂದಿದೆ. ■

'ವೆಂಕಟಪ್ಪ ಗ್ಯಾಲರಿ ನಮ್ಮದು' ಚಳುವಳಿ

ವೆಂಕಟಪ್ಪ ಗ್ಯಾಲರಿಯನ್ನು 'ತಸ್ವೀರ್ ಫೌಂಡೇಶನ್' ಎಂಬ ಕಾರ್ಪೊರೆಟ್ ಸಂಸ್ಥೆಗೆ ಪರಭಾರೆ ಮಾಡಲು ರಾಜ್ಯ ಸರಕಾರದ ಪ್ರವಾಸೋದ್ಯಮ ಇಲಾಖೆ ಒಪ್ಪಂದಕ್ಕೆ ಸಹಿ ಹಾಕಿದೆ. ವೆಂಕಟಪ್ಪ ಚಿತ್ರಶಾಲೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬದಲು ಪ್ರವಾಸೋದ್ಯಮ ಇಲಾಖೆ ಮೇಲುಸ್ತುವಾರಿಯಲ್ಲಿ ಇರುವುದೇ ಒಂದು ದೊಡ್ಡ ಜೋಕ್! ಒಪ್ಪಂದದ ಪ್ರಕಾರ ಯಾರ ಪ್ರದರ್ಶನ ನಡೆಸಬೇಕು, ಕಲಾವಿದರಿಗೆ ಸಾರ್ವಜನಿಕರಿಗೆ ಎಷ್ಟು ಶುಲ್ಕ ವಿಧಿಸಬೇಕು, ಗ್ಯಾಲರಿಯನ್ನು ಹೇಗೆ ಬಳಸಬೇಕು ಎಂಬ ನಿರ್ಣಯವನ್ನು ಪೂರ್ಣವಾಗಿ ತಸ್ವೀರ್ ಗೆ ಬಿಡಲಾಗಿದೆ. ಕಲಾವಿದರಿಗಾಗಲಿ, ಕಲಾಸಕ್ತರಿಗಾಗಲಿ, ಸರಕಾರಕ್ಕಾಗಲಿ ಯಾವುದೇ ಈ ಬಗ್ಗೆ ಚರ್ಚಿಸಲು ನಿರ್ಣಯಿಸಲು ಅವಕಾಶ ಇರುವುದಿಲ್ಲ ಎಂದು ಹೇಳಲಾಗಿದೆ.

ಬೆಂಗಳೂರಿನಲ್ಲಿ ಉದಯೋನ್ಮುಖ ಕಲಾವಿದರಿಗೆ ನಿಲುಕುವ ಗ್ಯಾಲರಿಗಳು ಇಲ್ಲ ಎಂದು 1970ರ ದಶಕದಲ್ಲಿ ಕಲಾವಿದ ಜಿ.ಎಸ್.ಶೆಣೈ ಎಂ.ಜಿ. ರಸ್ತೆಯಲ್ಲಿ ತಮ್ಮ ಚಿತ್ರ ಪ್ರದರ್ಶನ ನಡೆಸಿದ್ದರು. ಈ ಪ್ರತಿಭಟನೆ ಮತ್ತು ಕಲಾವಿದರ ಒತ್ತಡದ ಫಲವಾಗಿ ವೆಂಕಟಪ್ಪ ಗ್ಯಾಲರಿ ಆರಂಭವಾಗಿತ್ತು. ಕಲಾವಿದರ ತಾಣವಾಗಿತ್ತು. ಆದರೆ ಈಗ ಅದನ್ನು ಕಲಾವಿದರ ಕಲಾಸಕ್ತರ ಜತೆ ಯಾವುದೇ ಚರ್ಚೆಯಿಲ್ಲದೆ ಪರಭಾರೆ ಮಾಡುವುದನ್ನು ಕಲಾವಿದರು ತೀವ್ರವಾಗಿ ವಿರೋಧಿಸಿದ್ದಾರೆ.

ಪ್ರವಾಸೋದ್ಯಮ ಇಲಾಖೆ ಸಚಿವ ಆರ್.ವಿ.ದೇಶಪಾಂಡೆ, ಮುಖ್ಯಮಂತ್ರಿಗಳ ಜತೆ ಕಲಾವಿದರ ಭೇಟಿ ನಡೆದಿದ್ದರೂ, ಒಪ್ಪಂದ ಹಿಂತೆಗೆದುಕೊಳ್ಳುವುದನ್ನು ನಿರಾಕರಿಸಿ ಈ ಬಗ್ಗೆ ಸರಕಾರ ಹಟ ಸಾಧಿಸುತ್ತಿದೆ. ಕಲಾವಿದರು ವೆಂಕಟಪ್ಪ ಗ್ಯಾಲರಿಯ ಮುಂದೆ ಇಡೀ ದಿನ ಕಲಾ ರಚನೆ, ಮಾನವ ಸರಪಣಿ, 'ಕೊಡೆ ಚಳುವಳಿ' ಮುಂತಾದ ಹಲವಾರು ಪ್ರತಿಭಟನೆಗಳನ್ನು ನಡೆಸಿ ತಮ್ಮ ಹಕ್ಕೊತ್ತಾಯದ ಬಗ್ಗೆ ದೃಢ ಹೋರಾಟ ಮುಂದುವರೆಸಿದ್ದಾರೆ. ಈ ಕಲಾವಿದರಿಗೆ ಎಲ್ಲಾ ಪ್ರಜಾಸತ್ತಾತ್ಮಕ ಮನಸ್ಸುಗಳು ಸೌಹಾರ್ದ ಬೆಂಬಲ ನೀಡಬೇಕು. ಸಮುದಾಯ ಕಲಾವಿದರನ್ನು ಬೆಂಬಲಿಸಿ ಹೇಳಿಕೆ ನೀಡಿದೆ. ■



JANASHAKTHI KANNADA VARA PATRIKE APR 03, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಎಲ್ಲೆಡೆ ಮೊಳಗಿದ ಆಜಾದಿ ಘೋಷಣೆಗಳು

ಜೆ.ಎನ್.ಯು. ವಿದ್ಯಾರ್ಥಿ ನಾಯಕ ಕನ್ಹಯ್ಯ ಕುಮಾರ್ ಜೈಲಿಗೆ ಹೋಗುವ ಮೊದಲೂ ನಂತರವೂ ಮಾಡಿದ ಭಾಷಣಗಳು ಮತ್ತು ಆಜಾದಿ ಘೋಷಣೆಗಳೂ ವಿದ್ಯಾರ್ಥಿ–ಯುವಜನರನ್ನು ಮಾತ್ರವಲ್ಲ (ನಕಲಿ ದೇಶಭಕ್ತರನ್ನು ಬಿಟ್ಟು) ಎಲ್ಲರಲ್ಲೂ ವಿದ್ಯುತ್ ಸಂಚಾರ ಉಂಟು ಮಾಡಿದೆ. ಸ್ಫೂರ್ತಿ ತುಂಬಿದೆ. ಈ ಹಿನ್ನೆಲೆಯಲ್ಲಿ ಯುವ ಸಂಘಟನೆ ಈ ವರ್ಷದ ಭಗತ್ ಸಿಂಗ್ ಹುತಾತ್ಮ ದಿನಾಚರಣೆಯನ್ನು 'ಆಜಾದಿ ರ್‍ಯಾಲಿ'ಗಳನ್ನು ಮಾಡುವ ಮೂಲಕ ಆಚರಿಸಬೇಕೆಂದು ನಿರ್ಧರಿಸಿತು. ರಾಜ್ಯದ ಹಲವು ಕಡೆ ಇದನ್ನು ಸ್ಫೂರ್ತಿಯುತವಾಗಿ ಆಚರಿಸಿದ, ಎಲ್ಲೆಡೆ ಆಜಾದಿ ಘೋಷಣೆಗಳು ಮೊಳಗಿದ ವರದಿಗಳು ಬಂದಿವೆ.

'ವಸಾಹತುಶಾಹಿ ದೇಶದ್ರೋಹ ಕಾನೂನು ಕಿತ್ತು ಹಾಕಬೇಕು'

ಬೆಂಗಳೂರು: 'ದೇಶದ್ರೋಹ, ನ್ಯಾಯಾಂಗ ನಿಂದನೆಯಂತಹ ವಸಾಹತುಶಾಹಿ ಕಾಲದ ಬರ್ಬರ ಕಾನೂನುಗಳನ್ನು ಕಾನೂನು ಪುಸ್ತಕದಿಂದಲೇ ಸಂಪೂರ್ಣವಾಗಿ ತೆಗೆದು ಹಾಕುವಂತೆ ವಿದ್ಯಾರ್ಥಿ ಸಮುದಾಯ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ರಾಜ್ಯ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನ್ ದಾಸ್ ತಿಳಿಸಿದರು.

ಬೆಂಗಳೂರಿನಲ್ಲಿ ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ್ ಅವರು ಹುತಾತ್ಮರಾದ ದಿನದ ಅಂಗವಾಗಿ ಡಿವೈಎಫ್ಐ, ಎಸ್ಎಫ್ಐ ನೇತೃತ್ವದಲ್ಲಿ ವಿವಿಧ ಸಂಘಟನೆಗಳು ಸೆಂಟ್ರಲ್ ಕಾಲೇಜಿನ ಸೆನೆಟ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಆಜಾದಿ ರ್‍ಯಾಲಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇದಕ್ಕಿಂತ ಮೊದಲು ಮೈಸೂರು ಬ್ಯಾಂಕ್ ಸರ್ಕಲಿನಲ್ಲಿ (ಈಗ ಶನಿ ದೇವಾಲಯ ಆವರಿಸಿಕೊಂಡಿರುವ) 1942 ರ ಕ್ವಿಟ್ ಇಂಡಿ–ಯಾ ಚಳುವಳಿಯಲ್ಲಿ ಹುತಾತ್ಮರಾದವರ ಸ್ಮಾರಕಕ್ಕೆ ನಮನ ಸಲ್ಲಿಸಿ ನೂರಾರು ವಿದ್ಯಾರ್ಥಿ–ಯುವಜನರು ಭಾಗವಹಿಸಿದ್ದ ಆಜಾದಿ ಘೋಷಣೆಗಳನ್ನು ಮೊಳಗಿಸುತ್ತಾ ಆಜಾದಿ ರ್‍ಯಾಲಿ ಸೆನೆಟ್ ಹಾಲ್ ತಲುಪಿತು.

ಬ್ರಿಟಿಷರು ಚಳವಳಿಗಾರರನ್ನು ಹತ್ತಿಕ್ಕಲು ತಂದ ಈ ಕಾನೂನುಗಳ ಕಳೆದ ಕೆಲ ದಶಕಗಳಲ್ಲಿ ಬಳಕೆಗಿಂತ ದುರ್ಬಳಕೆಯಾಗಿರುವುದೇ ಹೆಚ್ಚು. ಆದ್ದರಿಂದ ಇಂತಹ ಕಾನೂನುಗಳಿಗೆ ತಿದ್ದುಪಡಿ, ಸುಧಾರಣೆ ತರುವ ಬದಲು ಅವುಗಳನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು' ಎಂದು ಹೇಳಿದರು.

'ಸಂವಿಧಾನದತ್ತವಾದ ಎಲ್ಲಾ ಹಕ್ಕುಗಳನ್ನು ಕ' ಳ' ದ' ು ಕ' ಊ ಳ' ್ಯ ವ' ಸಂದರ್ಭದಲ್ಲಿ ನಾವಿದ್ದೇವೆ. ಹಾಗಾಗಿ ಇವತ್ತು ಎಂತಹ ಬಟ್ಟೆ ಧರಿಸಬೇಕು, ಯಾವ ಆಹಾರ ತಿನ್ನಬೇಕು, ಯಾವ ರೀತಿ ನಡೆದುಕೊಳ್ಳಬೇಕು ಎಂದು ಇನ್ನೊಬ್ಬರು ನಿರ್ದೇಶನ ನೀಡುವ, ಫರ್ಮಾನು ಹೊರಡಿಸುವ ವಿದ್ಯಾಮಾನಗಳು ಕಾಣಿಸಿಕೊಳ್ಳುತ್ತಿವೆ. ಇಂತಹ ಸನ್ನಿವೇಶದಲ್ಲಿ ವಿದ್ಯಾರ್ಥಿಗಳು ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಿದೆ' ಎಂದು ತಿಳಿಸಿದರು.

ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ವಿದ್ಯಾರ್ಥಿ ಸಂಘದ 'ಅಂತರರಾಷ್ಟ್ರೀಯ ಅಧ್ಯಯನ' ಘಟಕದ ಸಂಚಾಲಕ ಪಿ.ಪಿ.ಅಮಲ್ ಮಾತನಾಡಿ, 'ಒಂದು ವರ್ಗದ ಸಿದ್ಧಾಂತವನ್ನು ಒತ್ತಾಯಪೂರ್ವಕವಾಗಿ ವಿದ್ಯಾರ್ಥಿಗಳು, ಯುವಜನರು, ಸಾಂಸ್ಕೃತಿಕ ಕಾರ್ಯಕರ್ತರು, ಪ್ರಗತಿಪರರ ಮೇಲೆ ಹೇರುವ ಕಾರ್ಯಗಳು ದೇಶದಲ್ಲಿ ನಡೆಯುತ್ತಿವೆ' ಎಂದು ಆರೋಪಿಸಿದರು.

'ದೇಶದಲ್ಲಿ ಹಲವು ಬಗೆಯ ರಾಷ್ಟ್ರೀಯತೆಗಳಿವೆ. ಆದರೆ ಇವತ್ತು ಎಲ್ಲರ ಮೇಲೆ ಬ್ರಾಹ್ಮಣೀಕರಣದ ರಾಷ್ಟ್ರೀಯತೆಯನ್ನು ಹೇರುವ ಪ್ರಯತ್ನಗಳು ನಡೆದಿರುವು ನಾಚಿಕೆಗೇಡಿನ ವಿಷಯ. ಪ್ರಸ್ತುತ ಸನ್ನಿವೇಶದಲ್ಲಿ ದೇಶದ ಬಹುತೇಕ ವಿಶ್ವವಿದ್ಯಾಲಯಗಳ ಆಡಳಿತ ಮಂಡಳಿಗಳು ಕೂಡ ಆಡಳಿತಾರೂಢ ಬಿಜೆಪಿ ಪರವಾಗಿ ಕೆಲಸ ಮಾಡುತ್ತಿವೆ' ಎಂದು ಹೇಳಿದರು.

ಸಭೆಯ ನಂತರ 'ದೇಶಭಕ್ತ' ಎಂಬ ಬೀದಿ ನಾಟಕವನ್ನು ಅಭಿನಯಿಸಲಾಯಿತು.

ಮಂಗಳೂರಿನಲ್ಲಿ ಉತ್ಸಾಹದ ಆಜಾದಿ ಮಾರ್ಚ್ :

ಅಭಿವೃದ್ಧಿಯ ಹೆಸರಿನಲ್ಲಿ ದೇಶವನ್ನು ಸ್ವರ್ಗವನ್ನಾಗಿ ಮಾಡುವುದಾಗಿ ಹೇಳಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿ ಮತ್ತು ಅದರ ಪರಿವಾರದ ಸಂಘಟನೆಗಳು ದೇಶದಲ್ಲಿ ಒಂದು ಭೀತಿಯ ವಾತಾವರಣವನ್ನು ಉಂಟು ಮಾಡಿದೆ. 1970ರ ದಶಕದಲ್ಲಿ ಎರಡು ವರ್ಷ ದೇಶದಲ್ಲಿ ಘೋಷಿತ ತುರ್ತು ಪರಿಸ್ಥಿತಿ ಇದ್ದರೆ, ಈಗಿನ ಬಿಜೆಪಿ ಆಡಳಿತದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಇದೆ ಎಂಬುದಾಗಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ವಿಮಲಾ ಕಳವಳ ವ್ಯಕ್ತಪಡಿಸಿದರು.

ತಾರತಮ್ಯ ಅಸಮಾನತೆಯನ್ನು ದೂರೀಕರಿಸಲು ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ಅದ್ಭುತವಾಗಿದ್ದು, ಅವರ ಹೆಸರು ಹೇಳಲು ಯೋಗ್ಯತೆ ಇಲ್ಲದವರು ದೇಶವನ್ನು ಆಳುವ ಸ್ಥಾನದಲ್ಲಿದ್ದಾರೆಂದು ಟೀಕಿಸಿದರು. ಸಂವಿಧಾನ ಒದಗಿಸಿರುವ ಹಕ್ಕು ಸ್ವಾತಂತ್ರ್ಯಗಳನ್ನು ಜಡ್ಡುಗೊಳಿಸದೇ ಬಳಸಬೇಕಾದ ಅವಶ್ಯಕತೆ ಹಿಂದೆಂದಿಗಿಂತಲೂ ಭಾರತ ಜನತೆಗೆ ಇಂದು ಅತಿ ಅವಶ್ಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮಕ್ಕೂ ಮೊದಲು ರೋಹಿತ್ ವೇಮುಲ ಕನ್ಹಯ್ಯ ಕುಮಾರರ ಆಜಾದೀ ಘೋಷಣೆಗಳೊಂದಿಗೆ ಬಹಳ ಸ್ಫೂರ್ತಿಯುತವಾದ ಆಜಾದೀ ಮಾರ್ಚ್ ಮಂಗಳೂರಿನ ಅಂಬೇಡ್ಕರ್ ವೃತ್ತದಿಂದ ಪುರಭವನದವರೆಗೆ ಸಾಗಿ ಬಂತು. ಕೆಂಪು ನಕ್ಷತ್ರದ ಬಿಳಿ ಬಾವುಟಗಳು ದಲಿತ ಸಂಘಟನೆಗಳ ನೀಲಿ ಬಾವುಟಗಳೂ ಒಟ್ಟಿಗೆ ಸಾಗಿದ್ದೂ ಜೈಭೀಮ್ ಹಾಗೂ ಲಾಲ್ ಸಲಾಮ್ ಘೋಷಣೆಗಳೂ ಜೊತೆ ಜೊತೆಗೆ ಮೊಳಗಿದ್ದೂ ಈ ಜಾಥಾದ ವಿಶೇಷವಾಗಿತ್ತು. ಯುವಜನರೂ, ಮಹಿಳೆಯರೂ ಹೆಚ್ಚಿಗೆ ಇರುವ ಅಬ್ಬರದ ಜಾಥಾ ಮಂಗಳೂರಿಗೇ ಇತ್ತೀಚೆಗೆ ವಿಶೇಷವಾಗಿತ್ತು.

ಹಾವೇರಿಯಲ್ಲಿ

ಹಾವೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಗತಿಪರ ಸಾಹಿತಿ, ಜನಪದ ತಜ್ಞರಾದ ಶ್ರೀಶೈಲ ಹುದ್ದಾರ ಮಾತನಾಡಿ ಪ್ರಸ್ತುತವಾಗಿ ಸಮಾಜದಲ್ಲಿ ಸಾಕಷ್ಟು ಸವಾಲುಗಳಿವೆ, ಸ್ವಾತಂತ್ರ್ಯ ಬಂದು 69 ವರ್ಷಗಳಾಗಿವೆ ಆದರೂಕೂಡಾದೇಶದ ಹದಗೆಟ್ಟಿರುವ ವ್ಯವಸ್ಥೆಯ ಬಗ್ಗೆ ಮಾತನಾಡುವವರು, ಪ್ರಶ್ನಿಸುವವರು ಇಲ್ಲದಾಗಿದೆ ಎಂದರು.

ಎಸ್ಎಫ್ಐ ಜಿಲ್ಲಾ ಸಮಿತಿ ಹಾಗೂ ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಹುತಾತ್ಮ ದಿನಾಚರಣೆಯ ಅಂಗವಾಗಿ "ಭಗತ್‌ಸಿಂಗ್ ಕನಸಿನ ಭಾರತ ಮತ್ತು ಪ್ರಸ್ತುತ ಭಾರತ" ಕುರಿತು ನಡೆದ ವಿಚಾರ ಸಂಕಿರಣವನ್ನು ಹುತಾತ್ಮ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾನಾಡಿದರು.

ಗಜೇಂದ್ರಗಡದಲ್ಲಿ

ಎಸ್ಎಫ್ಐನ ನಗರ ಸಮಿತಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಎಸ್.ಎಫ್.ಐ ನ ಮಾಜಿ ಮುಖಂಡರಾದ ಎಂ.ಎಸ್.ಹಡಪದ, ನಗರ ಸಮಿತಿ ಅಧ್ಯಕ್ಷರಾದ ಶಿವರಾಜ ನಾಯಕ ಕಾರ್ಯದರ್ಶಿ ಶಿವಾನಂದ ಬೋಸ್ಲೆ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯರಾದ ಶ್ರೀ ಎಸ್ ಟಿ ಭೈರಪ್ಪನವರ ಅವರು ವಹಿಸಿದ್ದರು. ಕಾಲೇಜಿನ ಉಪನ್ಯಾಸಕರು ಹಾಗೂ ಸಂಘಟನೆಯ ಮುಖಂಡರು ಹಾಜರಿದ್ದರು.

ಹುಬ್ಬಳ್ಳಿಯಲ್ಲಿ

ಹುಬ್ಬಳ್ಳಿಯಲ್ಲಿ ಡಿವೈಎಫ್ಐ ಎಸ್ಎಫ್ಐ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾರ್ಮಿಕ ಮುಖಂಡರಾದ ಮಹೇಶ ಪತ್ತಾರ, ರೈತ ಮುಖಂಡರಾದ ಬಿ.ಎಸ್.ಸೊಪ್ಪಿನ್, ಜಿಲ್ಲಾ ಸಂಚಾಲಕರಾದ ಮಾರುತಿ ಅಂಬಿಗೇರ, ವಿದ್ಯಾರ್ಥಿ ಯವಜನರ ಮುಖಂಡರಾದ ಈರಪ್ಪ ನಾಯ್ಕ, ಪಡಿಯಪ್ಪ ಹಲಗೇರಿ, ಸಾಗರ ಕೂಡಗಿ, ಪರುಶುರಾಮ ಹಲಗೇರಿ, ಈರಣ್ಣ ಮಂತ್ರಿ, ಸುರೇಶ ಬೇವಿನಮರದ, ದುರಗಪ್ಪ ಬೆಲೂರ, ರಾಘವೇಂದ್ರ ವಾಟಕರ್, ಎಂ. ಪ್ರವೀಣ, ಗುಂಡಪ್ಪ ಚವ್ಹಾಣ, ಶಿವಾನಂದ ಕಾರ್ಮಿಕ ಮುಖಂಡರಾದ ಮಹೇಶ ಪತ್ತಾರ, ಎ.ಎಸ್.ಪೀರಜಾದೆ, ಗುರುಶಿದ್ದಪ್ಪ ಅಂಬಿಗೇರ, ಮಂಜು ಹುಜರಾತಿ ಮುಂತಾದವರಿದ್ದರು.

ಹಾಸನದಲ್ಲಿ

ಹಾಸನದ ಮಹಾರಾಜ ಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಕೆಪಿಆರ್ಎಸ್ ಜಿಲ್ಲಾ ಅಧ್ಯಕ್ಷರಾದ ಹೆಚ್. ಆರ್.ನವೀನ್‌ಕುಮಾರ್‌ರವರು ಉದ್ಘಾಟಿಸಿದರು. ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದ ಎಂ.ಸಿ.ಡೋಂಗ್ರ, ಡಿವೈಎಫ್ಐನ ಜಿಲ್ಲಾ ಕಾರ್ಯದರ್ಶಿ ಎಂ.ಜಿ.ಪೃಥ್ವಿ, ಜಿಲ್ಲಾಧ್ಯಕ್ಷ ವಾಸುದೇವ್, ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ವಸಂತ್‌ಕುಮಾರ್, ತಾಲ್ಲೂಕು ಅಧ್ಯಕ್ಷ ಬಿ.ಜಿ.ರೇವಣ್ಣ, ಸಿಐಟಿಯು ಮುಕಂಡರಾದ ಸತ್ಯನಾರಾಯಣ, ಅರವಿಂದ್ ಎಸ್ಎಫ್ಐ ಮುಖಂಡರಾದ ಮಹೇಶ್, ರಮೇಶ್ ಭಾಗವಹಿಸಿ ಮಾತನಾಡಿದರು, ಎಸ್ಎಫ್ಐನ ಜಿಲ್ಲಾ ಕಾರ್ಯದರ್ಶಿ ಪ್ರದೀಪ್‌ಕುಮಾರ್ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರು ಮೊದಲಿಗೆ ಹುತಾತ್ಮ ಸಂಗಾತಿಗಳಿಗೆ ಪುಷ್ಪಾರ್ಚನೆ ಮಾಡಿ ಒಂದು ನಿಮಿಷ ಮೌನ ಆಚರಿಸುವ ಮೂಲಕ ಶ್ರದ್ದಾಂಜಲಿ ಗೌರವವನ್ನು ಸಲ್ಲಿಸಲಾಯಿತು.

ತುಮಕೂರಿನಲ್ಲಿ

ತುಮಕೂರಿನ ಜಿಲ್ಲಾಧಿಕಾರಿ ಕಛೇರಿ ಬಳಿ ಕಳೆದ 25 ದಿನಗಳಿಂದ ಧರಣಿ ನಡೆಸುತ್ತಿರುವ ವಿನಾಯಕ ಸಿಎನ್‌ಸಿ ಕಾರ್ಮಿಕರ ಪ್ರತಿಭಟನಾ ಸ್ಥಳದಲ್ಲಿ ಎಸ್ಎಫ್ಐ, ಡಿವೈಎಫ್ಐ, ಸಿಐಟಿಯು ಜಿಲ್ಲಾ ಸಮಿತಿಗಳು ಹುತಾತ್ಮ ದಿನದ ಕಾರ್ಯಕ್ರಮದಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಮಾತನಾಡಿದರು. ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾಧ್ಯಕ್ಷರಾದ ಬಿ.ಉಮೇಶ್, ಅಧ್ಯಕ್ಷಕತೆ ವಹಿಸಿದ್ದ ಜಿಲ್ಲಾ ಅಧ್ಯಕ್ಷರಾದ ಸೈಯದ್ ಮುಜೀಬ್, ಸಮಾರಂಭದಲ್ಲಿ ಡಿ.ವೈ.ಎಫ್.ನ ಜಿ.ದರ್ಶನ್, ಎಸ್ಎಫ್ಐನ ಇ.ಶಿವಣ್ಣ, ಎನ್.ಕೆ.ಸುಬ್ರಮಣ್ಯ, ದಿಶಾಲೋಕೇಶ್, ಗಿರೀಶ್, ಮಾತನಾಡಿದರು. ಸಿಐಟಿಯುನ ಷಣ್ಮುಖಪ್ಪ ಸ್ವಾಗತಿಸಿ, ಡಿ.ವೈ.ಎಫ್.ಐನ ರಾಘವೇಂದ್ರ ಭಾಗವಹಿಸಿದ್ದರು.

100 ಸುರ್ಜಿತ್ ಜನ್ಮ ಶತಮಾನೋತ್ಸವ

23 ಮಾರ್ಚ್ 1916-ಆಗಸ್ಟ್ 1, 2008

ಹದಿನಾರನೇ ವಯಸ್ಸಿನಲ್ಲೇ ಬ್ರಿಟಿಶ್ ವಸಾಹತುಶಾಹಿಗಳ ಬಾವುಟವನ್ನು ಅಕ್ಷರಶಃ ಇಳಿಸಿ ಭಾರತದ ತ್ರಿವರ್ಣ ಬಾವುಟವನ್ನು ಏರಿಸಿ, ಬ್ರಿಟಿಶರ ಗುಂಡೇಟಿನಿಂದ ಸ್ವಲ್ಪದರಲ್ಲೇ ಪಾರಾದ, ನಂತರ ಬ್ರಿಟಿಶ್ ಜೈಲುಗಳಲ್ಲಿ ಚಿತ್ರಹಿಂಸೆಗೂ ಎದೆ–ಯೊಡ್ಡಿ ನಿಂತ ಹರ್ಕಿಶನ್ ಸಿಂಗ್ ಸುರ್ಜಿತ್, ಮುಂದೆ ಸ್ವತಂತ್ರ ಭಾರತದಲ್ಲೂ ಅಷ್ಟೇ ಎದೆಗಾರಿಕೆಯಿಂದ ಆಧುನಿಕ ಭಾರತೀಯ ಗಣತಂತ್ರದ ಅಡಿಗಲ್ಲಾದ ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವದ ರಕ್ಷಣೆಯ ಹೋರಾಟಕ್ಕೆ ನೇತೃತ್ವ ನೀಡಿದವರು.

ಪಂಜಾಬಿನಲ್ಲಿ ರೈತರನ್ನು ಸಂಘಟಿಸುವುದರೊಂದಿಗೆ ತಮ್ಮ ಸಾರ್ವಜನಿಕ ಜೀವನವನ್ನು ಆರಂಭಿಸಿದ ಸುರ್ಜಿತ್ ಮುಂದೆ 1974ರಿಂದ 1989ರ ವರೆಗೆ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಯಾಗಿ, ನಂತರ 1992 ರ ವರೆಗೆ ಅಧ್ಯಕ್ಷರಾಗಿ ಭಾರತದ ರೈತ ಆಂದೋಲನವನ್ನು ಕಟ್ಟಿ ಬೆಳೆಸಿದರು. 1992ರಿಂದ 2004ರ ವರೆಗೆ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿಯಾಗಿ ಸ್ವತಂತ್ರ ಭಾರತದ ಇತಿಹಾಸದ ಈ ತಿರುವಿನಲ್ಲಿ ಪ್ರಭಾವಶಾಲಿ ಪಾತ್ರ ವಹಿಸಿದರು.





JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**